بِسۡمِ اللّٰہِ الرَّحۡمٰنِ الرَّحِیۡمِ　　نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ　　وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.

ಸಂಪುಟ: 07, ಸಂಚಿಕೆ: 25, 18 ಜೂನ್ 2026, 18 ಇಹ್ಸಾನ್ 1405 ಹಿಜರಿ ಶಮ್ಸಿ,
02 ಮುಹರ್ರಮ್ 1447 ಹಿಜರಿ ಖಮರಿ. (www.akhbarbadr.in)

## ಅಲ್ಲಾಹನ ಉಪದೇಶ — ಪವಿತ್ರ ಖುರ್‌ಆನ್ ರಕ್ಷಾ ಮಾರ್ಗದೆಡೆಗೆ ದಾರಿ ತೋರಿಸುತ್ತದೆ.

يٰۤاَهۡلَ الۡکِتٰبِ قَدۡ جَآءَکُمۡ رَسُوۡلُنَا یُبَیِّنُ لَکُمۡ کَثِیۡرًا مِّمَّا کُنۡتُمۡ تُخۡفُوۡنَ مِنَ الۡکِتٰبِ وَ یَعۡفُوۡا عَنۡ کَثِیۡرٍ ؕ قَدۡ جَآءَکُمۡ مِّنَ اللّٰہِ نُوۡرٌ وَّ کِتٰبٌ مُّبِیۡنٌ ﴿۱۶﴾ یَّہۡدِیۡ بِہِ اللّٰہُ مَنِ اتَّبَعَ رِضۡوَانَہٗ سُبُلَ السَّلٰمِ وَ یُخۡرِجُہُمۡ مِّنَ الظُّلُمٰتِ اِلَی النُّوۡرِ بِاِذۡنِہٖ وَ یَہۡدِیۡہِمۡ اِلٰی صِرَاطٍ مُّسۡتَقِیۡمٍ ﴿۱۷﴾

(ಅಲ್‌ಮಾಇದಃ: 16–17)

ಅಂದರೆ: ಎಲೈ ಗ್ರಂಥದವರೇ, ಗ್ರಂಥದಲ್ಲಿ ನೀವು ಮರೆಮಾಚಿಟ್ಟಿದ್ದ ಅನೇಕ ವಿಚಾರಗಳನ್ನು ನಿಮಗೆ ಬಹಿರಂಗಪಡಿಸುವ ಮತ್ತು ಹಲವು ಸಂಗತಿಗಳನ್ನು (ನಿಮಗೆ) ಕ್ಷಮಿಸಿಕೊಡುವ ನಮ್ಮ ಸಂದೇಶವಾಹಕ ನಿಮ್ಮೆಡೆಗೆ ಬಂದಿದ್ದಾರೆ. ನಿಶ್ಚಯವಾಗಿಯೂ ಅಲ್ಲಾಹನಿಂದ ಒಂದು ಪ್ರಕಾಶ ಮತ್ತು ಸ್ಪಷ್ಟವಾದೊಂದು ಗ್ರಂಥ ನಿಮಗೆ ಬಂದಿರುತ್ತದೆ.
ಅದರ ಮೂಲಕ ಅಲ್ಲಾಹನು ತನ್ನ ಸಂಪ್ರೀತಿಯನ್ನು ಬಯಸುವವರಿಗೆ ರಕ್ಷಾ ಮಾರ್ಗದೆಡೆಗೆ ದಾರಿ ತೋರಿಸುತ್ತಾನೆ; ತನ್ನ ಇಚ್ಛಾನುಸಾರ ಅವನು ಅವರನ್ನು ಅಂಧಕಾರಗಳಿಂದೆಲ್ಲ ಹೊರಗೆ ತಂದು ಪ್ರಕಾಶದೆಡೆಗೆ ಕೊಂಡೊಯ್ಯುತ್ತಾನೆ ಹಾಗೂ ಅವರಿಗೆ ಸತ್ಪಥದೆಡೆಗೆ ದಾರಿ ತೋರಿಸುತ್ತಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ — ಇಸ್ಲಾಂ ಧರ್ಮದ ಸಾರ್ವತ್ರಿಕ ಸಂದೇಶ ಸಮಾನತೆ ಮತ್ತು ಸಹೋದರತ್ವ.

عَنۡ اَبِیۡ نَضۡرَۃَ حَدَّثَنِیۡ مَنۡ سَمِعَ خُطۡبَۃَ رَسُوۡلِ اللّٰہِ صَلَّی اللّٰہُ عَلَیۡہِ وَسَلَّمَ فِیۡ وَسۡطِ اَیَّامِ التَّشۡرِیۡقِ فَقَالَ یَاۤ اَیُّہَا النَّاسُ اَلَاۤ اِنَّ رَبَّکُمۡ وَاحِدٌ وَاِنَّ اَبَاکُمۡ وَاحِدٌ ، اَلَا لَا فَضۡلَ لِعَرَبِیٍّ عَلٰی عَجَمِیٍّ وَلَا لِعَجَمِیٍّ عَلٰی عَرَبِیٍّ وَلَا لِاَحۡمَرَ عَلٰی اَسۡوَدَ وَلَا اَسۡوَدَ عَلٰی اَحۡمَرَ اِلَّا بِالتَّقۡوٰی اَبَلَّغۡتُ ؟ قَالُوۡا بَلَّغَ رَسُوۡلُ اللّٰہِ صَلَّی اللّٰہُ عَلَیۡہِ وَسَلَّمَ ۔ ثُمَّ قَالَ : اَیُّ یَوۡمٍ ہٰذَا ؟ قَالُوۡا : یَوۡمٌ حَرَامٌ ، قَالَ : اَیُّ شَہۡرٍ ہٰذَا ؟ قَالُوۡا : شَہۡرٌ حَرَامٌ ، قَالَ : ثُمَّ اَیُّ بَلَدٍ ہٰذَا ؟ قَالُوۡا : بَلَدٌ حَرَامٌ ، قَالَ : فَاِنَّ اللّٰہَ قَدۡ حَرَّمَ بَیۡنَکُمۡ دِمَآءَکُمۡ وَاَمۡوَالَکُمۡ ، قَالَ : وَلَا اَدۡرِیۡ ، قَالَ اَوۡ بَلَدَکُمۡ ہٰذَا ۔ اَبَلَّغۡتُ ؟ قَالُوۡا : بَلَّغَ رَسُوۡلُ اللّٰہِ صَلَّی اللّٰہُ عَلَیۡہِ وَسَلَّمَ قَالَ : لِیُبَلِّغِ الشَّاہِدُ الۡغَائِبَ۔

ಅಬು ನಝ್ರಾ(ರ) ವರದಿ ಮಾಡುತ್ತಾರೆ: ಮಿನಾ ಕಾಲದಲ್ಲಿ ಹಝ್ರತ್ ಪೈಗಂಬರ್(ಸ) ಅವರ ಖುತ್‌ಬ ಹಜ್ಜತುಲ್ ವಿದಾಯತ (ವಿದಾಯ ಧರ್ಮೋಪದೇಶ) ವನ್ನು ಆಲಿಸಿದ ಒಬ್ಬ ವ್ಯಕ್ತಿ ಆ ಖುತ್‌ಬದಲ್ಲಿ ಹುಝೂರ್(ಸ)ರು ಹೀಗೆ ಹೇಳಿದ್ದಾಗಿ ನನಗೆ ಹೇಳಿದರು: ಓ ಜನರೇ! ನಿಮ್ಮ ದೇವರು ಒಬ್ಬನೇ, ನಿಮ್ಮ ತಂದೆಯೂ ಒಬ್ಬನೇ. ನೆನಪಿಡಿ, ಅರಬ್ಬರಿಗೆ ಅರಬ್ಬೇತರರಿಗಿಂತ, ಅರಬ್ಬೇತರರಿಗೆ ಅರಬ್ಬರಿಗಿಂತ, ಕೆಂಪು ಮತ್ತು ಬಿಳಿ ವ್ಯಕ್ತಿಗಳಿಗೆ ಕಪ್ಪು ವ್ಯಕ್ತಿಗಿಂತ, ಕಪ್ಪು ವ್ಯಕ್ತಿಗಳಿಗೆ ಕೆಂಪು ಮತ್ತು ಬಿಳಿ ವ್ಯಕ್ತಿಗಿಂತ ಯಾವುದೇ ಶ್ರೇಷ್ಠತೆಯಿಲ್ಲ. ಹೌದು, ಧರ್ಮನಿಷ್ಠೆ ಮತ್ತು ಸಾಮರ್ಥ್ಯಗಳು ಆದ್ಯತೆ ಮತ್ತು ಶ್ರೇಷ್ಠತೆಗೆ ಕಾರಣಗಳಾಗಿವೆ. ನಾನು ಈ ಪ್ರಮುಖ ಸಂದೇಶವನ್ನು ತಿಳಿಸಿದ್ದೇನೆಯೇ? ಅದಕ್ಕೆ ಜನರು (ಜೋರಾಗಿ) ಹೇಳಿದರು, ಹೌದು, ಅಲ್ಲಾಹನ ಸಂದೇಶವಾಹಕರು(ಸ) ಈ ಸತ್ಯದ ಸಂದೇಶವನ್ನು ಉತ್ತಮವಾಗಿ ತಿಳಿಸಿದ್ದಾರೆ. ನಂತರ ಅವರು(ಸ), “ಇದು ಯಾವ ದಿನ?” ಎಂದು ಪ್ರಶ್ನಿಸಿದರು, ಅದಕ್ಕೆ ಜನರು, “ಹಜ್ ದಿನಗಳು” ಎಂದು ಉತ್ತರಿಸಿದರು. ನಂತರ ಅವರು(ಸ), “ಇದು ಯಾವ ತಿಂಗಳು?” ಎಂದು ಕೇಳಿದರು, ಜನರು, “ಇದು ದುಲ್–ಹಿಜ್ಜಾ ತಿಂಗಳು” ಎಂದು ಉತ್ತರಿಸಿದರು. ನಂತರ ಅವರು, “ಇದು ಯಾವ ನಗರ?” ಎಂದು ಕೇಳಿದರು. ಜನರು, ಇದು ಒಂದು ಶ್ರೇಷ್ಠ ಮತ್ತು ಗೌರವಾನ್ವಿತ ನಗರ (ಮಕ್ಕಾ) ಎಂದು ಹೇಳಿದರು. ಅದಕ್ಕೆ ಹಝ್ರತ್ ಪೈಗಂಬರ್(ಸ)ರು ಹೇಳಿದರು, “ಈ ದಿನ, ಈ ತಿಂಗಳು ಮತ್ತು ಈ ನಗರವು ಗೌರವಾನ್ವಿತವಾಗಿರುವಂತೆಯೇ ನಿಮ್ಮ ಜೀವನ ಮತ್ತು ನಿಮ್ಮ ಸಂಪತ್ತು (ವರದಿಗಾರರು ಗೌರವದ ಬಗ್ಗೆ ಹೇಳಿದ್ದಾರೋ ಇಲ್ಲವೋ ಎಂದು ನೆನಪಿಲ್ಲ) ಗೌರವಕ್ಕೆ ಅರ್ಹವಾಗಿವೆ, (ಅಂದರೆ, ನೀವು ಅವುಗಳನ್ನು ಅಗೌರವಿಸುವ ಬಗ್ಗೆ ಯೋಚಿಸಲು ಸಹ ಸಾಧ್ಯವಿಲ್ಲದಂತೆಯೇ, ಜನರ ಜೀವನವನ್ನು, ಅವರ ಆಸ್ತಿ ಮತ್ತು ಅವರ ಗೌರವವನ್ನು ಅಗೌರವಿಸುವುದು ಸಹ ಕಾನೂನುಬಾಹಿರವಾಗಿದೆ.) ನಂತರ ಅವರು(ಸ) ಕೇಳಿದರು, “ನಾನು ಈ ಪ್ರಮುಖ ಸಂದೇಶವನ್ನು ತಿಳಿಸಿದ್ದೇನೆಯೇ?” ಅದಕ್ಕೆ ಜನರು ಉತ್ತರಿಸಿದರು, “ಹೌದು, ಅಲ್ಲಾಹನ ಸಂದೇಶವಾಹಕರು ಎಲ್ಲವನ್ನೂ ತಿಳಿಸಿದ್ದಾರೆ.” ಅವರು(ಸ) ಹೇಳಿದರು, “ಇಲ್ಲಿರುವವರು ಇಲ್ಲಿ ಇಲ್ಲದವರಿಗೆ ಈ ಸಂದೇಶವನ್ನು ತಿಳಿಸಬೇಕು.”

**(ಮುಸ್ನದ್ ಅಹ್ಮದ್, ಸಂಪುಟ–5, ಪುಟ–411)**

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅಧ್ಯಾಪನೆ — ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಯಲ್ಲಿ ಜನಾಂಗೀಯತೆಯ ಪರಿಗಣನೆ ಇಲ್ಲ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಯಲ್ಲಿ ನಿಮ್ಮಲ್ಲಿ ಹೆಚ್ಚು ಧರ್ಮನಿಷ್ಠನಾಗಿರುವವನು ನಿಮಗಿಂತ ಹೆಚ್ಚು ಗೌರವಾನ್ವಿತನಾಗಿರುತ್ತಾನೆ. ನಾನು ಸೈಯದ್ ಅಥವಾ ಮೊಘಲ್ ಅಥವಾ ಪಠಾಣ್ ಅಥವಾ ಶೇಖ್ ಎಂದು ಹೇಳಿಕೊಳ್ಳುವುದು ಸಂಪೂರ್ಣ ಸುಳ್ಳಾಗಿದೆ. ಒಬ್ಬ ವ್ಯಕ್ತಿಯು ಶ್ರೇಷ್ಠ ಜನಾಂಗೀಯತೆಯ ಬಗ್ಗೆ ಹೆಮ್ಮೆಪಡುತ್ತಿದ್ದರೆ, ಈ ಹೆಮ್ಮೆ ನಿಷ್ಪ್ರಯೋಜಕವಾಗಿದೆ. ಮರಣದ ನಂತರ, ಎಲ್ಲವೂ ನರಕಕ್ಕೆ ಹೋಗುತ್ತದೆ. ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಯಲ್ಲಿ ಜನಾಂಗೀಯತೆಯ ಪರಿಗಣನೆ ಇಲ್ಲ ಮತ್ತು ಅವನು ಉದಾತ್ತ ಕುಟುಂಬದಿಂದ ಬಂದವನು ಎಂಬ ಕಾರಣಕ್ಕಾಗಿ ಯಾರೂ ಉಳಿಸಲ್ಪಡಲು ಸಾಧ್ಯವಿಲ್ಲ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಹಝ್ರತ್ ಫಾತಿಮಾಗೆ ಹೇಳಿದರು, “ಓ ಫಾತಿಮಾ! ನೀನು ಪ್ರವಾದಿಯ ಪುತ್ರಿ ಎಂದು ಹೆಮ್ಮೆಪಡಬೇಡ. ದೇವರ ಸನ್ನಿಧಿಯಲ್ಲಿ, ಜನಾಂಗೀಯತೆ ಅಪ್ರಸ್ತುತವಾಗುತ್ತದೆ. ಅಲ್ಲಿ ನೀಡಲಾಗುವ ಶ್ರೇಣಿಗಳನ್ನು ಧರ್ಮನಿಷ್ಠೆಯ (ತಖ್ವ) ದೃಷ್ಟಿಯಿಂದ ನೀಡಲಾಗುತ್ತದೆ. ಈ ಜನಾಂಗಗಳು ಮತ್ತು ಗೋತ್ರಗಳು ಪ್ರಪಂಚದ ಪದ್ಧತಿಗಳು ಮತ್ತು ವ್ಯವಸ್ಥೆಗಳಾಗಿವೆ. ಅವು ಸರ್ವಶಕ್ತನಾದ ಅಲ್ಲಾಹನೊಂದಿಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ. ಸರ್ವಶಕ್ತನಾದ ಅಲ್ಲಾಹನ ಪ್ರೀತಿ ಧರ್ಮನಿಷ್ಠೆಯಿಂದ ಉದ್ಭವಿಸುತ್ತದೆ ಮತ್ತು ಧರ್ಮನಿಷ್ಠೆಯು ಉನ್ನತ ಹುದ್ದೆಗಳಿಗೆ ಕಾರಣವಾಗಿದೆ.”

**(ಅಲ್–ಹಕಮ್, ಸಂಪುಟ–6, ಸಂಖ್ಯೆ–37, ದಿನಾಂಕ 1/17 ಅಕ್ಟೋಬರ್ 1902, ಪುಟ–7)**

❀❀❀

## ತಫ್ಸೀರ್ ಕಬೀರ್‌ನಿಂದ ಉಲ್ಲೇಖ — ಹಝ್ರತ್ ಪೈಗಂಬರ್(ಸ)ರು ಕ್ರೈಸ್ತ ಜನಾಂಗಕ್ಕೆ ಮಸೀದಿಯಲ್ಲಿ ಆರಾಧಿಸಲು ಅವಕಾಶ ನೀಡಿದರು

ಸಯ್ಯಿದುನಾ ಹಝ್ರತ್ ಅಲ್–ಮುಸ್ಲೆಹ್ ಅಲ್–ಮೌಊದ್ ಖಲೀಫತುಲ್–ಮಸೀಹ್ ಅಲ್–ಸಾನಿ(ರ) ಅವರು ಇಸ್ಲಾಂ ಧರ್ಮದ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರ ಧಾರ್ಮಿಕ ಸಹಿಷ್ಣುತೆಯನ್ನು ಉಲ್ಲೇಖಿಸುತ್ತಾ ಹೇಳುತ್ತಾರೆ:

“ಅವರು(ಸ) ಧಾರ್ಮಿಕ ಸಹಿಷ್ಣುತೆಗೆ ಹೆಚ್ಚಿನ ಒತ್ತು ನೀಡುತ್ತಿದ್ದರು ಮತ್ತು ಈ ವಿಷಯದಲ್ಲಿ ಅವರು ಉನ್ನತ ಮಟ್ಟದ ಮಾದರಿಯನ್ನು ಹೊಂದಿದ್ದರು. ಯೆಮೆನ್‌ನಿಂದ ಒಂದು ಕ್ರಿಶ್ಚಿಯನ್ ಗೋತ್ರವು ಅವರ ಕೆಲವು ಮಹಾನ್ ಪುರೋಹಿತರನ್ನು ಒಳಗೊಂಡಂತೆ ಧಾರ್ಮಿಕ ಚರ್ಚೆಗಳಿಗಾಗಿ ನಿಮ್ಮ ಬಳಿಗೆ ಬಂದಿದ್ದರು. ಮಸೀದಿಯಲ್ಲಿ ಕುಳಿತಾಗ ಸಂಭಾಷಣೆ ಪ್ರಾರಂಭವಾಯಿತು ಮತ್ತು ದೀರ್ಘವಾಯಿತು. ಇದರ ಬಗ್ಗೆ, ಈ ಕಾರವಾನ್‌ನ ಪಾದ್ರಿ ಹೇಳಿದರು, ಈಗ ನಮ್ಮ ಪ್ರಾರ್ಥನೆಯ ಸಮಯವಾಗಿದೆ. ನಾವು ಹೊರಗೆ ಹೋಗಿ ನಮ್ಮ ಪ್ರಾರ್ಥನೆಯನ್ನು ಸಲ್ಲಿಸೋಣ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು, “ಹೊರಗೆ ಹೋಗಬೇಕಾದ ಅಗತ್ಯವೇನು? ನಮ್ಮ ಮಸೀದಿಯಲ್ಲಿ ನೀವು ನಿಮ್ಮ ಪ್ರಾರ್ಥನೆಯನ್ನು ಸಲ್ಲಿಸಿರಿ. ನಮ್ಮ ಮಸೀದಿಯನ್ನು ದೇವರ ಸ್ಮರಣೆಗಾಗಿಯೇ ನಿರ್ಮಿಸಲಾಗಿದೆ.”

**(ದೀಬಾಚ ತಫ್ಸೀರ್ ಅಲ್–ಖುರ್‌ಆನ್, ಪುಟ–404)**


### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

ಹುಝೂರ್ ಅನ್ವರ್(ಅತಬಿಅ) ಅವರ ಶಾಂತಿ, ನ್ಯಾಯ ಮತ್ತು ಪರಸ್ಪರ ಗೌರವದ ಸ್ಥಿರ ಸಂದೇಶವು ಪ್ರಪಂಚದಾದ್ಯಂತ ಪರಿಣಾಮ ಬೀರುತ್ತಿದೆ

GREG STAFFORD MP

**16ನೇ ಮೇ 2026 ರಂದು ಅಹ್ಮದಿಯಾ ಜಮಾಅತ್ ಯುಕೆಯ 19 ನೇ ಶಾಂತಿ ವಿಚಾರ ಸಂಕಿರಣ**




16ನೇ ಮೇ 2026 ರಂದು ಇಸ್ಲಾಮಾಬಾದ್‌ನ ಐವಾನ್ ಮಸ್ರೂರ್‌ನಲ್ಲಿ ಅಹ್ಮದಿಯಾ ಜಮಾಅತ್ ಯುಕೆಯ 19 ನೇ ಶಾಂತಿ ವಿಚಾರ ಸಂಕಿರಣವು ನಡೆಯಿತು ಮತ್ತು ಸಯ್ಯಿದುನಾ ಹಝ್ರ‌ತ್ ಅಮೀರುಲ್ ಮು'ಮಿನೀನ್ ಖಲೀಫತುಲ್ ಮಸೀಹ್ ಅಲ್-ಖಾಮಿಸ್(ಅತಬಿಅ) ಅವರು ತಮ್ಮ ವಿಶ್ವಾಸವರ್ಧಕ ಭಾಷಣದಿಂದ ಪ್ರೇಕ್ಷಕರನ್ನು ಅಲಂಕರಿಸಿದರು. ಹುಝೂರ್ ಅನ್ವರ್(ಅತಬಿಅ) ಅವರ ಭಾಷಣದ ಸಾರಾಂಶವನ್ನು ಹಿಂದಿನ ಪ್ರಕಟಣೆಯಲ್ಲಿ ಪ್ರಸ್ತುತಪಡಿಸಲಾಗಿದೆ. ಶಾಂತಿ ವಿಚಾರ ಸಂಕಿರಣದ ಉಳಿದ ವರದಿಯನ್ನು ಈ ಸಂಚಿಕೆಯಲ್ಲಿ ಅಲ್-ಫ಼ಝ್ಲ್ ಇಂಟರ್‌ನ್ಯಾಷನಲ್‌ನ ಧನ್ಯವಾದಗಳೊಂದಿಗೆ 2026 ಮೇ 24 ರಂದು ಪ್ರಸ್ತುತಪಡಿಸಲಾಗುತ್ತಿದೆ. ಕೆಳಗಿನ ಚಿತ್ರದಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ಗ್ರೆಗೋಯಿರ್ ಅಹೋಂಗ್‌ಬೊನಾನ್‌ಗೆ ಅಹ್ಮದಿಯಾ ಶಾಂತಿ ಪ್ರಶಸ್ತಿಯನ್ನು ಪ್ರದಾನ ಮಾಡುತ್ತಿದ್ದಾರೆ.

ಆಫ್ರಿಕಾದ ಬೆನಿನ್‌ನ ಗ್ರೆಗೋಯಿರ್ ಅಹೋಂಗ್‌ಬೊನಾನ್ ಅವರನ್ನು 2025 ರ ಅಹ್ಮದೀಯಾ ಶಾಂತಿ ಪ್ರಶಸ್ತಿ ವಿಜೇತ ಎಂದು ಘೋಷಿಸಲಾಗಿದೆ. ಪಶ್ಚಿಮ ಆಫ್ರಿಕಾದಲ್ಲಿ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವ ಜನರ ಆರೈಕೆ ವ್ಯವಸ್ಥೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಲು ಅವರು ಮಾಡಿದ ಪ್ರಯತ್ನಗಳನ್ನು ಗುರುತಿಸಿ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಯಿತು. ಅವರ ಪ್ರಯತ್ನಗಳ ಕುರಿತು ಒಂದು ಸಣ್ಣ ವೀಡಿಯೊವನ್ನು ಸಹ ತೋರಿಸಲಾಯಿತು, ನಂತರ ಅವರು ಹುಝೂರ್ ಅನ್ವರ್(ಅತಬಿಅ) ಅವರ ಅನುಗ್ರಹದಾಯಕ ಹಸ್ತದಿಂದ ಪ್ರಶಸ್ತಿ ಮತ್ತು ಹತ್ತು ಸಾವಿರ ಪೌಂಡ್‌ಗಳ ಬಹುಮಾನ ಚೆಕ್ ಅನ್ನು ಪಡೆದರು. ನಂತರ, ಅವರು ಪ್ರವಚನಪೀಠಕ್ಕೆ ಬಂದು ಫ್ರೆಂಚ್ ಭಾಷೆಯಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು, ಅದನ್ನು ಇಂಗ್ಲಿಷ್‌ಗೆ ಅನುವಾದಿಸಲಾಯಿತು. ಪ್ರಶಸ್ತಿಯನ್ನು ಸ್ವೀಕರಿಸಿದ್ದಕ್ಕಾಗಿ ಅವರು ತಮ್ಮ ಆಳವಾದ ಕೃತಜ್ಞತೆಯನ್ನು ವ್ಯಕ್ತಪಡಿಸಿದರು ಮತ್ತು ಪಶ್ಚಿಮ ಆಫ್ರಿಕಾದಲ್ಲಿ ಮಾನಸಿಕ ಅಸ್ವಸ್ಥ ಸಮಸ್ಯೆಗಳನ್ನು ಪ್ರಸ್ತಾಪಿಸಿದರು. ಅಂತಿಮವಾಗಿ, ಅವರು ಹುಝೂರ್ ಅನ್ವರ್(ಅತಬಿಅ) ಮತ್ತು ಅಹ್ಮದೀಯಾ ಮುಸ್ಲಿಂ ಜಮಾಅತ್ತಿಗೆ ಕೃತಜ್ಞತೆಗಳನ್ನು ಅರ್ಪಿಸಿದರು.

**ಸ್ವಾಗತ ಭಾಷಣ ಮತ್ತು ಗಣ್ಯರಿಂದ ಸಣ್ಣ ಭಾಷಣಗಳು**

ಹುಝೂರ್ ಅನ್ವರ್(ಅತಬಿಅ) ಅವರ ಭಾಷಣದ ಮೊದಲು, ಗೌರವಾನ್ವಿತ ಅಮೀರ್ ಸಾಹಿಬ್ ಯುಕೆ ಸ್ವಾಗತ ಭಾಷಣ ಮಾಡಿದರು, ಆದರೆ ಇತರ ಕೆಲವು ಗಣ್ಯ ಅತಿಥಿಗಳು ಸಣ್ಣ ಭಾಷಣಗಳನ್ನು ಮಾಡಿದರು, ಅದರ ವಿವರಗಳನ್ನು ಕೆಳಗೆ ನೀಡಲಾಗಿದೆ.

**ಸ್ವಾಗತ ಭಾಷಣ: ಗೌರವಾನ್ವಿತ ರಫೀಕ್ ಅಹ್ಮದ್ ಹಯಾತ್ ಸಾಹಿಬ್ (ಯುಕೆಯ ಅಹ್ಮದಿಯಾ ಜಮಾಅತ್ತಿನ ಅಮೀರ್)**

ಎಲ್ಲರನ್ನೂ ಸ್ವಾಗತಿಸಿದ ನಂತರ, ಗೌರವಾನ್ವಿತ ಅಮೀರ್ ಸಾಹಿಬ್ ಅವರು ಇಂದು ವಿವಿಧ ಹಂತಗಳ ಮತ್ತು ಸಂಸ್ಥೆಗಳ ಸ್ನೇಹಿತರು ಇಲ್ಲಿ ಒಟ್ಟುಗೂಡಿದ್ದಾರೆ ಎಂದು ಹೇಳಿದರು. ನಾವು ಜಗತ್ತಿನಲ್ಲಿ ಶಾಶ್ವತ ಶಾಂತಿಯನ್ನು ಸ್ಥಾಪಿಸಲು ಬಯಸಿದರೆ, ಎಲ್ಲರೂ ಏಕತೆ, ಸಾಮರಸ್ಯ ಮತ್ತು ಪರಸ್ಪರ ಗೌರವವನ್ನು ಉತ್ತೇಜಿಸಲು ಒಟ್ಟಾಗಿ ಕೆಲಸ ಮಾಡಬೇಕು.

ಜಗತ್ತು ಪ್ರಸ್ತುತ ಬಹಳ ಸೂಕ್ಷ್ಮ ಮತ್ತು ಅಪಾಯಕಾರಿ ಅವಧಿಯನ್ನು ದಾಟುತ್ತಿದೆ. ಪ್ರಪಂಚದ ಅನೇಕ ಭಾಗಗಳಲ್ಲಿ ಅಶಾಂತಿ ಮತ್ತು ಸಂಘರ್ಷವಿದೆ. ಮಕ್ಕಳು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ ಮತ್ತು ರಾಷ್ಟ್ರಗಳು ಪರಸ್ಪರ ಭಿನ್ನಾಭಿಪ್ರಾಯಗಳು ಮತ್ತು ಸಂಘರ್ಷಗಳಲ್ಲಿ ತೊಡಗಿವೆ.

ಹಝ್ರ‌ತ್ ಖಲೀಫತುಲ್ ಮಸೀಹ್ ಅವರು ಬ್ರಿಟಿಷ್ ಸಂಸತ್ತು, ಯುರೋಪಿಯನ್ ಸಂಸತ್ತು, ವಾಷಿಂಗ್ಟನ್ ಡಿಸಿಯ ಕ್ಯಾಪಿಟಲ್ ಹಿಲ್, ಕೆನಡಾ ಸಂಸತ್ತು, ಡಚ್ ಸಂಸತ್ತು ಮತ್ತು ನ್ಯೂಜಿಲೆಂಡ್ ಸಂಸತ್ತು ಸೇರಿದಂತೆ ಪ್ರಪಂಚದಾದ್ಯಂತದ ಅನೇಕ ಪ್ರಮುಖ ವೇದಿಕೆಗಳಲ್ಲಿ ಶಾಂತಿ ಮತ್ತು ನ್ಯಾಯದ ಕುರಿತು ಭಾಷಣಗಳನ್ನು ನೀಡಿದ್ದಾರೆ.

ಅದೇ ರೀತಿ, ಹುಝೂರ್ ಅನ್ವರ್(ಅತಬಿಅ) ಅವರು ವಿಶ್ವ ನಾಯಕರಿಗೆ ವೈಯಕ್ತಿಕ ಪತ್ರಗಳನ್ನು ಬರೆದಿದ್ದಾರೆ, ಅದರಲ್ಲಿ ಜಗತ್ತು ಮತ್ತಷ್ಟು ವಿನಾಶದತ್ತ ಸಾಗದಂತೆ ನ್ಯಾಯವನ್ನು ಸ್ಥಾಪಿಸುವಂತೆ ಒತ್ತಾಯಿಸಿದ್ದಾರೆ.

ಹೆಚ್ಚುತ್ತಿರುವ ಅನಿಶ್ಚಿತತೆ ಮತ್ತು ಭಯದ ಈ ಅಪಾಯಕಾರಿ ಕಾಲದಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರ ಶಾಂತಿ, ಸಾಮರಸ್ಯ ಮತ್ತು ನ್ಯಾಯದ ಸಂದೇಶವು ಎಂದಿಗಿಂತಲೂ ಹೆಚ್ಚು ಮುಖ್ಯ ಮತ್ತು ತುರ್ತಾಗಿದೆ.

ಮಹಿಳೆಯರೇ ಮತ್ತು ಮಹನೀಯರೇ! ಇತಿಹಾಸವು ನಮಗೆ ಕಲಿಸುತ್ತದೆ ಮತ್ತು ಹುಝೂರ್ ಅನ್ವರ್(ಅತಬಿಅ) ನಮಗೆ ಪದೇ ಪದೇ ನೆನಪಿಸುತ್ತಾರೆ, ಶಾಶ್ವತ ಶಾಂತಿಯನ್ನು ಬಲದ ಮೂಲಕ ಸಾಧಿಸಲು ಸಾಧ್ಯವಿಲ್ಲ, ಆದರೆ ನ್ಯಾಯ, ಸಮಗ್ರತೆ ಮತ್ತು ಪರಸ್ಪರ ಗೌರವದ ಮೂಲಕ ಮಾತ್ರ ಸಾಧಿಸಬಹುದು.

ನಾವು ಶಾಂತಿಯುತ ಜಗತ್ತನ್ನು ನೋಡಬೇಕಾದರೆ, ನ್ಯಾಯವನ್ನು ಎಲ್ಲಾ ಜನರು ಮತ್ತು ಎಲ್ಲಾ ರಾಷ್ಟ್ರಗಳಿಗೆ ಸಮಾನವಾಗಿ ಅನ್ವಯಿಸಬೇಕು.

*(ಪುಟ ಸಂಖ್ಯೆ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

## ಹಝ್ರತ್ ಪೈಗಂಬರ್(ಸ)ರ ಸತ್ಯಸಂಧತೆ, ಪ್ರಾಮಾಣಿಕತೆ ಮತ್ತು ಸತ್ಯನಿಷ್ಠೆಯ ಗುಣಗಳ ಹಿನ್ನೆಲೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಜೀವನ ಚರಿತ್ರೆಯ ವಿಶ್ವಾಸವರ್ಧಕ ವಿವರಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **24-04-2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّآ إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಪೈಗಂಬರ್(ಸ)ರ ಸತ್ಯಸಂಧತೆಯ ಅತ್ಯುನ್ನತ ಗುಣಮಟ್ಟದ ಕುರಿತಾಗಿ ಅವರ ಅತ್ಯುತ್ತಮ ಮಾದರಿ ಮತ್ತು ಸತ್ಯವಿಶ್ವಾಸಿಗಳಿಗೆ ನೀಡಿದ ಉಪದೇಶ ಹಾಗೂ ಮಾರ್ಗದರ್ಶನಗಳ ಬಗ್ಗೆ ಕಳೆದ ಖುತ್ಬದಲ್ಲಿ ವಿವರಿಸಲಾಗಿತ್ತು. ಈ ಕುರಿತು ನಾನು ಮತ್ತಷ್ಟು ವಿವರಿಸುತ್ತೇನೆ.

ಹಝ್ರತ್ ಪೈಗಂಬರ್(ಸ) ನಮ್ಮನ್ನು ಸತ್ಯಸಂಧತೆಯ ಯಾವ ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಬಯಸುತ್ತಾರೆ ಎಂಬುದರ ಕುರಿತು ಒಂದು ವರದಿಯಿದೆ. ಹಫ್ಸ್ ಬಿನ್ ಆಸಿಮ್‌ರಿಂದ ವರದಿಯಾಗಿದೆ, ಹಝ್ರತ್ ಪೈಗಂಬರ್(ಸ) ಹೇಳಿದರು:

ಮನುಷ್ಯನು ಸುಳ್ಳುಗಾರನಾಗಲು, ತಾನು ಅಲ್ಲಿಂದ ಇಲ್ಲಿಂದ ಕೇಳಿದ ಪ್ರತಿಯೊಂದು ಮಾತನ್ನು ಜನರ ಮುಂದೆ ಹೇಳುತ್ತಾ ತಿರುಗುವ ಗುಣವೇ ಸಾಕು. (ಸಹೀಹ್ ಮುಸ್ಲಿಮ್ ಮುಖದ್ದಮ, ಬಾಬ್ ಅನ್ನಹ ಅನಿಲ್ ಹದೀಸ್ ಬಿಕುಲ್ಲಿ ಮಾ ಸಮ್ಅ, ಹದೀಸ್-05)

ಈಗ ನೋಡಿ, ಈ ಅಭ್ಯಾಸವು ಸಾಮಾನ್ಯವಾಗಿ ಜನರಲ್ಲಿ ಕಂಡುಬರುತ್ತದೆ ಮತ್ತು ಜಮಾಅತಿನ ಕೆಲವು ಜನರಲ್ಲಿಯೂ ಬಹಳ ಹೆಚ್ಚಾಗಿ ಇದೆ. ಕೆಲವರು ನನಗೆ ಬೇರೆಯವರ ಬಗ್ಗೆ ಅವನು ಹಾಗೆ ಮಾಡಿದ, ಹೀಗೆ ಮಾಡಿದ' ಎಂದು ಬರೆದು ಕಳುಹಿಸುತ್ತಾರೆ, ಆದರೆ ತನಿಖೆ ಮಾಡಿದಾಗ ಆ ಮಾತು ಸುಳ್ಳಾಗಿರುತ್ತದೆ. ಬರೆದವರನ್ನು ಕೇಳಿದರೆ, 'ನಮಗೆ ಯಾರೋ ಹೇಳಿದರು, ನಾವು ಕೇಳಿದ್ದೆವು' ಎಂದು ಹೇಳುತ್ತಾರೆ ಮತ್ತು ಈ ಕೇಳಿದ ಮಾತಿನ ಆಧಾರದ ಮೇಲೆಯೇ ಅವರು ಎಲ್ಲೆಡೆ ಗದ್ದಲವೆಬ್ಬಿಸುತ್ತಾರೆ. ಹಝ್ರತ್ ಪೈಗಂಬರ್(ಸ) ಇಂತಹವರನ್ನು ಸುಳ್ಳುಗಾರರೆಂದು ಕರೆದಿದ್ದಾರೆ ಎಂಬುದನ್ನು ಇಂತಹ ಜನರು ನೆನಪಿನಲ್ಲಿಡಬೇಕು.

ಮತ್ತೊಂದು ವರದಿಯಿದೆ, ಹಝ್ರತ್ ಆಯಿಶ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಸಹಾಬಿಯರಿಗೆ ಸುಳ್ಳಿಗಿಂತ ಹೆಚ್ಚು ಅನಿಷ್ಟಕರವಾದ ಬೇರೆ ಯಾವುದೂ ಇರಲಿಲ್ಲ. ಒಂದು ವೇಳೆ ಯಾರಾದರೂ ಹಝ್ರತ್ ಪೈಗಂಬರ್(ಸ)ರ ಮುಂದೆ ಸುಳ್ಳು ಹೇಳಿಬಿಟ್ಟರೆ, ಆ ಮಾತು ಹಝ್ರತ್ ಪೈಗಂಬರ್(ಸ)ರ ಮನಸ್ಸಿನಲ್ಲಿ ಉಳಿಯುತ್ತಿತ್ತು. ಆತನು ಸುಳ್ಳು ಹೇಳಿದ್ದಾನೆ ಎಂದು ಅವರಿಗೆ ತಿಳಿದಿರುತ್ತಿತ್ತು ಮತ್ತು ಅವರಿಗೆ ಅದರಿಂದ ಬಹಳ ನೋವಾಗುತ್ತಿತ್ತು. ಆ ನೋವನ್ನು ಅವರು ಅನುಭವಿಸುತ್ತಿದ್ದರು ಮತ್ತು ಅದನ್ನು ಅವರು ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತಿದ್ದರು. ಆತನು ಅದರಿಂದ ಪಶ್ಚಾತ್ತಾಪ ಪಟ್ಟಿದ್ದಾನೆ, ತನ್ನನ್ನು ತಿದ್ದಿಕೊಂಡಿದ್ದಾನೆ ಮತ್ತು ಸುಳ್ಳು ಹೇಳುವುದನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟಿದ್ದಾನೆ ಎಂದು ಹಝ್ರತ್ ಪೈಗಂಬರ್(ಸ)ರಿಗೆ ತಿಳಿಯುವವರೆಗೂ ಅದು ಅವರ ನೆನಪಿನಲ್ಲಿ ಇರುತ್ತಿತ್ತು. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-8, ಪುಟ-280, ಹದೀಸ್-25698, ಮಕ್ತಬ ಆಲಮುಲ್ ಕುತುಬ್)

ಹಝ್ರತ್ ಅಸ್ಮಾ(ರ) ವರದಿ ಮಾಡುತ್ತಾರೆ: ಓರ್ವ ಮಹಿಳೆ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಹೀಗೆ ಹೇಳಿದಳು: 'ನನಗೊಬ್ಬಳು ಸವತಿ ಇದ್ದಾಳೆ. ನಾನು ಅವಳನ್ನು ಚುಚ್ಚಲು ಮತ್ತು ಅವಳಿಗೆ ಕಿರಿಕಿರಿ ಉಂಟುಮಾಡುವ ಉದ್ದೇಶದಿಂದ ಮಾತ್ರ, ನನ್ನ ಗಂಡನು ನನಗೆ ಬಹಳಷ್ಟು ನೀಡುತ್ತಾನೆಂದು ಅವಳು ಭಾವಿಸಲಿಕ್ಕಾಗಿ ನಾನು ಆತನ ಸಂಪತ್ತಿನಿಂದ ಅತ್ಯಂತ ತೃಪ್ತಳಾಗಿರುವಂತೆ ನಟಿಸಿದರೆ, ನನ್ನ ಗಂಡನು ವಾಸ್ತವದಲ್ಲಿ ನನಗೆ ಅದನ್ನು ನೀಡದಿದ್ದರೂ, ಹೀಗೆ ಮಾಡುವುದರಿಂದ ನನ್ನ ಮೇಲೆ ಪಾಪವಿದೆಯೇ?' ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: 'ಯಾವ ವಸ್ತುವನ್ನು ತನಗೆ ನೀಡಲಾಗಿಲ್ಲವೋ, ಅದರಿಂದ ತೃಪ್ತನಾಗಿದ್ದೇನೆ ಎಂದು ತೋರಿಕೆ ಮಾಡುವ ವ್ಯಕ್ತಿ ಸುಳ್ಳಿನ ಎರಡು ಬಟ್ಟೆಗಳನ್ನು ಧರಿಸಿದವನಂತೆ ಆಗುತ್ತಾನೆ.' ಭಾವನಾತ್ಮಕವಾಗಿ ನೋವುಂಟುಮಾಡುವ ಉದ್ದೇಶದಿಂದ ಆಕೆ ಹೀಗೆ ಹೇಳಿದ್ದಳು, ಆದರೆ ಹಝ್ರತ್ ಪೈಗಂಬರ್(ಸ) ಇದು ಸಂಪೂರ್ಣ ತಪ್ಪು ಎಂದು ಹೇಳಿದರು.

(ಸಹೀಹ್ ಮುಸ್ಲಿಮ್ ಕಿತಾಬುಲ್ಲಿಬಾಸ್ ವಝ್ಝೀನ, ಬಾಬ್ ಅನ್ನಹ ಅನಿತ್ತಝ್ಝ್‌ವೀರ್..... ಅನುವಾದ ಸಂಪುಟ-11, ಪುಟ-233, ಹದೀಸ್-3959, ನೂರ್ ಫೌಂಡೇಷನ್ ಪ್ರಕಟಣೆ)

ಇದರ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಬಟ್ಟೆ ಎಂಬ ಪದವನ್ನು ಇಲ್ಲಿ ಉದಾಹರಣೆಯಾಗಿ ಬಳಸಲಾಗಿದೆ. ಇದರ ಅರ್ಥವೇನೆಂದರೆ, ಆ ವ್ಯಕ್ತಿಯು ಸುಳ್ಳು ಮತ್ತು ಮೋಸದಿಂದ ಕೆಲಸ ಮಾಡುವವನಾಗಿದ್ದಾನೆ. ಅವನು ಸುಳ್ಳಿನ ಎರಡು ಬಟ್ಟೆಗಳನ್ನು ಧರಿಸಿದ್ದಾನೆ; ಒಂದನ್ನು ಮೈ ಮೇಲೆ ಹಾಕಿಕೊಂಡಿದ್ದಾನೆ ಮತ್ತೊಂದನ್ನು ಲುಂಗಿಯಾಗಿ ಉಟ್ಟುಕೊಂಡಿದ್ದಾನೆ, ಅಂದರೆ ತಲೆಯಿಂದ ಪಾದದವರೆಗೆ ಆತ ಸುಳ್ಳುಗಾರನಾಗಿದ್ದಾನೆ.
(ಉಮ್ದತುಲ್ ಖಾರಿ, ಸಂಪುಟ-20, ಪುಟ-289-290, ದಾರುಲ್ ಕುತುಬ್ ಇಲ್ಮಿಯಾ ಬೈರುತ್, ಫತಹ್ ಅಲ್‌ಬಾರಿ, ಸಂಪುಟ-9, ಪುಟ-228-229, ದಾರುರ್ರೈಯಾನ್ ಲಿತ್ತುರಾಸ್)

ಹೀಗೆ ಅತ್ಯಂತ ಸೂಕ್ಷ್ಮವಾಗಿ ಸುಳ್ಳಿನಿಂದ ದೂರವಿರಲು ಅವರು ತಮ್ಮ ಅನುಯಾಯಿಗಳಿಗೆ ಬೋಧಿಸಿದರು.

ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್(ರ)ರಿಂದ ವರದಿಯಾಗಿದೆ, ಹಝ್ರತ್ ಪೈಗಂಬರ್(ಸ) ಹೇಳಿದರು: ನಾಲ್ಕು ಗುಣಗಳು ಯಾರಲ್ಲಿರುತ್ತವೆಯೋ ಅವನು ಸಂಪೂರ್ಣ ಕಪಟವಿಶ್ವಾಸಿಯಾಗಿದ್ದಾನೆ. ಯಾರಲ್ಲಾದರೂ ಈ ಗುಣಗಳಲ್ಲಿ ಕೇವಲ ಒಂದು ಗುಣವಿದ್ದರೂ, ಅವನು ಅದನ್ನು ಬಿಟ್ಟುಬಿಡುವವರೆಗೆ ಅವನಲ್ಲಿ ಕಪಟತೆಯ ಆ ಒಂದು ಅಂಶವಿರುತ್ತದೆ. ಅವುಗಳು ಯಾವುದೆಂದರೆ, ಅವನ ಬಳಿ ಅಮಾನತ್ತು ಇಟ್ಟರೆ ಅವನು ವಿಶ್ವಾಸದ್ರೋಹ ಮಾಡುತ್ತಾನೆ, ಮಾತನಾಡುವಾಗ ಸುಳ್ಳು ಹೇಳುತ್ತಾನೆ, ವಾಗ್ದಾನ ಮಾಡಿದರೆ ಅದನ್ನು ಮುರಿಯುತ್ತಾನೆ ಮತ್ತು ಜಗಳವಾಡುವಾಗ ಕೆಟ್ಟ ಪದಗಳನ್ನು ಬಳಸುತ್ತಾನೆ. (ಸಹೀಹ್ ಅಲ್-ಬುಖಾರಿ, ಕಿತಾಬುಲ್ ಈಮಾನ್, ಬಾಬ್ ಅಲಾಮಾತುಲ್ ಮುನಾಫ಼ಿಖ್, ಅನುವಾದ ಸಂಪುಟ-1, ಪುಟ-80-81, ಹದೀಸ್-34, ನಝ್ಝಾರತ್ ಇಶಾಅತ್)

ಇವೆಲ್ಲವೂ ನೇರವಾಗಿ ಅಥವಾ ಪರೋಕ್ಷವಾಗಿ ಯಾವುದಾದರೊಂದು ರೀತಿಯಲ್ಲಿ ಸುಳ್ಳಿನ ಕಡೆಗೆ ಕೊಂಡೊಯ್ಯುವಂತಹ ಮಾತುಗಳಾಗಿವೆ, ಅಥವಾ ಇವುಗಳಿಂದ ಸುಳ್ಳು ಪ್ರಕಟವಾಗುತ್ತದೆ. ಹೀಗಾಗಿ ಈ ನೈತಿಕ ದೌರ್ಬಲ್ಯಗಳು ಕಪಟತನದ ಲಕ್ಷಣಗಳಾಗಿವೆ. ಇದನ್ನು ಮುಂದಿಟ್ಟುಕೊಂಡು ನಾವು ನಮ್ಮನ್ನೇ ವಿಮರ್ಶಿಸಿಕೊಳ್ಳಬೇಕು, ನಮ್ಮಲ್ಲಿ ಈ ದೌರ್ಬಲ್ಯಗಳು ಎಷ್ಟರ ಮಟ್ಟಿಗೆ ಇವೆ ಎಂದು ಪರಿಶೀಲಿಸಬೇಕು. ಏಕೆಂದರೆ ಇವು ಕಪಟತನದತ್ತ ಕೊಂಡೊಯ್ಯುವ ವಿಷಯಗಳಾಗಿವೆ. ಯಾವ ಮನುಷ್ಯನೂ ತಾನು ಕಪಟವಿಶ್ವಾಸಿ (ಮುನಾಫಿಕ್) ಎಂದು ಕರೆಸಿಕೊಳ್ಳಲು ಇಷ್ಟಪಡುವುದಿಲ್ಲ.

ತಪ್ಪು ಮಾತುಗಳನ್ನು ಹರಡುವವರ ಬಗ್ಗೆಯೂ ಅವರು ತೀವ್ರ ಎಚ್ಚರಿಕೆ ನೀಡಿದ್ದಾರೆ.

ಸಮುರ ಬಿನ್ ಜುಂದುಬ್ ಹೇಳುತ್ತಾರೆ: ರಸೂಲುಲ್ಲಾಹ್(ಸ) ತಮ್ಮ ಸಹಾಬಿಯರಿಗೆ, 'ನಿಮ್ಮಲ್ಲಿ ಯಾರಾದರೂ ಏನಾದರೂ ಕನಸು ಕಂಡಿದ್ದೀರಾ?' ಎಂದು ಹೆಚ್ಚಾಗಿ ಕೇಳುತ್ತಿದ್ದರು. ಯಾರ ಬಗ್ಗೆ ಅಲ್ಲಾಹನ ಇಚ್ಛೆ ಇರುತ್ತಿತ್ತೋ, ಅವರು ತಾವು ಕಂಡ ಕನಸನ್ನು ವಿವರಿಸುತ್ತಿದ್ದರು. ಒಂದು ದಿನ ಬೆಳಗ್ಗೆ ಹಝ್ರತ್ ಪೈಗಂಬರ್(ಸ) ಹೇಳಿದರು: 'ಇಂದು ರಾತ್ರಿ ನಾನು ಕಂಡ ದೃಶ್ಯವೇನೆಂದರೆ, ಇಬ್ಬರು ಆಗಮಿಸುವವರು ನನ್ನ ಬಳಿಗೆ ಬಂದು ನನ್ನನ್ನು ಎಬ್ಬಿಸಿದರು ಮತ್ತು 'ನಮ್ಮೊಂದಿಗೆ ಬನ್ನಿ' ಎಂದರು. ನಾನು ಅವರೊಂದಿಗೆ ಹೋದೆ. ನಾವು ಒಬ್ಬ ವ್ಯಕ್ತಿಯ ಬಳಿಗೆ ಬಂದೆವು, ಆತ ಮಲಗಿದ್ದನು. ಅವನ ಬಳಿ ಇನ್ನೊಬ್ಬ ವ್ಯಕ್ತಿ ಕಬ್ಬಿಣದ ಕೊಕ್ಕೆ (ಚಿಮುಟದಂತಹ ಆಯುಧ) ಹಿಡಿದು ನಿಂತಿದ್ದನು. ಅವನು ಮಲಗಿದವನ ಮುಖದ ಒಂದು ಬದಿಗೆ ಬಂದು, ಅವನ ಬಾಯಿಯ ಅಂಚನ್ನು ಕುತ್ತಿಗೆಯವರೆಗೆ ಹರಿದು ಹಾಕುತ್ತಿದ್ದನು, ಅವನ ಮೂಗಿನ ಹೊಳ್ಳೆಯನ್ನೂ ಕುತ್ತಿಗೆಯವರೆಗೆ ಮತ್ತು ಕಣ್ಣನ್ನೂ ಕುತ್ತಿಗೆಯವರೆಗೆ ಹರಿದು ಹಾಕುತ್ತಿದ್ದನು (ಅಂದರೆ ಒಂದು ಬದಿಯ ಸಂಪೂರ್ಣ ಮುಖವನ್ನು ಹರಿದು ಹಾಕುತ್ತಿದ್ದನು). ನಂತರ ಅವನು ಮುಖದ ಇನ್ನೊಂದು ಬದಿಗೆ

ಹೋಗಿ ಅದೇ ರೀತಿ ಮಾಡುತ್ತಿದ್ದನು. ಅವನು ಇನ್ನೊಂದು ಬದಿಯನ್ನು ಹರಿದು ಮುಗಿಸುವಷ್ಟರಲ್ಲಿ, ಮೊದಲು ಹರಿದಿದ್ದ ಭಾಗವು ಮತ್ತೆ ಸಹಜ ಸ್ಥಿತಿಗೆ ಮರಳುತ್ತಿತ್ತು. ಆತ ಮತ್ತೆ ಮೊದಲನೇ ಬದಿಗೆ ಬಂದು ಅದೇ ರೀತಿ ಹರಿಯುತ್ತಿದ್ದನು.' ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು 'ಸುಬ್‌ಹಾನಲ್ಲಾಹ್! ಯಾರಿವರು?' ಎಂದು ಕೇಳಿದೆ. ಆ ಇಬ್ಬರೂ ನನಗೆ ಹೇಳಿದರು: 'ನಾವು ನಿಮಗೆ ಇದರ ನೈಜತೆಯನ್ನು ಹೇಳುತ್ತೇವೆ. ಆ ವ್ಯಕ್ತಿಯ ಬಾಯಿ, ಮೂಗು ಮತ್ತು ಕಣ್ಣುಗಳನ್ನು ಕುತ್ತಿಗೆಯವರೆಗೆ ಹರಿದು ಹಾಕಲಾಗುತ್ತಿದ್ದ ದೃಶ್ಯವಿದೆಯಲ್ಲ, ಆ ವ್ಯಕ್ತಿಯು ತನ್ನ ಮನೆಯಿಂದ ಬೆಳಗ್ಗೆ ಹೊರಬಂದು, ಒಂದು ಸುಳ್ಳು ಮಾತನ್ನು ಹೆಣೆದು, ಅದು ನಾಲ್ಕೂ ದಿಕ್ಕುಗಳಲ್ಲಿ ಹರಡುವಂತೆ ಮಾಡುತ್ತಿದ್ದನು." (ಸಹೀಹ್ ಬುಖಾರಿ ಕಿತಾಬ್ ಅತ್ತಅ್‌ಬೀರಿರ್‍ರುಯ ಬಅದ ಸಲಾತಿಸ್ಸುಬ್‌ಹಿ, ಅನುವಾದ, ಸಂಪುಟ-16, ಪುಟ-246-252)

ವದಂತಿಗಳನ್ನು ಹರಡುವವರು ಮತ್ತು ಇತರರ ಬಗ್ಗೆ ತಪ್ಪು ಮಾತುಗಳನ್ನು ಆಡುವವರು.

ಕೆಲವರು ಬರೀ ತಮ್ಮ ನಾಲಿಗೆಯ ರುಚಿಗಾಗಿ ಅಥವಾ ಮೋಜಿಗೆ ಹೀಗೆ ಮಾಡುತ್ತಾರೆ, ಇನ್ನು ಕೆಲವರು ಸಮಾಜದಲ್ಲಿ ಬೇರೆಯವರಿಗೆ ಕೆಟ್ಟ ಹೆಸರು ತರಲು ಅಥವಾ ಯಾವುದೇ ರೀತಿಯ ಹಾನಿ ಉಂಟುಮಾಡಲು ಹೀಗೆ ಮಾತನಾಡುತ್ತಾರೆ. ಇಂತಹ ಜನರು ಯಾವಾಗಲೂ ನೆನಪಿಡಬೇಕು, ಇದು ಶಿಕ್ಷಾರ್ಹ ಅಪರಾಧ, ಅಲ್ಲಾಹನು ಇದನ್ನು ಹಿಡಿಯುತ್ತಾನೆ ಮತ್ತು ಇದಕ್ಕೆ ಶಿಕ್ಷೆ ನೀಡುತ್ತಾನೆ. ಇದು ಬಹಳ ಭಯಪಡಬೇಕಾದ ವಿಷಯ ಮತ್ತು ಬಹಳ ಇಸ್ತಿಗ್ಫಾರ್ (ಕ್ಷಮೆಯಾಚನೆ) ಮಾಡಬೇಕಾಗಿದೆ.

ಅಬ್ದುಲ್ಲಾ ಬಿನ್ ಹಾರಿಸ್ ಅವರು ಹಕೀಮ್ ಬಿನ್ ಹಿಝಾಮ್ ಅವರಿಂದ ವರದಿ ಮಾಡಿದ್ದಾರೆ: ರಸೂಲುಲ್ಲಾಹ್(ಸ) ಹೇಳಿದರು, ಮಾರಾಟ ಮಾಡುವವನು ಮತ್ತು ಖರೀದಿಸುವವನು ಇಬ್ಬರಿಗೂ ತಾವು ಮಾಡಿಕೊಂಡ ವ್ಯಾಪಾರವನ್ನು ರದ್ದುಗೊಳಿಸುವ ಅಧಿಕಾರವಿರುತ್ತದೆ; ಅಂದರೆ ಅವರು ಒಟ್ಟಿಗೆ ಇರುವವರೆಗೆ ಆ ಒಪ್ಪಂದವನ್ನು ರದ್ದುಗೊಳಿಸಬಹುದು, ಆದರೆ ಅವರು ಬೇರ್ಪಟ್ಟರೆ ಆ ಅಧಿಕಾರವಿರುವುದಿಲ್ಲ. ಅವರು ಇಬ್ಬರೂ ಸತ್ಯಸಂಧತೆಯಿಂದ ವರ್ತಿಸಿದರೆ ಮತ್ತು ಎಲ್ಲವನ್ನೂ ಸ್ಪಷ್ಟವಾಗಿ ಹೇಳಿದರೆ, ಅವರಿಬ್ಬರ ವ್ಯಾಪಾರದಲ್ಲಿ ಬರ್ಕತ್ (ಅನುಗ್ರಹ) ನೀಡಲಾಗುವುದು. ಆದರೆ ಅವರಿಬ್ಬರು ವಿಷಯಗಳನ್ನು ಮುಚ್ಚಿಟ್ಟು ಸುಳ್ಳು ಹೇಳಿದರೆ, ಅವರ ವ್ಯಾಪಾರದ ಬರ್ಕತನ್ನು ಅಳಿಸಿಹಾಕಲಾಗುವುದು. (ಸಹೀಹ್ ಬುಖಾರಿ ಕಿತಾಬುಲ್ ಬುಯೂ, ಬಾಬ್ ಇಝಾ ಬೈಯಿನಲ್ ಬೈಯಿಆನಿ ವಲಮ್ ಯಕ್ತುಮಾ ವನಸಹಾ ಅನುವಾದ, ಸಂಪುಟ-4, ಪುಟ-38-39, ಹದೀಸ್-2079, ನಝಾರತ್ ಇಶಾಅತ್)

ಸುಳ್ಳು ಮಾತುಗಳ ಕಾರಣದಿಂದಾಗಿಯೇ ಅನೇಕ ವ್ಯಾಪಾರ ವಿವಾದಗಳು ಉದ್ಭವಿಸುತ್ತವೆ, ಮತ್ತು ಅಲ್ಲಾಹನು ಇಂತಹ ಜನರ ಮಾತುಗಳಲ್ಲಿ ಮತ್ತು ವ್ಯಾಪಾರದಲ್ಲಿ ಬರ್ಕತನ್ನು ನೀಡುವುದಿಲ್ಲ. ಅವರು ಪ್ರಪಂಚದಲ್ಲೇ ನಷ್ಟವನ್ನು ಅನುಭವಿಸುತ್ತಾರೆ ಮತ್ತು ಅಲ್ಲಾಹನ ಬಳಿಯೂ ಪಾಪಿಗಳಾಗಿ ಶಿಕ್ಷೆಯನ್ನು ಅನುಭವಿಸುತ್ತಾರೆ.

ಹಝ್ರತ್ ಇಬ್ನು ಉಮರ್(ರ) ಅವರಿಂದ ವರದಿಯಾಗಿದೆ, ಹಝ್ರತ್ ಪೈಗಂಬರ್(ಸ) ಹೇಳಿದರು: ಒಬ್ಬ ದಾಸನು ಸುಳ್ಳು ಹೇಳುವಾಗ, ಅವನು ಮಾಡಿದ ಆ ದುಷ್ಕೃತ್ಯದ ದುರ್ವಾಸನೆಯಿಂದಾಗಿ ದೇವದೂತರು ಅವನಿಂದ ಒಂದು ಮೈಲು ದೂರ ಹೋಗಿಬಿಡುತ್ತಾರೆ. (ಜಾಮಿ ಅತ್ತಿಮಿರ್ಧಿ, ಕಿತಾಬುಲ್ ಬಿರ್‍ರು ವಸ್ಸಿಲತಿ ಬಾಬು ಮಾಜಾಅ ಫಿಸ್ಸಿದ್‌ಖಿ ವಲ್ ಕಝ್ಬಿ, ಹದೀಸ್-1972)

ಹಝ್ರತ್ ಅಬೂಹುರೈರ(ರ) ಅವರಿಂದ ವರದಿಯಾಗಿದೆ, ಹಝ್ರತ್ ಪೈಗಂಬರ್(ಸ) ಒಮ್ಮೆ ಧಾನ್ಯದ ರಾಶಿಯೊಂದರ ಬಳಿಯಿಂದ ಹಾದುಹೋದರು. ಅವರು ತಮ್ಮ ಕೈಯನ್ನು ಅದರೊಳಗೆ ಹಾಕಿದಾಗ, ಅವರ ಬೆರಳುಗಳಿಗೆ ತೇವಾಂಶ ತಗುಲಿತು. ಹಝ್ರತ್ ಪೈಗಂಬರ್(ಸ) ಕೇಳಿದರು: 'ಹೇ ಧಾನ್ಯ ಮಾರುವವನೇ, ಇದೇನು? ಇದು ಒಳಗಿನಿಂದ ಒದ್ದೆಯಾಗಿದೆಯಲ್ಲವೇ?' ಧಾನ್ಯದ ಮಾಲೀಕನು ಹೇಳಿದನು: 'ಯಾ ರಸೂಲಲ್ಲಾಹ್, ಅದರ ಮೇಲೆ ಮಳೆನೀರು ಬಿದ್ದಿತ್ತು' ಹಝ್ರತ್ ಪೈಗಂಬರ್(ಸ) ಕೇಳಿದರು: 'ಹಾಗಾದರೆ ನೀನು ಆ ಒದ್ದೆಯಾದ ಧಾನ್ಯವನ್ನು ಏಕೆ ಮೇಲೆ ಹಾಕಲಿಲ್ಲ? ಮಳೆಯಿಂದ ಒದ್ದೆಯಾಗಿದ್ದರೆ ಜನರು ಅದನ್ನು ಕಾಣಲಿಕ್ಕಾಗಿ ಮೇಲೆ ಇರಿಸಬೇಕಾಗಿತ್ತು. ಮುಚ್ಚಿಟ್ಟು ಮೋಸ ಮಾಡಿದ್ದೇಕೆ? ಯಾರು ಮೋಸ ಮಾಡುತ್ತಾನೋ ಅವನು ನನ್ನವನಲ್ಲ'. (ಸಹೀಹ್ ಮುಸ್ಲಿಮ್, ಕಿತಾಬುಲ್ ಈಮಾನ್, ಬಾಬ್ ಖೌಲನ್ನಬೀ(ಸ): **"ಮನ್ ಗಶ್ಶನಾ ಫಲೈಸ ಮಿನ್ನಾ"**...... ಅನುವಾದ ಸಂಪುಟ-1, ಪುಟ-93, ಹದೀಸ್-139, ನೂರ್ ಫೌಂಡೇಷನ್)

ವ್ಯಾಪಾರ ಮಾಡುವವರು ಎಷ್ಟು ಸೂಕ್ಷ್ಮವಾಗಿ ಗಮನಹರಿಸಬೇಕು ಎಂಬುದನ್ನು ಇದು ತೋರಿಸುತ್ತದೆ. ಒಬ್ಬ ಮುಸಲ್ಮಾನನಲ್ಲಿ ಹಝ್ರತ್ ಪೈಗಂಬರ್(ಸ) ಎಂತಹ ಗುಣಮಟ್ಟವನ್ನು ಬೆಳೆಸಲು ಬಯಸಿದ್ದರು ಎಂಬುದನ್ನು ಇದರಿಂದ ತಿಳಿಯಬಹುದು. ಆದರೆ ದುರದೃಷ್ಟವಶಾತ್, ಇಂದು ಮುಸ್ಲಿಮರೇ ವ್ಯಾಪಾರದಲ್ಲಿ ಮೋಸ ಮತ್ತು ಸುಳ್ಳು ಹೇಳುವಿಕೆಯಿಂದಾಗಿ ಲೋಕದಲ್ಲಿ ಕೆಟ್ಟ ಹೆಸರಿಗೆ ತುತ್ತಾಗಿದ್ದಾರೆ.

ಆದ್ದರಿಂದ, ಇಂದು ಹಝ್ರತ್ ಮಸೀಹ್ ಮೌಊದ್(ಅ)ರಲ್ಲಿ ನಂಬಿಕೆಯಿಡುತ್ತಾ, ಹಝ್ರತ್ ಪೈಗಂಬರ್(ಸ)ರ ಮೇಲೆ ನಿಜವಾದ ವಿಶ್ವಾಸವನ್ನು ಇಟ್ಟಿರುವುದಾಗಿ ಘೋಷಿಸುವ ನಮ್ಮೆಲ್ಲರ ಪ್ರತಿಯೊಂದು ಮಾತು ಮತ್ತು ಕೃತಿ ಸತ್ಯಸಂಧತೆಯ ಅತ್ಯುನ್ನತ ಗುಣಮಟ್ಟವನ್ನು ಹೊಂದಿರಬೇಕು. ಇಲ್ಲದಿದ್ದರೆ, 'ನೀವು ನನ್ನವರಲ್ಲ, ನನಗೂ ನಿಮಗೂ ಯಾವುದೇ ಸಂಬಂಧವಿಲ್ಲ' ಎಂದು ಹಝ್ರತ್ ಪೈಗಂಬರ್(ಸ) ಹೇಳಿದಂತೆ ಆಗುವುದು. ತಾವು ಎಷ್ಟೊಂದು ಸೂಕ್ಷ್ಮವಾಗಿ ಸತ್ಯವನ್ನು ಅಳವಡಿಸಿಕೊಳ್ಳಬೇಕೆಂದು ಹಝ್ರತ್ ಪೈಗಂಬರ್(ಸ) ಅಸಂಖ್ಯಾತ ಉಪದೇಶಗಳು ಮತ್ತು ಮಾರ್ಗದರ್ಶನಗಳನ್ನು ನೀಡಿದ್ದಾರೆ. ಒಬ್ಬ ವ್ಯಕ್ತಿಯು ಸತ್ಯದ ಮೇಲೆ ಸಂಪೂರ್ಣವಾಗಿ ನೆಲೆನಿಲ್ಲುವವರೆಗೆ ಆತನು ನಿಜವಾದ ಮುಸಲ್ಮಾನನಾಗಲು ಸಾಧ್ಯವೇ ಇಲ್ಲ.

ಅವರ(ಸ) ಜೀವನ ಚರಿತ್ರೆಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ನಾನೀಗ ಮಂಡಿಸುತ್ತೇನೆ. ಹಝ್ರತ್ ಪೈಗಂಬರ್(ಸ) ಸದಾ ಸತ್ಯ ಹೇಳುವುದರಲ್ಲಿ ಹಾಗೂ ಸತ್ಯವಿಶ್ವಾಸ ಮತ್ತು ಪ್ರಾಮಾಣಿಕತೆಯಲ್ಲಿ ಅತ್ಯಂತ ಎದ್ದು ಕಾಣುತ್ತಿದ್ದ ಕಾರಣದಿಂದಾಗಿ, ಜನರಲ್ಲಿ ಸಾದಿಕ್ (ಸತ್ಯವಂತ) ಮತ್ತು ಅಮೀನ್ (ನಂಬಿಗಸ್ತ) ಎಂದು ಪ್ರಸಿದ್ಧರಾಗಿದ್ದರು.

ಒಬ್ಬ ಲೇಖಕ ಹೀಗೆ ಬರೆದಿದ್ದಾರೆ: ಹಝ್ರತ್ ಪೈಗಂಬರ್(ಸ)ರಿಗಿಂತ ಮುಂಚೆ, ಅಜ್ಞಾನ ಕಾಲದಲ್ಲಿ ಅರೇಬಿಯರ ಬಳಿಗೆ ಯಾವ ಎಚ್ಚರಿಸುವವನೂ ಬಂದಿರಲಿಲ್ಲ, ಅಂದರೆ ಆ ಜನಾಂಗದಲ್ಲಿ ಯಾವುದೇ ಪ್ರವಾದಿ ಬಂದಿರಲಿಲ್ಲ. ಜನರು ವಿಗ್ರಹಗಳು, ಮೂರ್ತಿಗಳು ಮತ್ತು ದುಷ್ಟ ಶಕ್ತಿಗಳನ್ನು ಆರಾಧಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಅದೇ ಜನರ, ಅಂದರೆ ಶೈತಾನನ ಗುಂಪು ಮತ್ತು ವಿಗ್ರಹಾರಾಧಕರ ಮಧ್ಯೆ ಇದ್ದರೂ, ಅವರಿಗೆ ಬಾಲ್ಯದಿಂದಲೇ ತಿಳುವಳಿಕೆ ಮತ್ತು ವಿವೇಕವನ್ನು ದಯಪಾಲಿಸಲಾಗಿತ್ತು. ಹಝ್ರತ್ ಪೈಗಂಬರ್(ಸ) ಎಂದಿಗೂ ಯಾವುದೇ ವಿಗ್ರಹದ ಕಡೆಗೆ ಆಕರ್ಷಿತರಾಗಲಿಲ್ಲ ಮತ್ತು ಆ ಜನರೊಂದಿಗೆ ಎಂದಿಗೂ ಯಾವುದೇ ಹಬ್ಬ-ಕೂಟಗಳಲ್ಲಿ ಭಾಗವಹಿಸಲಿಲ್ಲ. ಹಝ್ರತ್ ಪೈಗಂಬರ್(ಸ) ಸುಳ್ಳು ಹೇಳುವುದನ್ನು ಜನರು ಎಂದಿಗೂ ಕೇಳಿರಲಿಲ್ಲ. ಜನರು ಹಝ್ರತ್ ಪೈಗಂಬರ್(ಸ)ರನ್ನು ಅತ್ಯಂತ ಸತ್ಯವಂತ, ನಂಬಿಗಸ್ತ, ತಾಳ್ಮೆಯುಳ್ಳವ ಮತ್ತು ಅತ್ಯಂತ ದಯಾಮಯಿ ಎಂದು ಪರಿಗಣಿಸುತ್ತಿದ್ದರು.

(ಇಮ್ತಾಉಲ್ ಅಸ್ಮಾ, ಸಂಪುಟ-4, ಪುಟ-212, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಇಸ್ಲಾಮಿಗೆ ಮುಂಚೆ, ಅಜ್ಞಾನದ ಕಾಲದಲ್ಲಿ ಹಝ್ರತ್ ಪೈಗಂಬರ್(ಸ)ರಿಂದ ತೀರ್ಪುಗಳನ್ನು ಮಾಡಿಸಲಾಗುತ್ತಿತ್ತು ಎಂದು ಒಂದು ವರದಿಯಲ್ಲಿ ಇದೆ. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-2, ಪುಟ-147, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಹಝ್ರತ್ ಮುಸ್ಲಿಹ್ ಮೌಊದ್(ರ) ಇದನ್ನು ವಿವರಿಸುತ್ತಾ ಹೀಗೆ ಹೇಳುತ್ತಾರೆ:

"ಹಝ್ರತ್ ಪೈಗಂಬರ್(ಸ)ರ ಉತ್ತಮ ನೈತಿಕತೆಯ ಬಗ್ಗೆ ಅವರ ಸಮುದಾಯವೇ ಒಮ್ಮತದ ಸಾಕ್ಷ್ಯವನ್ನು ನೀಡಿದೆ. ಅವರ ಪ್ರವಾದಿತ್ವದ ವಾದಕ್ಕಿಂತ ಮೊದಲೇ ಅವರ ಕೋಮು ಅವರಿಗೆ ನಂಬಿಗಸ್ತ (ಅಮೀನ್) ಮತ್ತು ಸತ್ಯವಂತ (ಸಿದ್ದೀಖ್) ಎಂದು ಹೆಸರಿಟ್ಟಿತ್ತು. ತಾವು ಮೋಸಗಾರರಲ್ಲ ಎಂಬುದಕ್ಕೆ ಆಧಾರವಿಲ್ಲದ ಅನೇಕ ಜನರಿದ್ದಾರೆ, ಯಾವುದೇ ಕಠಿಣ ಪರೀಕ್ಷೆಯಿಂದ ಹಾದುಹೋಗುವ ಅವಕಾಶ ಸಿಗದಂತಹ ಅನೇಕ ಜನರು ಲೋಕದಲ್ಲಿದ್ದಾರೆ. ಅವರು ಸಾಮಾನ್ಯ ಪರೀಕ್ಷೆಗಳಿಂದ ಹಾದುಹೋಗುತ್ತಾರೆ ಮತ್ತು ಅವರ ಪ್ರಾಮಾಣಿಕತೆ ಉಳಿಯುತ್ತದೆ, ಆದರೂ ಅವರ ಕೋಮು ಅವರಿಗೆ ಯಾವುದೇ ವಿಶೇಷ ಹೆಸರನ್ನು ನೀಡುವುದಿಲ್ಲ. ಏಕೆಂದರೆ ಒಬ್ಬ ವ್ಯಕ್ತಿಯು ಯಾವುದೇ ಒಂದು ನಿರ್ದಿಷ್ಟ ಗುಣದಲ್ಲಿ ಇತರರಿಗಿಂತ ಮಿಗಿಲಾದಾಗ ಮಾತ್ರ ಆತನಿಗೆ ವಿಶೇಷ ಹೆಸರುಗಳನ್ನು ನೀಡಲಾಗುತ್ತದೆ. ಯುದ್ಧದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ಸೈನಿಕ ತನ್ನ ಪ್ರಾಣವನ್ನು ಅಪಾಯಕ್ಕೊಡ್ಡುತ್ತಾನೆ, ಆದರೆ ಇಂಗ್ಲಿಷ್ ಸಮುದಾಯ ಪ್ರತಿಯೊಬ್ಬರಿಗೂ ವಿಕ್ಟೋರಿಯಾ ಕ್ರಾಸ್ ಪದಕ ನೀಡುವುದಿಲ್ಲ. ಅಂತಯೇ ಜರ್ಮನ್‌ನಲ್ಲಿ ಪ್ರತಿಯೊಬ್ಬ ಯೋಧನಿಗೂ ಐರನ್ ಕ್ರಾಸ್ ಪದಕ ನೀಡಲಾಗುವುದಿಲ್ಲ. ಫ್ರಾನ್ಸ್‌ನಲ್ಲಿ ಲಕ್ಷಾಂತರ ಜನರು ಶೈಕ್ಷಣಿಕ ವೃತ್ತಿಯಲ್ಲಿದ್ದಾರೆ, ಆದರೆ ಪ್ರತಿಯೊಬ್ಬರಿಗೂ ಲೀಜನ್ ಆಫ್ ಆನರ್ ಸಿಗುವುದಿಲ್ಲ. ಅದೇ ರೀತಿ ಓರ್ವ ವ್ಯಕ್ತಿಯು ಕೇವಲ ಪ್ರಾಮಾಣಿಕ ಮತ್ತು ಸತ್ಯವಂತನಾಗಿದ್ದರೆ ಅದು ಆತನ ಶ್ರೇಷ್ಠತೆಯ ಮೇಲೆ ವಿಶೇಷ ಬೆಳಕು ಚೆಲ್ಲುವುದಿಲ್ಲ, ಆದರೆ ಒಬ್ಬ ವ್ಯಕ್ತಿಗೆ ಇಡೀ ಸಮುದಾಯ ನಂಬಿಗಸ್ತ ಮತ್ತು ಸತ್ಯವಂತ ಎಂಬ ಬಿರುದನ್ನು ನೀಡುವುದು ಅಸಾಮಾನ್ಯ ವಿಷಯವಾಗಿದೆ. ಮಕ್ಕಾದ ಜನರು ಪ್ರತಿಯೊಂದು ಪೀಳಿಗೆಯವರಿಗೂ

ಈ ಬಿರುದುಗಳನ್ನು ನೀಡುತ್ತಿದ್ದರೂ ಸಹ, ಈ ಬಿರುದು ಪಡೆದವನು ದೊಡ್ಡ ಮನುಷ್ಯನೆಂದು ಪರಿಗಣಿಸಲ್ಪಡುತ್ತಿದ್ದನು; ಆದರೆ ಅರೇಬಿಯಾದ ಇತಿಹಾಸವು ಹೇಳುವುದೇನೆಂದರೆ, ನೂರಾರು ವರ್ಷಗಳ ಇತಿಹಾಸದಲ್ಲಿ ಒಂದು ಕೋಮು ಕೇವಲ ಒಬ್ಬನೇ ವ್ಯಕ್ತಿಗೆ, ಅಂದರೆ ಮುಹಮ್ಮದ್ ರಸೂಲುಲ್ಲಾಹ್(ಸ)ರಿಗೆ ಮಾತ್ರ ಅಮೀನ್ ಮತ್ತು ಸಿದ್ದೀಖ್ ಎಂಬ ಬಿರುದನ್ನು ನೀಡಿತ್ತು. ಇದು ಆ ವ್ಯಕ್ತಿಯ ಪ್ರಾಮಾಣಿಕತೆ ಮತ್ತು ಸತ್ಯಸಂಧತೆ ಎರಡೂ ಎಷ್ಟೊಂದು ಅತ್ಯುನ್ನತ ಮಟ್ಟದ್ದಾಗಿದ್ದವು ಎಂಬುದನ್ನು ತೋರಿಸುತ್ತದೆ. ಅರೇಬಿಯರ ಅರಿವಿನಲ್ಲಿ ಬೇರೆ ಯಾವ ವ್ಯಕ್ತಿಯಲ್ಲೂ ಇಂತಹ ಉದಾಹರಣೆ ಕಂಡುಬರುತ್ತಿರಲಿಲ್ಲ. ಅರೇಬಿಯರು ತಮ್ಮ ಸೂಕ್ಷ್ಮ ದೃಷ್ಟಿಯ ವಿಷಯದಲ್ಲಿ ಜಗತ್ತಿನಲ್ಲೇ ಪ್ರಸಿದ್ಧರಾಗಿದ್ದರು. ಆದ್ದರಿಂದ ಅವರು ಯಾವುದನ್ನು ಅಪರೂಪವೆಂದು ಕರೆಯುತ್ತಾರೋ, ಅದು ಖಂಡಿತವಾಗಿಯೂ ಲೋಕದಲ್ಲೇ ಅಪರೂಪವೆಂದು ಪರಿಗಣಿಸಲು ಅರ್ಹವಾಗಿದೆ." (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–374–375)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"ಇಂದು ಜಗತ್ತಿನ ಸ್ಥಿತಿ ಬಹಳ ನಾಜೂಕಾಗಿದೆ. ಯಾವ ಕಡೆಯಿಂದ ನೋಡಿದರೂ ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಲಾಗುತ್ತಿದೆ. ಸುಳ್ಳು ಮೊಕದ್ದಮೆಗಳನ್ನು ಹೂಡುವುದು ಸರ್ವೇಸಾಮಾನ್ಯವಾಗಿದೆ. ಸುಳ್ಳು ಪ್ರಮಾಣಪತ್ರಗಳು ಮತ್ತು ಕಾಗದಪತ್ರಗಳನ್ನು ತಯಾರಿಸಲಾಗುತ್ತಿದೆ. ಯಾವುದೇ ವಿಷಯವನ್ನು ವಿವರಿಸುವಾಗ, ಅದರಲ್ಲಿ ಲಾಭವಿದ್ದರೆ ಸತ್ಯವನ್ನು ಬಿಟ್ಟು ಸುಳ್ಳು ಹೇಳುತ್ತಾರೆ. ನಾನು ಈ ಜಮಾಅತನ್ನು ಸ್ಥಾಪಿಸಿದ್ದು ಸತ್ಯವನ್ನು ಸ್ಥಾಪಿಸಲೆಂದು; ಆದರೆ ಈ ಜಮಾಅತಿನ ಅಗತ್ಯವನ್ನು ಅರ್ಥಮಾಡಿಕೊಳ್ಳದವರನ್ನು ಯಾರಾದರೂ ಕೇಳಲಿ, ಹಝ್ರತ್ ಪೈಗಂಬರ್(ಸ) ತಂದ ಧರ್ಮ ಇದೇ ಆಗಿತ್ತೇ? ಅಲ್ಲಾಹನು ಸುಳ್ಳನ್ನು ಅಶುದ್ಧ ಎಂದು ಕರೆದಿದ್ದಾನೆ ಮತ್ತು ಅದರಿಂದ ದೂರವಿರಲು ಹೇಳಿದ್ದಾನೆ. **'ಫಜ್ತನಿಬುರ್ರಿಜ್‌ಸ ಮಿನಲ್ ಔಸಾನಿ ವಜ್ತನಿಬೂ ಖೌಲಝ್ಝೂರ್'** (ವಿಗ್ರಹಗಳ ಅಶುದ್ಧತೆಯಿಂದ ದೂರವಿರಿ ಮತ್ತು ಸುಳ್ಳು ಮಾತಿನಿಂದಲೂ ದೂರವಿರಿ). ಅಲ್ಲಾಹನು ಸುಳ್ಳು ಹೇಳುವುದನ್ನು ವಿಗ್ರಹಾರಾಧನೆಗೆ ಸಮಾನವಾಗಿ ಮಾಡಿದ್ದಾನೆ. ಒಬ್ಬ ಮೂರ್ಖನು ದೇವನನ್ನು ಬಿಟ್ಟು ಕಲ್ಲಿನ ಮುಂದೆ ತಲೆಬಾಗುವಂತೆ, ಸತ್ಯ ಮತ್ತು ಪ್ರಾಮಾಣಿಕತೆಯನ್ನು ಬಿಟ್ಟು ತನ್ನ ಸ್ವಾರ್ಥಕ್ಕಾಗಿ ಸುಳ್ಳನ್ನು ವಿಗ್ರಹವನ್ನಾಗಿ ಮಾಡಿಕೊಳ್ಳುತ್ತಾನೆ. ಇದೇ ಕಾರಣಕ್ಕೆ ಅಲ್ಲಾಹನು ಅದನ್ನು ವಿಗ್ರಹಾರಾಧನೆಗೆ ಸೇರಿಸಿದ್ದಾನೆ. ವಿಗ್ರಹಾರಾಧನೆಯು ಒಂದು ದೊಡ್ಡ ಪಾಪವಾಗಿರುವಂತೆಯೇ, ಸುಳ್ಳು ಹೇಳುವುದು ಕೂಡ ಅದಕ್ಕೆ ಸಮಾನವಾಗಿದೆ. ನೀವು ಅಶುದ್ಧತೆಯನ್ನು (ಶಿರ್ಕನ್ನು) ಬಿಟ್ಟುಬಿಡಿ ಎಂದು ಹೇಳುವಾಗ, ಅದನ್ನು ಬಿಟ್ಟರೆ ನಮ್ಮ ಜೀವನ ನಡೆಯುವುದಿಲ್ಲ ಎಂದು ಅವರು ಹೇಳುತ್ತಾರೆ. ತಮ್ಮ ಲಾಭಕ್ಕಾಗಿ ಅವರು ಸುಳ್ಳು ಹೇಳಲೇಬೇಕಂತೆ.

"ಈ ಸುಳ್ಳನ್ನೇ ತಮ್ಮ ಜೀವನದ ಆಧಾರವೆಂದು ಪರಿಗಣಿಸುವುದಕ್ಕಿಂತ ದೊಡ್ಡ ದುರದೃಷ್ಟ ಬೇರೆಯಿಲ್ಲ. ಆದರೆ ನಾನು ನಿಮಗೆ ಭರವಸೆ ನೀಡುತ್ತೇನೆ, ಕೊನೆಗೆ ಸತ್ಯವೇ ಗೆಲ್ಲುವುದು, ಒಳಿತು ಮತ್ತು ವಿಜಯ ಅದಕ್ಕೇ ಸಲ್ಲುವುದು."

(ಮಲ್‌ಫೂಝಾತ್, ಸಂಪುಟ–8, ಪುಟ–181, 2022)

ಹಝ್ರತ್ ಪೈಗಂಬರ್(ಸ)ರ ಜೀವನ ಚರಿತ್ರೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದೆಡೆ ಹೀಗೆ ಬರೆದಿದ್ದಾರೆ:

"ಹಝ್ರತ್ ಪೈಗಂಬರ್(ಸ) ತಮ್ಮ ಪತ್ನಿಗೆ, ನನಗೆ ಈ ರೀತಿ ದೇವವಾಣಿ ಅವತೀರ್ಣವಾಗಿದೆ ಎಂದು ತಿಳಿಸುತ್ತಾರೆ. ನೀವೇನು ಸುಳ್ಳು ಹೆಣೆಯುತ್ತಿದ್ದೀರಾ ಎಂದು ಪತ್ನಿ ಕೇಳುವುದಿಲ್ಲ, ಬದಲಾಗಿ ಹೇಳುತ್ತಾರೆ: ನೀವು ಗಾಬರಿಯಾಗಬೇಡಿ, ನೀವು ಕಂಡಿರುವುದು ಸತ್ಯವಾಗಿದೆ. ಅಲ್ಲಾಹನು ನಿಮ್ಮನ್ನು ಎಂದಿಗೂ ಕೈಬಿಡಲಾರನು. ಏಕೆಂದರೆ ನೀವು ಸಂಬಂಧಗಳನ್ನು ಗೌರವಿಸುತ್ತೀರಿ, ನಿರ್ಗತಿಕರ ಹೊರೆ ಹೊರುತ್ತೀರಿ, ಕಳೆದುಹೋದ ಒಳಿತುಗಳನ್ನು ಮರುಸ್ಥಾಪಿಸುತ್ತೀರಿ, ಅತಿಥಿ ಸತ್ಕಾರ ಮಾಡುತ್ತೀರಿ. ಸತ್ಯ ಹಾಗೂ ನ್ಯಾಯವನ್ನು ಬೆಂಬಲಿಸುತ್ತೀರಿ ಎಂದು ಹೇಳಿ ಸಮಾಧಾನಪಡಿಸಿದರು. ನಂತರ ಹಝ್ರತ್ ಖ಼ದೀಜ(ರ) ಹಝ್ರತ್ ಪೈಗಂಬರ್(ಸ)ರನ್ನು ತಮ್ಮ ಸಹೋದರನಾದ ವರಖ ಬಿನ್ ನೌಫಲ್‌ರ ಬಳಿಗೆ ಕರೆದೊಯ್ಯುತ್ತಾರೆ. ಅವರು ಇಸ್ರಾಯೇಲಿ ಧರ್ಮಗ್ರಂಥಗಳ ವಿದ್ವಾಂಸರಾಗಿದ್ದರು. ಅವರು ತಕ್ಷಣ ಹೇಳಿದರು: ಈ ದೇವವಾಣಿಯಲ್ಲಿ ಹಝ್ರತ್ ಮೂಸಾ(ಅ)ರ ದೇವವಾಣಿಯಲ್ಲಿದ್ದಂತಹದೇ ಆಜ್ಞೆಗಳು ಮತ್ತು ಆದೇಶಗಳು ಕಂಡುಬರುತ್ತವೆ.

ಮನೆಯಲ್ಲಿ ಯುವಕನಾಗಿರುವ ಓರ್ವ ಚಿಕ್ಕಪ್ಪನ ಪುತ್ರನಿರುತ್ತಾನೆ (ಹಝ್ರತ್ ಅಲಿ), ಆತ ಯುವಕರಲ್ಲಿ ಧರ್ಮಪ್ರಚಾರದ ಒಳ್ಳೆಯ ಮಾಧ್ಯಮವಾಗಬಲ್ಲನು. ಅವನು ತನ್ನ ಅಣ್ಣ ಮತ್ತು ಅತ್ತಿಗೆಯ ಗಂಭೀರ ಮಾತುಗಳನ್ನು ಕೇಳಿ ಮುಂದೆ ಬಂದು ಹೀಗೆ ಹೇಳುತ್ತಾನೆ: ನೀವು ಸತ್ಯವಂತರೆಂದು ನಾನು ನಂಬುತ್ತೇನೆ ಮತ್ತು ಖಂಡಿತವಾಗಿಯೂ ದೇವನು ನಿಮ್ಮೊಡನೆ ಮಾತನಾಡಿದ್ದಾನೆ ಮತ್ತು ನಿಮ್ಮನ್ನು ಲೋಕದ ಸುಧಾರಣೆಗಾಗಿ ನಿಯೋಜಿಸಿದ್ದಾನೆ.

ಮನೆಯಲ್ಲಿ ಒಬ್ಬ ವಿಮೋಚಿತ ಗುಲಾಮ (ಹಝ್ರತ್ ಝೈದ್) ಸಹ ಇದ್ದಾನೆ. ಅವನು ಹಝ್ರತ್ ಪೈಗಂಬರ್(ಸ)ರ ನೈತಿಕತೆಯಿಂದ ಎಷ್ಟೊಂದು ಪ್ರಭಾವಿತನಾಗಿದ್ದನೆಂದರೆ, ತಂದೆ–ತಾಯಿಯನ್ನು ಕೂಡ ಬಿಟ್ಟು ಹಝ್ರತ್ ಪೈಗಂಬರ್(ಸ)ರ ಮನೆಯಲ್ಲಿಯೇ ನೆಲೆಸಿದ್ದನು. ನಡೆಯುತ್ತಿರುವ ಘಟನೆಗಳನ್ನು ಅವನು ನಿಧಾನವಾಗಿ ಆಲಿಸಿದಾಗ ಮತ್ತು ತನ್ನ ಯಜಮಾನರ ಮುಖದಲ್ಲಿ ಆತಂಕ ಹಾಗೂ ಚಿಂತೆಯ ಲಕ್ಷಣಗಳನ್ನು ಕಂಡಾಗ, ಅವನು ಮುಂದೆ ಬಂದು ತನ್ನ ಯಜಮಾನರ ಸೆರಗು ಹಿಡಿದು ಹೀಗೆ ಹೇಳುತ್ತಾನೆ: ಹೇ ನನ್ನ ಒಡೆಯ, ನೀವು ಹೇಳಿದ್ದು ಮತ್ತು ಕಂಡದ್ದು ಸತ್ಯವಾಗಿದೆ. ನಿಮ್ಮಂತಹ ಮನುಷ್ಯನಿಗೆ ಸರ್ವಶಕ್ತನಾದ ಅಲ್ಲಾಹನು ಎಂದಿಗೂ ಮೋಸ ಮಾಡಲಾರ. ನೀವು ಸಂಪೂರ್ಣವಾಗಿ ಸತ್ಯ ಮತ್ತು ಧರ್ಮದ ಸಾಕಾರ ರೂಪವಾಗಿದ್ದೀರಿ. ನಿಮ್ಮ ಮೂಲಕ ಪ್ರಪಂಚದ ಸುಧಾರಣೆಯಾಗುವ ಸಮಯ ಈಗ ಬಂದಿದೆ. ನನ್ನನ್ನು ಸಹ ನಿಮ್ಮ ಜೊತೆಯಲ್ಲೇ ಇರಲು ಮತ್ತು ಸೇವೆ ಮಾಡಲು ಬಿಡಿ.

ಅದೇ ರೀತಿ ಒಬ್ಬ ಆಪ್ತ ಸ್ನೇಹಿತನಿದ್ದಾನೆ (ಹಝ್ರತ್ ಅಬೂಬಕರ್). ಅವರು ಒಂದೇ ಚಿಪ್ಪಿನಲ್ಲಿ ಬೆಳೆದ ಮತ್ತೊಂದು ಮುತ್ತಿನಂತಿದ್ದರು. ತನ್ನ ಸ್ನೇಹಿತನ ಕುರಿತು, ಅವರು ಏನೋ ಅಸಂಬದ್ಧ ಮಾತುಗಳನ್ನು ಆಡಲಾರಂಭಿಸಿದ್ದಾರೆ ಮತ್ತು ಅವರ ಮಿದುಳಿನಲ್ಲಿ ಏನೋ ದೋಷ ಉಂಟಾಗಿರಬಹುದು ಎಂದು ಜನರು ಆಡುವ ವದಂತಿಗಳನ್ನು ಕೇಳುತ್ತಾರೆ. ಸ್ನೇಹಿತ ಬಂದು ಬಾಗಿಲು ತೆರೆಸಿ, 'ನಾನು ಕೇಳುತ್ತಿರುವುದು ಸತ್ಯವೇ?' ಎಂದು ಕೇಳುತ್ತಾರೆ. ಹಝ್ರತ್ ಪೈಗಂಬರ್(ಸ) ವಿವರಣೆ ನೀಡಲು ಮುಂದಾದಾಗ ಅವರು ಹೇಳುತ್ತಾರೆ: 'ದೇವನಾಣೆ, ನನಗೆ ಆಧಾರಗಳನ್ನು ನೀಡಬೇಡಿ. ಈ ಮಾತುಗಳು ಸತ್ಯವೇ ಎಂದು ಮಾತ್ರ ನನಗೆ ತಿಳಿಸಿ'. ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದಾಗ ಅವರು ಹೇಳುತ್ತಾರೆ: 'ನನ್ನ ಸತ್ಯವಂತ ಸ್ನೇಹಿತ, ನಾನು ನಿಮ್ಮ ಪ್ರವಾದಿತ್ವದ ಮೇಲೆ ವಿಶ್ವಾಸವಿಡುತ್ತೇನೆ. ನೀವು ಆಧಾರಗಳನ್ನು ನೀಡಿ ನನ್ನ ನಂಬಿಕೆಯನ್ನು ಸಂದೇಹಕ್ಕೀಡು ಮಾಡುವವರಿದ್ದೀರಿ. ನಿಮ್ಮ ಸತ್ಯಸಂಧತೆಯನ್ನು ನಾನು ಎಷ್ಟರಮಟ್ಟಿಗೆ ಕಂಡಿದ್ದೇನೆಂದರೆ, ನನಗೆ ಆಧಾರಗಳ ಅಗತ್ಯವೇ ಇಲ್ಲ. ನನ್ನ ಸ್ನೇಹಿತನೇ, ನಿಮ್ಮ ಮುಖವನ್ನು ನೋಡಿದವನು ನಿಮ್ಮ ಮಾತನ್ನು ಹೇಗೆ ಸಂದೇಹಿಸಲು ಸಾಧ್ಯ?'

ವರಖ ಬಿನ್ ನೌಫಲ್ ಹೇಳಿದಂತೆ, 'ಯಾವ ವ್ಯಕ್ತಿಯೂ ಇಂತಹ ಸಂದೇಶವನ್ನು ತಂದಾಗ ಜನರ ವಿರೋಧದಿಂದ ತಪ್ಪಿಸಿಕೊಂಡಿಲ್ಲ', ವಿರೋಧ ಬರುವುದು ಖಚಿತವಾಗಿತ್ತು. ಆದರೆ ದೇವನ ಯೋಜನೆಯನ್ನು ನೋಡಿರಿ! ವಿರೋಧದ ಚಂಡಮಾರುತವು ಬರುವ ಮೊದಲೇ, ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ಯಾವ ರೀತಿ ಸಹಾಯಕರನ್ನು ಮಾಡಿಕೊಟ್ಟನು. ಇಸ್ರಾಯೇಲಿ ವಿದ್ವಾಂಸ ವರಖ, ಪ್ರೀತಿಯ ಪತ್ನಿ ಖದೀಜಾ(ರ), ಮನೆಯಲ್ಲಿದ್ದ ಬಾಲಕ ಅಲಿ(ರ), ವಿಮೋಚಿತ ಗುಲಾಮ ಝೈದ್(ರ) ಮತ್ತು ಬಾಲ್ಯದ ಸ್ನೇಹಿತ ಅಬೂಬಕರ್(ರ) ಈ ಎಲ್ಲರೂ ಅವರ ಪ್ರಾಮಾಣಿಕತೆ ಮತ್ತು ಸತ್ಯಸಂಧತೆಯನ್ನು ನೋಡಿ ವಿಶ್ವಾಸವಿಟ್ಟರು. ಈ ನಿಷ್ಠೆಯ ಪ್ರದರ್ಶನವನ್ನು ಕಂಡು ಹಝ್ರತ್ ಪೈಗಂಬರ್(ಸ) ಎಷ್ಟು ಸಂತೋಷಪಟ್ಟಿರಬಹುದು. ಮಕ್ಕಾದ ಜನರು ಅವರನ್ನು ಮಾಂತ್ರಿಕ, ಮೋಸಗಾರ ಎಂದು ದೂಷಿಸುತ್ತಿದ್ದಾಗ, 'ನನ್ನನ್ನು ತಿಳಿಯದವರು ಈ ಮಾತು ಹೇಳುತ್ತಿದ್ದಾರೆ, ಆದರೆ ನನ್ನನ್ನು ಹತ್ತಿರದಿಂದ ಬಲ್ಲವರ ಸಾಕ್ಷ್ಯವನ್ನು ನೋಡಿ' ಎಂದು ಅವರು ಮುಗುಳ್ನಕ್ಕಿರಬಹುದು. ಕರ್ತವ್ಯವನ್ನು ನೆರವೇರಿಸಲು ಹಝ್ರತ್ ಮೂಸಾ(ಅ) ಒಬ್ಬ ಸಹಾಯಕರನ್ನು ಬೇಡಿ ಪಡೆದಿದ್ದರು, ಆದರೆ ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನು ಬೇಡದೆಯೇ ಐದು ಸಹಾಯಕರನ್ನು ನೀಡಿದನು. ಆ ಸಹಾಯಕರು ಎಂತಹವರೆಂದರೆ, ಹಝ್ರತ್ ಪೈಗಂಬರ್(ಸ)ರ ಹೊರೆ ಹಂಚಿಕೊಳ್ಳುವಲ್ಲಿ ಅವರು ಅದ್ಭುತ ಸಾಧನೆ ಮಾಡಿದರು. ವರಖ ಬಿನ್ ನೌಫಲ್ ಬೇಗನೇ ತೀರಿಕೊಂಡರು ಎಂಬುದು ನಿಜ, ಆದರೆ ಅವರು ಹಝ್ರತ್ ಪೈಗಂಬರ್(ಸ)ರ ಸತ್ಯಸಂಧತೆಯ ಮೇಲೆ ಎಂದಿಗೂ ಅಳಿಸಲಾಗದ ಸಾಕ್ಷ್ಯವನ್ನು ನೀಡಿ ಹೋದರು. ಹಝ್ರತ್ ಖ಼ದೀಜ(ರ) ಹನ್ನೆರಡು ವರ್ಷಗಳ ಕಾಲ ಓರ್ವ ಮಹಿಳೆಯಾಗಿ ಎಂತಹ ಸಾಧನೆ ಮಾಡಿ ತೋರಿಸಿದರೆಂದರೆ, ಅತ್ಯಂತ ಶೂರನಾದ ಪುರುಷನ ಕಣ್ಣುಗಳು ಕೂಡ ತಗ್ಗುವಂತಾಗುತ್ತವೆ. ಹಝ್ರತ್ ಝೈದ್(ರ) ಇಪ್ಪತ್ತು ವರ್ಷಗಳ ಕಾಲ ತ್ಯಾಗದ ಅಪ್ರತಿಮ ಮಾದರಿಯನ್ನು ತೋರಿಸಿದರು ಮತ್ತು ಕೊನೆಗೆ ಖಡ್ಗಗಳ ಧಾರೆಯೆದುರು ತಮ್ಮ ರಕ್ತವನ್ನು ಸುರಿಸಿ, ಹಝ್ರತ್ ಪೈಗಂಬರ್(ಸ)ರ ಸಹಾಯಕ ಹೇಗಿರಬೇಕು ಎಂಬುದನ್ನು ಸಾಬೀತುಪಡಿಸಿದರು. ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಅಲಿ(ರ) ಹಝ್ರತ್ ಪೈಗಂಬರ್(ಸ)ರ ಮರಣದ ನಂತರ ಸಹ ಇದ್ದುಕೊಂಡು ಖಲೀಫರಾಗಿ ಸಹಾಯದ ಹೊಸ ರೀತಿಯನ್ನು ಪ್ರಕಟಿಸಿದರು."

(ತಫ್ಸೀರ್ ಕಬೀರ್, ಸಂಪುಟ–13, ಪುಟ–201–202, 2023 ಆವೃತ್ತಿ)

ಅವರ ಮಾದರಿಯನ್ನು ವಿವರಿಸುತ್ತಾ ಇನ್ನೊಂದು ಕಡೆ ಹೇಳುತ್ತಾರೆ:

"ಸತ್ಯವಂತ ಮತ್ತು ಪ್ರಾಮಾಣಿಕನ ಸತ್ಯತೆಗೆ ಇರುವ ಅತ್ಯಂತ ಪ್ರಬಲವಾದ

ಆಧಾರಗಳಲ್ಲಿ ಒಂದು ಅವನ ಸ್ವಂತ ವ್ಯಕ್ತಿತ್ವವೇ ಆಗಿದೆ, ಅದು ಕೂಗಿ ಹೇಳುತ್ತದೆ, ಪದೇ ಪದೇ ಕೂಗಿ ಹೇಳುತ್ತದೆ. ವಿರೋಧಿಗಳಿಗೆ ಮತ್ತು ಬೆಂಬಲಿಗರಿಗೆ, ಪರಿಚಿತರಿಗೆ ಮತ್ತು ಅಪರಿಚಿತರಿಗೆ, ಅನ್ಯರಿಗೆ ಮತ್ತು ಆಪ್ತರಿಗೆ ಹೇಳುತ್ತದೆ: 'ನನ್ನನ್ನು ನೋಡಿರಿ ಮತ್ತು ನನ್ನನ್ನು ಸುಳ್ಳನೆಂದು ಕರೆಯುವ ಮುನ್ನ, ನೀವು ನನ್ನನ್ನು ಸುಳ್ಳನೆಂದು ಕರೆಯಲು ಸಾಧ್ಯವೇ ಎಂದು ಸ್ವಲ್ಪ ಯೋಚಿಸಿರಿ. ನನ್ನನ್ನು ಸುಳ್ಳನೆಂದು ಕರೆದರೆ, ನೀವು ಯಾವುದೇ ವಸ್ತುವಿನ ನೈಜತೆಯನ್ನು ಅರಿಯಲು ಬಳಸುವ ಎಲ್ಲ ಮಾಪನಗಳು ನಿಮ್ಮ ಕೈತಪ್ಪಿ ಹೋಗುವುದಿಲ್ಲವೇ? ನನ್ನ ಮೇಲೆ ಅಪವಾದ ಹೊರಿಸಿದರೆ, ನೀವು ನಿಮ್ಮ ಗುರಿಯನ್ನು ತಲುಪಲು ಬಳಸುತ್ತಿದ್ದ ಎಲ್ಲ ಬಾಗಿಲುಗಳು ನಿಮ್ಮ ಮೇಲೆ ಮುಚ್ಚಲ್ಪಡುವುದಿಲ್ಲವೇ?'

ಪ್ರಪಂಚದ ಪ್ರತಿಯೊಂದು ವಸ್ತುವೂ ಒಂದು ಕ್ರಮವನ್ನು ಅನುಸರಿಸುತ್ತದೆ ಮತ್ತು ಪ್ರತಿಯೊಂದಕ್ಕೂ ಹಂತಗಳಿರುತ್ತವೆ. ಒಳ್ಳೆಯತನವು ಮಧ್ಯದ ಹಂತಗಳನ್ನು ಬಿಟ್ಟು ತನ್ನ ಪರಿಪೂರ್ಣತೆಯನ್ನು ತಲುಪಲಾರದು, ಹಾಗೆಯೇ ಕೆಟ್ಟತನವು ಮಧ್ಯದ ಹಂತಗಳನ್ನು ಬಿಟ್ಟು ತನ್ನ ಪರಾಕಾಷ್ಠೆಯನ್ನು ತಲುಪಲಾರದು. ಹಾಗಿದ್ದಾಗ, ಪಶ್ಚಿಮದ ಕಡೆಗೆ ಓಡುತ್ತಿರುವವನು ಹಠಾತ್ತನೆ ತನ್ನನ್ನು ತಾನು ಪೂರ್ವದ ತುದಿಯಲ್ಲಿ ಕಾಣಲು ಹೇಗೆ ಸಾಧ್ಯ? ಓಡುತ್ತಿರುವುದು ಒಂದು ಕಡೆ ಮತ್ತು ತಲುಪುವುದು ಇನ್ನೊಂದು ಕಡೆ ಎಂಬುದು ಅಸಾಧ್ಯ, ಮತ್ತು ದಕ್ಷಿಣದ ಕಡೆಗೆ ಹೋಗುವವನು ತನ್ನನ್ನು ಉತ್ತರ ದಿಗಂತದಲ್ಲಿ ಕಾಣಲು ಸಾಧ್ಯವಿಲ್ಲ.

ಹಝ್ರತ್ ಪೈಗಂಬರ್(ಸ) ಜನರಿಗೆ ಹೇಳಿದರು: 'ನಾನು ನನ್ನ ಇಡೀ ಜೀವನವನ್ನು ನಿಮ್ಮ ನಡುವೆಯೇ ಕಳೆದಿದ್ದೇನೆ. ನಾನು ಚಿಕ್ಕವನಾಗಿದ್ದೆ ಮತ್ತು ನಿಮ್ಮ ಕೈಗಳಲ್ಲೇ ಬೆಳೆದೆ. ನಾನು ಯುವಕನಾಗಿದ್ದೆ ಮತ್ತು ನಿಮ್ಮ ನಡುವೆಯೇ ವಯಸ್ಸಾದೆ. ನನ್ನ ಏಕಾಂತದ ಮತ್ತು ಸಾರ್ವಜನಿಕ ಜೀವನದ ಘಟನೆಗಳು ನಿಮ್ಮ ಮುಂದೆಯೇ ಇವೆ. ನನ್ನ ಯಾವ ಕೃತಿಯೂ ನಿಮ್ಮಿಂದ ಮರೆಯಾಗಿಲ್ಲ, ಯಾವ ಮಾತೂ ನಿಮ್ಮಿಂದ ಗುಪ್ತವಾಗಿಲ್ಲ. ನಾನೆಂದಾದರೂ ಸುಳ್ಳು ಹೇಳಿದ್ದೆ ಎಂದು ನಿಮ್ಮಲ್ಲಿ ಯಾರಾದರೂ ಹೇಳಬಲ್ಲಿರಾ?'

ಹಝ್ರತ್ ಪೈಗಂಬರ್(ಸ) ಈ ಘೋಷಣೆ ಮಾಡುತ್ತಿದ್ದಾರೆ: 'ನಾನು ಎಂದಾದರೂ ಸುಳ್ಳು ಹೇಳಿದ್ದೇನೆ, ಅಥವಾ ದೌರ್ಜನ್ಯ ಮಾಡಿದ್ದೇನೆ, ಅಥವಾ ವಂಚಿಸಿದ್ದೇನೆ, ಅಥವಾ ಮೋಸ ಮಾಡಿದ್ದೇನೆ, ಅಥವಾ ಯಾರಿಗಾದರೂ ಅನ್ಯಾಯ ಮಾಡಿದ್ದೇನೆ, ಅಥವಾ ನನ್ನ ಮೇಲರಿಮೆಯನ್ನು ಬಯಸಿದ್ದೇನೆ, ಅಥವಾ ಅಧಿಕಾರ ಪಡೆಯಲು ಪ್ರಯತ್ನಿಸಿದ್ದೇನೆ ಎಂದು ಹೇಳಬಲ್ಲವರಾರಾದರೂ ಇದ್ದೀರಾ? ಪ್ರತಿಯೊಂದು ರಂಗದಲ್ಲೂ ನೀವು ನನ್ನನ್ನು ಪರೀಕ್ಷಿಸಿದ್ದೀರಿ ಮತ್ತು ಪ್ರತಿಯೊಂದು ಪರಿಸ್ಥಿತಿಯಲ್ಲೂ ನೀವು ನನ್ನನ್ನು ಅಳೆದಿದ್ದೀರಿ, ಆದರೆ ನೀವು ಸದಾ ನನ್ನ ಹೆಜ್ಜೆಗಳನ್ನು ಮಧ್ಯಮ ಮಾರ್ಗದಲ್ಲಿಯೇ ಕಂಡಿದ್ದೀರಿ, ಯಾವಾಗಲೂ ಮಿತವಾಗಿ ನಡೆಯುವುದನ್ನು ನೋಡಿದ್ದೀರಿ ಮತ್ತು ನನ್ನನ್ನು ಪ್ರತಿಯೊಂದು ಕಲ್ಮಶದಿಂದಲೂ ಮುಕ್ತವಾಗಿ ಕಂಡುಕೊಂಡಿದ್ದೀರಿ, ಎಷ್ಟರಮಟ್ಟಿಗೆ ಎಂದರೆ ಶತ್ರುಗಳು ಮತ್ತು ಮಿತ್ರರಿಂದ ನಾನು 'ಅಮೀನ್' ಮತ್ತು 'ಸಾದಿಕ್' ಎಂಬ ಬಿರುದನ್ನು ಪಡೆದಿದ್ದೇನೆ. ಹಾಗಿದ್ದಾಗ, ನಿನ್ನೆ ಸಂಜೆಯವರೆಗೆ ನಾನು ಅಮೀನ್ ಆಗಿದ್ದೆ, ಸಾದಿಕ್ ಆಗಿದ್ದೆ, ಸತ್ಯವಂತನಾಗಿದ್ದೆ, ಸುಳ್ಳಿನಿಂದ ಮೈಲುಗಳಷ್ಟು ದೂರವಿದ್ದೆ, ಸತ್ಯಕ್ಕಾಗಿ ಪ್ರಾಣವನ್ನೇ ಮುಡಿಪಾಗಿಟ್ಟಿದ್ದೆ, ಅಷ್ಟೇ ಅಲ್ಲದೆ ಸತ್ಯವೇ ನನ್ನ ಮೇಲೆ ಹೆಮ್ಮೆಪಡುತ್ತಿತ್ತು, ಪ್ರತಿಯೊಂದು ಮಾತು ಮತ್ತು ವ್ಯವಹಾರದಲ್ಲಿ ನೀವು ನನ್ನನ್ನು ನಂಬುತ್ತಿದ್ದಿರಿ ಮತ್ತು ನನ್ನ ಪ್ರತಿಯೊಂದು ಮಾತನ್ನು ಒಪ್ಪಿಕೊಳ್ಳುತ್ತಿದ್ದಿರಿ; ಆದರೆ ಇಂದು ಕೇವಲ ಒಂದೇ ದಿನದಲ್ಲಿ ಎಂತಹ ಬದಲಾವಣೆಯಾಯಿತೆಂದರೆ, ನಾನು ಅತಿ ಕೆಟ್ಟವನಾಗಿ ಮತ್ತು ಹೊಲಸಾದವನಾಗಿ ಬದಲಾದೆನೇ? ಕೇವಲ ಒಂದು ವಾದದಿಂದಾಗಿ, ಮನುಷ್ಯರ ಮೇಲೆಯೇ ಎಂದೂ ಸುಳ್ಳು ಹೇಳಿರದ ನಾನು ಈಗ ದೇವನ ಮೇಲೆ ಸುಳ್ಳು ಹೇಳಲು ಸಾಧ್ಯವೇ? ಇಷ್ಟೊಂದು ಬದಲಾವಣೆ ಮತ್ತು ಮಾರ್ಪಾಡಿಗೆ ಪ್ರಕೃತಿಯ ನಿಯಮದಲ್ಲಿ ಎಲ್ಲಾದರೂ ಉದಾಹರಣೆ ಸಿಗುತ್ತದೆಯೇ?'

'ಒಂದೆರಡು ದಿನಗಳ ಮಾತಾಗಿದ್ದರೆ, ನಟನೆಯಿಂದ ಹೀಗಾಗಿದ್ದಾನೆ ಎಂದು ನೀವು ಹೇಳಬಹುದಿತ್ತು. ಒಂದು ಅಥವಾ ಎರಡು ವರ್ಷಗಳ ವಿಷಯವಾಗಿದ್ದರೆ, ನಮಗೆ ಮೋಸ ಮಾಡಲು ಈ ಮಾರ್ಗವನ್ನು ಆರಿಸಿಕೊಂಡಿದ್ದಾನೆ ಎಂದು ನೀವು ಹೇಳಬಹುದಿತ್ತು. ಆದರೆ ನನ್ನ ಇಡೀ ಜೀವಮಾನವನ್ನೇ ನಿಮ್ಮ ನಡುವೆ ಕಳೆದಿದ್ದೇನೆ. ನನ್ನ ಬಾಲ್ಯವನ್ನು ನೀವು ನೋಡಿದ್ದೀರಿ, ಯೌವನವನ್ನು ನೀವು ಗಮನಿಸಿದ್ದೀರಿ, ಮತ್ತು ಮುಪ್ಪಿನ ಹಂತ (ವೃದ್ಧಾಪ್ಯ ಪ್ರಾರಂಭವಾಗುವ ಕಾಲ) ನಿಮ್ಮ ಕಣ್ಣೆದುರೇ ಕಳೆದಿದೆ. ಇಷ್ಟೊಂದು ನಟನೆ ಮತ್ತು ಇಷ್ಟೊಂದು ಕೃತಕತೆ ಹೇಗೆ ಸಾಧ್ಯವಿತ್ತು? ಒಳಿತು ಕೆಡುಕುಗಳ ಅರಿವೇ ಇರದ ಬಾಲ್ಯದಲ್ಲಿ ನಾನು ಹೇಗೆ ನಟಿಸಿದೆ? ಹುಚ್ಚುತನವೆನಿಸುವ ಯೌವನದಲ್ಲಿ ನನ್ನ ನೈಜ ಸ್ಥಿತಿಯನ್ನು ನಾನು ಹೇಗೆ ಮೋಸದಿಂದ ಮರೆಮಾಚಿದೆ? ಕೊನೆಗೂ ಸ್ವಲ್ಪವಾದರೂ ಯೋಚಿಸಿ, ಈ ಮೋಸ ಯಾವಾಗ ನಡೆಯಿತು ಮತ್ತು ಯಾರು ಮಾಡಿದರು? ಮತ್ತು ನೀವು ಆಳವಾಗಿ ಆಲೋಚಿಸಿ ನನ್ನ ಜೀವನವನ್ನು ದೋಷರಹಿತ ಮತ್ತು ನಿಷ್ಕಳಂಕವಾಗಿ ಕಂಡುಕೊಂಡರೆ, ಮತ್ತು ಅದನ್ನು ಸದ್ಗುಣಗಳ ಮೂರ್ತಿಯಾಗಿ ಹಾಗೂ ಸತ್ಯಸಂಧತೆಯ ಪ್ರತೀಕವಾಗಿ ಕಂಡರೆ, ಸೂರ್ಯನನ್ನು ನೋಡುತ್ತಾ ರಾತ್ರಿ ಎಂದು ಘೋಷಿಸದಿರಿ. ಹಗಲು ಮೂಡಿದೆ, ಆದರೂ ರಾತ್ರಿಯಾಗಿದೆ ಎಂದು ಹೇಳದಿರಿ. ನನ್ನ ಮಾತುಗಳು ಹಗಲಿನ ಬೆಳಕಿನಷ್ಟೇ ಸ್ಪಷ್ಟವಾಗಿವೆ, ಮತ್ತು ಬೆಳಕಿನ ಉಪಸ್ಥಿತಿಯಲ್ಲಿ ಕತ್ತಲೆಯನ್ನು ಆಕ್ಷೇಪಿಸುವವರಾಗಬೇಡಿ.'

'ನನ್ನ ಸ್ವಂತ ವ್ಯಕ್ತಿತ್ವವನ್ನು ಬಿಟ್ಟು ನಿಮಗೆ ಬೇರೆ ಆಧಾರದ ಅಗತ್ಯವಿದೆಯೇ? ನನ್ನ ವ್ಯಕ್ತಿತ್ವವೇ ಅತಿ ದೊಡ್ಡ ಆಧಾರವಾಗಿದೆ, ಮತ್ತು ನನ್ನ ಹಿಂದಿನ ನಡವಳಿಕೆಯನ್ನು ಬಿಟ್ಟು ಬೇರೆ ಯಾವುದೇ ಪುರಾವೆಯ ಅಗತ್ಯವಿದೆಯೇ? ನನ್ನ ಇಡೀ ಹಿಂದಿನ ಜೀವನ ನಿಮ್ಮ ಮುಂದಿದೆ, ಆದರೂ ನೀವು ಯಾವುದಾದರೂ ಪುರಾವೆ ನೀಡಿ ಎಂದು ಹೇಳುತ್ತೀರಿ. ನನ್ನ ವ್ಯಕ್ತಿತ್ವವೇ ನನಗೆ ಸಾಕ್ಷಿಯಾಗಿದೆ ಮತ್ತು ನನ್ನ ಜೀವನವೇ ನನಗೆ ಪುರಾವೆಯಾಗಿದೆ. ನಿಮ್ಮಲ್ಲಿ ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಂಡರೆ, ಅವನ ಹೃದಯ ಮತ್ತು ಮನಸ್ಸು ಕೂಡ ಈ ವಿಷಯಕ್ಕೆ ಸಾಕ್ಷಿ ನುಡಿಯುತ್ತದೆ, ಅದೆಂದರೆ ಸತ್ಯಸಂಧತೆಯು ಇವನಲ್ಲಿ ನೆಲೆಸಿದೆ ಮತ್ತು ಇವನು ಸತ್ಯಸಂಧತೆಯಿಂದಲೇ ನಿಂತಿದ್ದಾನೆ. ಸತ್ಯವು ಇವನ ಮೇಲೆ ಹೆಮ್ಮೆಪಡುತ್ತದೆ ಮತ್ತು ಇವನಿಗೆ ಸತ್ಯದ ಮೇಲೆ ಹೆಮ್ಮೆಯಿದೆ. ಇದು ತನ್ನ ಸತ್ಯತೆಯನ್ನು ಸಾಬೀತುಪಡಿಸಲು ಬೇರೆ ವಸ್ತುಗಳ ಅವಲಂಬಿತವಾಗಿಲ್ಲ. ಇದರ ಉದಾಹರಣೆ ಸೂರ್ಯೋದಯವೇ ಸೂರ್ಯನ ಅಸ್ತಿತ್ವಕ್ಕೆ ಸಾಕ್ಷಿಯಾಗಿದೆ ಎಂಬಂತಿದೆ.'

ಇದೇ ಪ್ರಬಲ ಆಧಾರವು ಹಝ್ರತ್ ಅಬೂಬಕರ್(ರ)ರ ಹೃದಯವನ್ನು ಗೆದ್ದಿತ್ತು ಮತ್ತು ಸತ್ಯವನ್ನು ಪ್ರೀತಿಸುವ ಪ್ರತಿಯೊಬ್ಬರ ಹೃದಯವನ್ನೂ ಈ ಪ್ರಬಲ ಆಧಾರವು ಸದಾ ಗೆಲ್ಲುತ್ತಲೇ ಇರುತ್ತದೆ.

ಹಝ್ರತ್ ಪೈಗಂಬರ್(ಸ) ಪ್ರವಾದಿತ್ವವನ್ನು ಘೋಷಿಸಿದಾಗ, ಹಝ್ರತ್ ಅಬೂಬಕರ್ ತಮ್ಮೊಬ್ಬ ಸ್ನೇಹಿತನ ಮನೆಯಲ್ಲಿದ್ದರು. ಅಲ್ಲಿಗೆ ಬಂದ ಒಬ್ಬ ವಿಮೋಚಿತ ದಾಸಿಯು ಅವರಿಗೆ ತಿಳಿಸಿದಳು: 'ನಿಮ್ಮ ಸ್ನೇಹಿತನ ಪತ್ನಿ ಹೇಳುತ್ತಿದ್ದಾಳೆ, ಅವಳ ಗಂಡ ಮೂಸಾ(ಅ)ರ ರೀತಿಯ ಪ್ರವಾದಿಯಾಗಿದ್ದಾನಂತೆ.' ಅವರು ಕೂಡಲೇ ಎದ್ದು ರಸೂಲುಲ್ಲಾಹ್(ಸ)ರ ಮನೆಗೆ ಹೋದರು ಮತ್ತು ಅವರನ್ನು ಕೇಳಿದರು: 'ನೀವು ದೇವನ ಪ್ರವಾದಿ ಎಂದು ಹೇಳಿದ್ದೀರಾ?' ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್ ರೊಡನೆ: 'ಹೌದು, ನಾನು ದೇವನ ಪ್ರವಾದಿ' ಎಂದು ಹೇಳಿದರು. ಹಝ್ರತ್ ಅಬೂಬಕರ್ ಈ ಮಾತನ್ನು ಕೇಳಿದ ತಕ್ಷಣವೇ ಅವರ ವಾದವನ್ನು ಒಪ್ಪಿಕೊಂಡರು. ಅದರಂತೆ, ರಸೂಲುಲ್ಲಾಹ್(ಸ) ಕೂಡ ಅವರ ವಿಶ್ವಾಸದ ಬಗ್ಗೆ ಹೀಗೆ ಹೇಳುತ್ತಿದ್ದರು: 'ನಾನು ಯಾರನ್ನೇ ಇಸ್ಲಾಮಿನ ಕಡೆಗೆ ಕರೆದರೂ, ಅವರ ಕಡೆಯಿಂದ ಸ್ವಲ್ಪ ಮಟ್ಟಿನ ತಡೆ, ಚಿಂತೆ ಮತ್ತು ಹಿಂಜರಿಕೆ ವ್ಯಕ್ತವಾಯಿತು. ಆದರೆ ನಾನು ಅಬೂಬಕರ್ ಮುಂದೆ ಇಸ್ಲಾಮನ್ನು ಪ್ರಸ್ತುತಪಡಿಸಿದಾಗ, ಅವರು ಕಿಂಚಿತ್ತೂ ಹಿಂಜರಿಯಲಿಲ್ಲ, ಬದಲಾಗಿ ಅವರೇ ಇಸ್ಲಾಮನ್ನು ಒಪ್ಪಿಕೊಂಡರು.' ಯಾವುದೇ ನಿದರ್ಶನವನ್ನು ನೋಡದೆಯೇ ರಸೂಲುಲ್ಲಾಹ್(ಸ)ರ ಮೇಲೆ ವಿಶ್ವಾಸವಿಡುವಂತೆ ಹಝ್ರತ್ ಅಬೂಬಕರ್ ರನ್ನು ಪ್ರೇರೇಪಿಸಿದ್ದು ಯಾವುದು? ಅದು ರಸೂಲುಲ್ಲಾಹ್(ಸ)ರ ಪರಿಶುದ್ಧ ವ್ಯಕ್ತಿತ್ವವಾಗಿತ್ತು, ಅದು ತನ್ನ ಸತ್ಯತೆಗೆ ತಾನೇ ಸಾಕ್ಷಿಯಾಗಿತ್ತು. ಅದೇ ರೀತಿ ಹಝ್ರತ್ ಖದೀಜ(ರ), ಹಝ್ರತ್ ಅಲಿ(ರ) ಮತ್ತು ಹಝ್ರತ್ ಝೈದ್ ಬಿನ್ ಹಾರಿಸ್(ರ) ಅವರ ಸಾಕ್ಷ್ಯಗಳ ಬಗ್ಗೆ ನಾನು ಈಗಾಗಲೇ ವಿವರಿಸಿದ್ದೇನೆ. ಅವರೆಲ್ಲರೂ ನಿಮ್ಮ ಸತ್ಯಸಂಧತೆಯನ್ನು ನೋಡಿ ಇದಕ್ಕೆ ಸಾಕ್ಷಿಯಾಗಿದ್ದರು. ಸಾರಾಂಶವೇನೆಂದರೆ, ಪ್ರವಾದಿಯ ಸತ್ಯತೆಗೆ ಇರುವ ಮೊದಲ ಆಂತರಿಕ ಆಧಾರವು ಅವನ ಸ್ವಂತ ವ್ಯಕ್ತಿತ್ವವಾಗಿರುತ್ತದೆ, ಅದು ಮೌನವಾಗಿಯೇ ಅವನ ಸತ್ಯತೆಗೆ ಸಾಕ್ಷಿಯಾಗಿರುತ್ತದೆ ಮತ್ತು ಅದರ ಸಾಕ್ಷ್ಯವು ಎಷ್ಟೊಂದು ಪ್ರಬಲವಾಗಿರುತ್ತದೆಯೆಂದರೆ, ಅದರ ಉಪಸ್ಥಿತಿಯಲ್ಲಿ ಬೇರೆ ಯಾವುದೇ ಪವಾಡ ಅಥವಾ ನಿದರ್ಶನದ ಅಗತ್ಯವೇ ಉದ್ಭವಿಸುವುದಿಲ್ಲ.

(ದಅ್‌ವತುಲ್ ಅಮೀರ್, ಅನ್ವಾರುಲ್ ಉಲೂಮ್, ಸಂಪುಟ–7, ಪುಟ–425–428)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ದೇವನ ವಾಕ್ಯದಿಂದ ತಿಳಿದುಬರುವುದೇನೆಂದರೆ, ದೇವಭಯವುಳ್ಳವರು (ಮುತ್ತಖಿ) ಸೌಮ್ಯತೆ ಮತ್ತು ವಿನಯದಿಂದ ನಡೆಯುತ್ತಾರೆ. ಅವರು ಅಹಂಕಾರದಿಂದ ಮಾತನಾಡುವುದಿಲ್ಲ. ಅವರ ಮಾತುಗಳು ಒಬ್ಬ ಚಿಕ್ಕವನು ದೊಡ್ಡವನೊಂದಿಗೆ ಮಾತನಾಡುವಂತಿರುತ್ತವೆ. ನಮ್ಮ ಉದ್ಧಾರಕ್ಕೆ ಕಾರಣವಾಗುವ ಕಾರ್ಯವನ್ನೇ ನಾವು ಪ್ರತಿಯೊಂದು ಪರಿಸ್ಥಿತಿಯಲ್ಲೂ ಮಾಡಬೇಕು. ಅಲ್ಲಾಹನು ಯಾರಿಗೂ ಗುತ್ತಿಗೆದಾರನಲ್ಲ. ಅವನು ಕೇವಲ ಪರಿಶುದ್ಧವಾದ ದೇವಭಯವನ್ನು ಬಯಸುತ್ತಾನೆ. ಯಾರು ದೇವಭಯವನ್ನು ಹೊಂದುತ್ತಾರೋ ಅವರು ಉನ್ನತ ಸ್ಥಾನವನ್ನು ತಲುಪುತ್ತಾರೆ. ಹಝ್ರತ್ ಪೈಗಂಬರ್(ಸ) ಅಥವಾ ಹಝ್ರತ್ ಇಬ್ರಾಹೀಂ(ಅ) ಕೇವಲ ವಂಶಪಾರಂಪರ್ಯವಾಗಿ ಈ ಗೌರವವನ್ನು ಪಡೆದಿಲ್ಲ. ಹಝ್ರತ್ ಪೈಗಂಬರ್(ಸ)ರ ತಂದೆ ಅಬ್ದುಲ್ಲಾ ಅವರು ಬಹುದೇವಾರಾಧಕರಾಗಿರಲಿಲ್ಲ (ಮುಶ್ರಿಕ್ ಆಗಿರಲಿಲ್ಲ) ಎಂಬುದು ನಮ್ಮ ನಂಬಿಕೆಯಾಗಿದೆ. ಜನರು ಈ ಬಗ್ಗೆಯೂ ಪ್ರಶ್ನೆಗಳನ್ನು ಎತ್ತುತ್ತಾರೆ, ಅದಕ್ಕೂ

ಇಲ್ಲಿ ಉತ್ತರ ಸಿಕ್ಕಿದೆ, ಅದೇನೆಂದರೆ ಅವರ ತಂದೆ ಅಬ್ದುಲ್ಲಾ ಅವರು ಮುಶ್ರಿಕ್ ಆಗಿರಲಿಲ್ಲ ಎಂಬುದು ನಮ್ಮ ನಂಬಿಕೆಯಾಗಿದೆ. ಆದರೆ ಕೇವಲ ಆ ಕಾರಣಕ್ಕಾಗಿ ಅವರಿಗೆ ಪ್ರವಾದಿತ್ವ ಸಿಗಲಿಲ್ಲ. ಅದು ಅಲ್ಲಾಹನ ಕೃಪೆಯಾಗಿತ್ತು ಮತ್ತು ಅವರಲ್ಲಿ ಸಹಜವಾಗಿದ್ದ ಸತ್ಯಸಂಧತೆಯ ಕಾರಣದಿಂದಲಾಗಿತ್ತು. ಅದೇ ಈ ಕೃಪೆಯ ಪ್ರೇರಕವಾಗಿತ್ತು.

ಪ್ರವಾದಿಗಳ ಪಿತಾಮಹರಾಗಿದ್ದ ಹಝ್ರತ್ ಇಬ್ರಾಹೀಂ(ಅ) ಕೂಡ ತಮ್ಮ ಸತ್ಯ ಮತ್ತು ದೇವಭಯದ ಕಾರಣದಿಂದಲೇ ತಮ್ಮ ಪುತ್ರನನ್ನು ಬಲಿಕೊಡಲು ಹಿಂಜರಿಯಲಿಲ್ಲ. ಅವರನ್ನೇ ಬೆಂಕಿಗೆ ಹಾಕಲಾಯಿತು. ಇದೇ ಕಾರಣಕ್ಕಾಗಿ ಅವರು ಬೆಂಕಿಗೆ ಬಿದ್ದರು.

ಅವರು ಹೇಳುತ್ತಾರೆ: "ನಮ್ಮ ನಾಯಕ ಮತ್ತು ಯಜಮಾನ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ)ರ ಸತ್ಯ ಮತ್ತು ನಿಷ್ಠೆಯನ್ನೇ ನೋಡಿರಿ; ಅವರು ಪ್ರತಿಯೊಂದು ರೀತಿಯ ಕೆಟ್ಟ ಯೋಜನೆಗಳನ್ನು ಎದುರಿಸಿದರು, ನಾನಾ ರೀತಿಯ ಕಷ್ಟ–ಕಾರ್ಪಣ್ಯಗಳನ್ನು ಸಹಿಸಿದರು, ಆದರೆ ಯಾವುದನ್ನೂ ಲೆಕ್ಕಿಸಲಿಲ್ಲ. ಇದೇ ಸತ್ಯ ಮತ್ತು ನಿಷ್ಠೆಯ ಕಾರಣದಿಂದ ಅಲ್ಲಾಹನು ಅವರ ಮೇಲೆ ಕೃಪೆ ತೋರಿದನು.

ಆದ್ದರಿಂದಲೇ ಅಲ್ಲಾಹನು ಹೀಗೆ ಹೇಳಿದ್ದಾನೆ, **'ಇನ್ನಲ್ಲಾಹ ವ ಮಲಾಯಿಕತಹು ಯುಸಲ್ಲೂನ ಅಲನ್ನಬಿಯ್ಯಿ, ಯಾ ಅಯ್ಯುಹಲ್ಲಧೀನ ಆಮನೂ ಸಲ್ಲೂ ಅಲೈಹಿ ವ ಸಲ್ಲಿಮೂ ತಸ್‌ಲೀಮಾ'**. ......'ನಿಶ್ಚಯವಾಗಿಯೂ ಅಲ್ಲಾಹನು ಮತ್ತು ಅವನ ಎಲ್ಲ ದೇವದೂತರು ಪ್ರವಾದಿಗೆ ಅನುಗ್ರಹಗಳನ್ನು ಸುರಿಸುತ್ತಾರೆ. ಎಲೈ ಸತ್ಯವಿಶ್ವಾಸಿಗಳೇ! ಪ್ರವಾದಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ.'

ರಸೂಲ್(ಸ)ರ ಕಾರ್ಯಗಳು ಎಷ್ಟೊಂದು ಶ್ರೇಷ್ಠವಾಗಿದ್ದವೆಂದರೆ, ಅಲ್ಲಾಹನು ಅವರ ಪ್ರಶಂಸೆ ಅಥವಾ ಗುಣಗಳನ್ನು ವಿವರಿಸಲು ಯಾವುದೇ ನಿರ್ದಿಷ್ಟ ಪದವನ್ನು ಬಳಸಲಿಲ್ಲ, ಅವರನ್ನು ಯಾವುದೇ ನಿರ್ದಿಷ್ಟ ಪದದೊಳಗೆ ಸೀಮಿತಗೊಳಿಸಲಿಲ್ಲ ಎಂದು ಈ ಆಯತ್ತಿನಿಂದ ಸ್ಪಷ್ಟವಾಗುತ್ತದೆ. ಪದಗಳು ಸಿಗಬಹುದಾಗಿತ್ತು, ಆದರೆ ಸ್ವತಃ ಆತನು ಅವುಗಳನ್ನು ಬಳಸಲಿಲ್ಲ. ಅಂದರೆ ಅವರ ಸತ್ಕಾರ್ಯಗಳ ಪ್ರಶಂಸೆಯು ಮಿತಿಗಳನ್ನು ಮೀರಿದ್ದಾಗಿತ್ತು. ಅವರ ಸತ್ಕಾರ್ಯಗಳು ಎಷ್ಟೊಂದು ಅಗಾಧವಾಗಿದ್ದವೆಂದರೆ ಅವುಗಳನ್ನು ನಾವು ಸೀಮಿತಗೊಳಿಸಲೇ ಸಾಧ್ಯವಿಲ್ಲ. ಇಂತಹ ಆಯತ್ತನ್ನು ಬೇರೆ ಯಾವುದೇ ಪ್ರವಾದಿಯ ಘನತೆಗಾಗಿ ಬಳಸಲಾಗಿಲ್ಲ. ಅವರ ಆತ್ಮದಲ್ಲಿ ಎಂತಹ ಸತ್ಯ ಮತ್ತು ಪರಿಶುದ್ಧತೆ ಇತ್ತೆಂದರೆ ಹಾಗೂ ಅವರ ಕಾರ್ಯಗಳು ದೇವನ ದೃಷ್ಟಿಯಲ್ಲಿ ಎಷ್ಟೊಂದು ಮೆಚ್ಚುಗೆಯಾಗಿದ್ದವೆಂದರೆ, ಇನ್ನು ಮುಂದೆ ಜನರು ಕೃತಜ್ಞತೆಯ ಸಂಕೇತವಾಗಿ ದುರೂದ್ ಪ್ರಾರ್ಥನೆ ಮಾಡಬೇಕೆಂದು ಅಲ್ಲಾಹನು ಶಾಶ್ವತವಾದ ಆದೇಶವನ್ನು ನೀಡಿದನು.

ಅವರ ಧೈರ್ಯ ಮತ್ತು ಸತ್ಯಸಂಧತೆ ಹೇಗಿತ್ತೆಂದರೆ, ನಾವು ಹಿಂದೆ ಮುಂದೆ ಎಲ್ಲಿ ನೋಡಿದರೂ ಅದರ ಉದಾಹರಣೆ ಸಿಗುವುದಿಲ್ಲ. ಸ್ವತಃ ಮಸೀಹರ ಕಾಲವನ್ನೇ ನೋಡಿರಿ, ಅವರ ಧೈರ್ಯ ಅಥವಾ ಆಧ್ಯಾತ್ಮಿಕ ಸತ್ಯ ಮತ್ತು ಪರಿಶುದ್ಧತೆಯ ಪ್ರಭಾವ ಅವರ ಅನುಯಾಯಿಗಳ ಮೇಲೆ ಎಷ್ಟರಮಟ್ಟಿಗೆ ಆಯಿತು ಎಂಬುದು ಗೋಚರಿಸುತ್ತದೆ. ಒಂದು ಕೆಟ್ಟ ನಡವಳಿಕೆಯನ್ನು ತಿದ್ದಿಕೊಳ್ಳುವುದು ಎಷ್ಟು ಕಷ್ಟ ಎಂದು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬಹುದು. ಬೇರೂರಿರುವ ಅಭ್ಯಾಸಗಳನ್ನು ತೊಡೆದುಹಾಕುವುದು ಅಸಾಧ್ಯದ ಮಾತಾಗಿದೆ. ಅಭ್ಯಾಸಗಳು ಪಕ್ಕಾ ಆದಾಗ, ಅವುಗಳನ್ನು ತಿದ್ದಿಕೊಳ್ಳುವುದು ಬಹಳ ಕಷ್ಟದ ಕೆಲಸವಾಗಿದೆ. ಆದರೆ ನಮ್ಮ ಪವಿತ್ರ ಪ್ರವಾದಿ(ಸ) ಪ್ರಾಣಿಗಳಿಗಿಂತ ನೀಚವಾಗಿದ್ದ ಸಾವಿರಾರು ಜನರನ್ನು ತಿದ್ದಿ ಸರಿದಾರಿಗೆ ತಂದರು. ಕೆಲವರು ತಾಯಂದಿರು ಮತ್ತು ಸಹೋದರಿಯರ ನಡುವೆ ಪ್ರಾಣಿಗಳಂತೆ ವ್ಯತ್ಯಾಸವನ್ನೇ ಕಾಣುತ್ತಿರಲಿಲ್ಲ. ಅನಾಥರ ಸಂಪತ್ತನ್ನು ತಿನ್ನುತ್ತಿದ್ದರು. ಮೃತರ ಸಂಪತ್ತನ್ನು ತಿನ್ನುತ್ತಿದ್ದರು. ಕೆಲವರು ನಕ್ಷತ್ರ ಪೂಜಕರಾಗಿದ್ದರು. ಕೆಲವರು ನಾಸ್ತಿಕರಾಗಿದ್ದರು. ಕೆಲವರು ಪಂಚಭೂತಗಳ ಆರಾಧಕರಾಗಿದ್ದರು. ಅರೇಬಿಯ ರಾಜ್ಯವು ಎಲ್ಲ ಧರ್ಮಗಳ ಸಂಗಮವಾಗಿತ್ತು. ಇದರಿಂದಾದ ದೊಡ್ಡ ಲಾಭವೇನೆಂದರೆ, ಪವಿತ್ರ ಖುರ್‌ಆನ್ ಪ್ರತಿಯೊಂದು ರೀತಿಯ ಬೋಧನೆಯನ್ನು ತನ್ನಲ್ಲಿ ಅಳವಡಿಸಿಕೊಂಡಿದೆ; ಲೋಕದಲ್ಲಿ ಅಸ್ತಿತ್ವದಲ್ಲಿರಬಹುದಾದ ಪ್ರತಿಯೊಂದು ತಪ್ಪು ನಂಬಿಕೆ ಅಥವಾ ತಪ್ಪು ಬೋಧನೆಯನ್ನು ನಿರ್ಮೂಲನೆ ಮಾಡಲು ಸಾಕಷ್ಟು ಬೋಧನೆಗಳು ಅದರಲ್ಲೇ ಇವೆ." (ಮಲ್‌ಫೂಝಾತ್, ಸಂಪುಟ–1, ಪುಟ–31–33, 2022 ಆವೃತಿ)

ಹಝ್ರತ್ ಪೈಗಂಬರ್(ಸ)ರನ್ನು ಅಲ್ಲಾಹನು ಕಳುಹಿಸಿದ್ದು, ಮತ್ತು ಅಜ್ಞಾನವು ಮಿತಿಮೀರಿದ್ದ ಕಾಲದಲ್ಲಿ ಕಳುಹಿಸಿ ಆ ಜಾನುವಾರುಗಳನ್ನು ಮನುಷ್ಯರನ್ನಾಗಿ ಮಾಡಿದ್ದು ಅಲ್ಲಾಹನ ಆಳವಾದ ಯುಕ್ತಿ ಮತ್ತು ಕೆಲಸ ಆಗಿದೆ.

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್.**

ಅಲ್ಲಾಹನು ನಮಗೂ ಅವರ ಅತ್ಯುತ್ತಮ ಮಾದರಿಯನ್ನು ಪಾಲಿಸುತ್ತಾ, ಪವಿತ್ರ ಖುರ್‌ಆನ್ ಮತ್ತು ಅದರ ಆಜ್ಞೆಗಳನ್ನು ಅನುಸರಿಸುತ್ತಾ ಸತ್ಯಸಂಧತೆಯ ಗುಣಮಟ್ಟವನ್ನು ಅತ್ಯುನ್ನತಗೊಳಿಸಲು ಸೌಭಾಗ್ಯ ನೀಡಲಿ.

**(ಅಲ್–ಫಝ್ಲ್ ಇಂಟರ್ನ್ಯಾಷನಲ್, 15 ಮೇ 2026, ಪುಟ–2–8)**

––––––––––––*****––––––––––––

# ವಿಶೇಷ ಪ್ರಾರ್ಥನೆಗಳಿಗಾಗಿ ಮನವಿ

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್ಮಹುಲ್ಲಾಹ್) ಕಂಡ ಒಂದು ಕನಸಿನ ಆಧಾರದಲ್ಲಿ ಅಮೀರುಲ್ ಮುಅ್‌ಮಿನೀನ್ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಜಮಾಅತ್ ಬಾಂಧವರಿಗೆ ವಿಶೇಷ ಪ್ರಾರ್ಥನೆಗಳನ್ನು ಮಾಡಲು ಮನವಿ ಮಾಡುತ್ತಾ ಹೀಗೆ ಹೇಳಿದರು: ಜಮಾಅತ್ ಬಾಂಧವರು ಈ ಕೆಳಗಿನ ಪ್ರಾರ್ಥನೆಗಳನ್ನು ಮಾಡುತ್ತಾ ಇರುವುದಾದರೆ ಶೈತಾನನು ಎಂದಿಗೂ ಪ್ರವೇಶಿಸಲು ಸಾಧ್ಯವಾಗದಂತಹ ಒಂದು ಸುದೃಢ ಕೋಟೆಯಲ್ಲಿ ಅವರು ಸುರಕ್ಷಿತರಾಗುವರು. ಆ ಕೋಟೆಯ ಗೋಡೆಗಳು ಕಬ್ಬಿಣದ್ದಾಗಿವೆ ಮತ್ತು ಅದು ಆಕಾಶದ ವರೆಗೆ ತಲುಪಿವೆ. ಆದ್ದರಿಂದ ನುಸುಳಿ ಬಂದು ಆಕ್ರಮಣ ಮಾಡಲು ಶೈತಾನನಿಗೆ ಯಾವ ಮಾರ್ಗವೂ ಇರುವುದಿಲ್ಲ.

**ಸುಬ್‌ಹಾನಲ್ಲಾಹಿ ವಬಿಹಮ್ದಿಹಿ ಸುಬ್‌ಹಾನಲ್ಲಾಹಿಲ್ ಅಝೀಮ್ – ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್.**

ಜಮಾಅತಿನ ಪ್ರತಿಯೊಬ್ಬ ಹಿರಿಯ ಸದಸ್ಯರು ದಿನನಿತ್ಯ ಈ ಪ್ರಾರ್ಥನೆಯನ್ನು 200 ಬಾರಿ ಪಠಿಸಬೇಕು.

15 ರಿಂದ 25 ವಯಸ್ಸಿನ ಸದಸ್ಯರು ಇದನ್ನು ದಿನನಿತ್ಯ ಕನಿಷ್ಠ 100 ಬಾರಿ ಪಠಿಸಬೇಕು.

ಮಕ್ಕಳು ಕನಿಷ್ಠ 33 ಬಾರಿ ದಿನನಿತ್ಯ ಇದನ್ನು ಪಠಿಸಬೇಕು.

ಚಿಕ್ಕ ಮಕ್ಕಳಿಗೆ ಹೆತ್ತವರು 3–4 ಬಾರಿ ಹೇಳಿಕೊಡಬೇಕು.

2ನೇ ಪ್ರಾರ್ಥನೆ: ಇಸ್ತಿಗ್‌ಫಾರ್

**ಅಸ್ತಗ್‌ಫಿರುಲ್ಲಾಹ ರಬ್ಬೀ ಮಿನ್ ಕುಲ್ಲಿ ಧಂಬಿನ್ ವ ಅತೂಬು ಇಲೈಹಿ.**

100 ಬಾರಿ ದಿನನಿತ್ಯ ಪಠಿಸಬೇಕು.

ಹುಝೂರ್(ಅಯ್ಯದಹುಲ್ಲಾಹ್) ಹೇಳಿದರು: ನಾನು ಈ ಪ್ರಾರ್ಥನೆಯನ್ನು ಸಹ ಇದರಲ್ಲಿ ಸೇರಿಸುತಿದ್ದೇನೆ.

3ನೇ ಪ್ರಾರ್ಥನೆ:

**ರಬ್ಬಿ ಕುಲ್ಲು ಶೈಇನ್ ಖಾದಿಮುಕ ರಬ್ಬಿ ಫಹ್‌ಫಝ್ನೀ ವನ್‌ಸುರ್‌ನೀ ವರ್‌ಹಮ್‌ನೀ**

100 ಬಾರಿ ದಿನನಿತ್ಯ ಪಠಿಸಬೇಕು.

ಹುಝೂರ್(ಅಯ್ಯದಹುಲ್ಲಾಹ್) ಹೇಳಿದರು: "ಇತ್ತೀಚಿನ ದಿನಗಳಲ್ಲಿ ಶೈತಾನನು ನಾನಾ ರೀತಿಯಲ್ಲಿ ಜಮಾಅತಿನ ಮೇಲೂ ಮತ್ತು ಸಾಮೂಹಿಕ ನೆಲೆಯಲ್ಲೂ ನಮ್ಮ ಮೇಲೆ ಆಕ್ರಮಣ ಮಾಡಲು ಹವಣಿಸುತಿದ್ದಾನೆ. ಈ ಲೋಕದಲ್ಲಿ ಶೈತಾನನ ಆಕ್ರಮಣಗಳಿಂದ ರಕ್ಷಣೆ ಪಡೆಯಲು ಇರುವ ಒಂದೇ ಮಾರ್ಗವೇನೆಂದರೆ, ವಿಶೇಷವಾಗಿ ಪ್ರಾರ್ಥನೆಗಳಿಗೆ ಒತ್ತು ನೀಡುವುದಾಗಿದೆ. ಜಲ್ಸದ ದಿನಗಳಲ್ಲಿ ಮಾತ್ರವಲ್ಲ, ಬದಲಾಗಿ ಯಾವಾಗಲೂ ದುರೂದ್ ಪ್ರಾರ್ಥನೆ, ದೇವಸ್ಮರಣೆ ಮತ್ತು ಮೇಲಿನ ಪ್ರಾರ್ಥನೆಗಳನ್ನು ತಮ್ಮ ಜೀವಿತದ ಭಾಗವನ್ನಾಗಿ ಮಾಡಿಕೊಳ್ಳಬೇಕು ಮತ್ತು ಮಕ್ಕಳು, ಹಿರಿಯರು, ಸ್ತ್ರೀಯರು, ಪುರುಷರು ಪ್ರತಿಯೊಬ್ಬರು ಇದರ ಕಡೆಗೆ ಗಮನ ಕೊಡಬೇಕು.

**(ಖುತ್ಬ ಜುಮುಅ 23 ಆಗಸ್ಟ್, 2024)**

## ಪವಿತ್ರ ಖುರ್‌ಆನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ.

***(ಮಲ್‌ಫೂಝಾತ್ ಸಂಪುಟ–2, ಪುಟ–344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು **"ಹಕಮ್"** ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು **"ಮುಹೈಮಿನ್"** ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ. **(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ–16, ಪುಟ–103)**

(ಪುಟ ಸಂಖ್ಯೆ 02ರ ಉಳಿದ ಭಾಗ)

ಸರ್ವಶಕ್ತನಾದ ಅಲ್ಲಾಹನು ಮಾನವೀಯತೆಯನ್ನು ಶಾಂತಿ, ನ್ಯಾಯ ಮತ್ತು ಸಮನ್ವಯದ ಹಾದಿಗೆ ಮಾರ್ಗದರ್ಶನ ಮಾಡಲಿ. ಆಮೀನ್.

**GREG STAFFORD MP**
**For Farnham and Bordon**

ರಾಷ್ಟ್ರೀಯ ಶಾಂತಿ ವಿಚಾರ ಸಂಕಿರಣದಲ್ಲಿ ನಿಮ್ಮೊಂದಿಗೆ ಸೇರಲು ಮತ್ತು ಯುಕೆ ಮತ್ತು ಪ್ರಪಂಚದಾದ್ಯಂತದ ಅತಿಥಿಗಳನ್ನು ನನ್ನ ಕ್ಷೇತ್ರಕ್ಕೆ ಸ್ವಾಗತಿಸಲು ನನಗೆ ಸಂತೋಷವಾಗಿದೆ. ಈ ವರ್ಷದ ವಿಚಾರ ಸಂಕಿರಣದ ವಿಷಯ, "ಪರಿಪೂರ್ಣ ಜಾಗತಿಕ ನ್ಯಾಯ: ನಿಜವಾದ ಶಾಂತಿಯ ಅಡಿಪಾಯ", ಇದಕ್ಕಿಂತ ಹೆಚ್ಚು ಬೇರೆ ಯಾವ ವಿಷಯವು ಸಮಯೋಚಿತವಾಗಿರಲು ಸಾಧ್ಯವಿಲ್ಲ. ಜಗತ್ತು ಎಂದಿಗಿಂತಲೂ ಹೆಚ್ಚು ವಿಭಜಿತ, ಅನಿಶ್ಚಿತ ಮತ್ತು ಆತಂಕವನ್ನು ಅನುಭವಿಸುತ್ತಿರುವ ಸಮಯದಲ್ಲಿ, ಅಂತಹ ಕೂಟಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿವೆ. ಸ್ಥಳೀಯ ಸಂಸದ ಮತ್ತು ಅಹ್ಮದೀಯ ಮುಸ್ಲಿಂ ಜಮಾಅತ್ತಿನ ಸರ್ವಪಕ್ಷ ಸಂಸದೀಯ ಗುಂಪಿನ ಕಾರ್ಯದರ್ಶಿಯಾಗಿ, ಈ ಸಮುದಾಯವು ವಿಶೇಷವಾಗಿ ಸ್ಥಳೀಯ ಮಟ್ಟದಲ್ಲಿ ನೀಡುತ್ತಿರುವ ಉತ್ತಮ ಸೇವೆಯನ್ನು ಸ್ವತಃ ನೋಡುವ ಅವಕಾಶ ನನಗೆ ಸಿಕ್ಕಿದೆ. ಇಲ್ಲಿ ಶಾಂತಿ ಕೇವಲ ಸೈದ್ಧಾಂತಿಕ ಪರಿಕಲ್ಪನೆ ಅಥವಾ ಘೋಷಣೆಯಲ್ಲ, ಆದರೆ ಆಚರಣೆಯಲ್ಲಿ ಸ್ಥಾಪಿತವಾಗಿದೆ ಎಂಬುದು ನನ್ನನ್ನು ಯಾವಾಗಲೂ ಪ್ರಭಾವಿಸುತ್ತದೆ. ಸೇವೆ, ದಾನ ಮತ್ತು ಜನರನ್ನು ಹತ್ತಿರಕ್ಕೆ ತರುವುದು ಈ ಸಮುದಾಯವು ಶಾಂತಿಯನ್ನು ಉತ್ತೇಜಿಸುವ ಪ್ರಾಯೋಗಿಕ ಮಾರ್ಗಗಳಾಗಿವೆ.

ಶಾಂತಿಯ ಅಡಿಪಾಯವು ನಮ್ಮ ದೈನಂದಿನ ಜೀವನದಲ್ಲಿ ನಾವು ಪರಸ್ಪರ ಹೇಗೆ ಬದುಕುತ್ತೇವೆ ಎಂಬುದರಲ್ಲಿದೆ ಎಂದು ಅವರು ಹೇಳಿದರು. ನಮ್ಮ ಸ್ಥಳೀಯ ಜನರಲ್ಲಿ ನಾವು ಶಾಂತಿಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗದಿದ್ದರೆ, ಜಾಗತಿಕ ಮಟ್ಟದಲ್ಲಿ ಶಾಂತಿಗಾಗಿ ಪ್ರಯತ್ನಗಳು ಕಡಿಮೆ ಮೌಲ್ಯದ್ದಾಗಿರುತ್ತವೆ. ಸುಸ್ಥಿರ ಶಾಂತಿ ಸರಳವಾಗಿ ಒಟ್ಟಿಗೆ ವಾಸಿಸುವ ಮೂಲಕ ಸ್ಥಾಪಿಸಲ್ಪಡುವುದಿಲ್ಲ, ಆದರೆ ನಿರಂತರ ಸಂಬಂಧಗಳು ಮತ್ತು ಪರಸ್ಪರ ತಿಳುವಳಿಕೆಯ ಮೂಲಕ ಬೆಳೆಯುತ್ತದೆ. ಹುಝೂರ್ ಅನ್ವರ್ ಅವರನ್ನು ನಾನು ವಿಶೇಷವಾಗಿ ಉಲ್ಲೇಖಿಸಲು ಬಯಸುತ್ತೇನೆ, ಅವರ ಶಾಂತಿ, ನ್ಯಾಯ ಮತ್ತು ಪರಸ್ಪರ ಗೌರವದ ಸ್ಥಿರ ಸಂದೇಶವು ಈ ಜಮಾಅತ್ತನ್ನು ಮೀರಿ ಮತ್ತು ಪ್ರಪಂಚದಾದ್ಯಂತ ಪ್ರತಿಧ್ವನಿಸಿದೆ.

**Sir Ed Davey MP, Hon.RT**

ಅವರು ಹೇಳಿದರು: ಮತ್ತೊಂದು ಶಾಂತಿ ವಿಚಾರ ಸಂಕಿರಣಕ್ಕೆ ಆಹ್ವಾನಿಸಲ್ಪಟ್ಟಿರುವುದು ನನಗೆ ದೊಡ್ಡ ಗೌರವವಾಗಿದೆ. ನಾನು ಎಲ್ಲಾ ಅತಿಥಿಗಳ ಪರವಾಗಿ ಧನ್ಯವಾದವನ್ನು ಹೇಳುತ್ತೇನೆ. ನಮ್ಮ ದೇಶದಲ್ಲಿ ಬೇರೆ ಯಾವುದೇ ಗುಂಪು ಇಷ್ಟೊಂದು ಸ್ಥಿರತೆ ಮತ್ತು ಸ್ಥಿರತೆಯೊಂದಿಗೆ ಶಾಂತಿಯ ಧ್ವನಿ ಎತ್ತುತ್ತದೆ ಮತ್ತು ಎಲ್ಲಾ ಧರ್ಮದ ಜನರನ್ನು ಮತ್ತು ಧರ್ಮೇತರರನ್ನು ಸಹ ಒಂದೇ ಸ್ಥಳದಲ್ಲಿ ಒಟ್ಟುಗೂಡಿಸುತ್ತದೆ, ಅದು ನಮಗೆ ಮತ್ತು ಇತರ ದೇಶಗಳ ನಡುವೆ ಶಾಂತಿ ಸ್ಥಾಪನೆಗೆ ಬಹಳ ಅಗತ್ಯವಾದ ಆ ಸಂವಾದವನ್ನು ನಡೆಸುತ್ತದೆ ಎಂದು ನನಗೆ ತಿಳಿದಿಲ್ಲ. ಹುಝೂರ್ ಅನ್ವರ್(ಅತಬಿಅ) ವಿಶ್ವ ನಾಯಕಿಯಾಗಿ ಶಾಂತಿಯ ಮಹತ್ವವನ್ನು ಹೆಚ್ಚು ಒತ್ತಿ ಹೇಳುವ ವ್ಯಕ್ತಿಯಾಗಿದ್ದಾರೆ.

**Seema Malhotra**
**MP for Feltham and Heston**

ಅವರು ಹೇಳಿದರು: ಘರ್ಷಣೆಗಳನ್ನು ತಡೆಗಟ್ಟಲು ಮತ್ತು ಹೆಚ್ಚು ಸಮೃದ್ಧ ಮತ್ತು ಶಾಂತಿಯುತ ಸಮಾಜವನ್ನು ನಿರ್ಮಿಸಲು, ಸಾಮಾಜಿಕ ಸಂಸ್ಥೆಗಳು, ಧಾರ್ಮಿಕ ಗುಂಪುಗಳು ಮತ್ತು ನಾಗರಿಕ ನಾಯಕರು ಎಲ್ಲರೂ ಜನರು ಮತ್ತು ಸಮುದಾಯಗಳ ನಡುವೆ ಪರಸ್ಪರ ತಿಳುವಳಿಕೆಯನ್ನು ಉತ್ತೇಜಿಸುವಲ್ಲಿ ಮತ್ತು ಜನರನ್ನು ಪರಸ್ಪರ ಹತ್ತಿರ ತರುವಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತಾರೆ.

ಅದಕ್ಕಾಗಿಯೇ ನಾನು ವರ್ಷಗಳಿಂದ ಹತ್ತಿರದಿಂದ ನೋಡಿರುವ ಅಹ್ಮದಿಯಾ ಜಮಾಅತ್ತಿನ ಸೇವೆಗಳು ಮತ್ತು ಈ ವಿಷಯದಲ್ಲಿ ಹುಝೂರ್ ಅನ್ವರ್ ಅವರ ನಾಯಕತ್ವವನ್ನು ನಾನು ಪ್ರಶಂಸಿಸುತ್ತೇನೆ. ಶಾಂತಿ, ನ್ಯಾಯ ಮತ್ತು ಮಾನವ ಘನತೆಗಾಗಿ ನಿಮ್ಮ ನಿರಂತರ ಧ್ವನಿ ಪ್ರಪಂಚದಾದ್ಯಂತದ ಜನರ ಹೃದಯಗಳಲ್ಲಿ ಪ್ರತಿಧ್ವನಿಸುತ್ತಿದೆ.

ಉಕ್ರೇನ್ ಮತ್ತು ಗಾಜಾದಲ್ಲಿ ಯುದ್ಧದ ಭೀಕರತೆಯನ್ನು ನಾವು ನೋಡಿದ್ದೇವೆ. ಹೆಚ್ಚುತ್ತಿರುವ ಉದ್ವಿಗ್ನತೆಗಳನ್ನು ಮತ್ತು ಇತ್ತೀಚೆಗೆ ಇರಾನ್‌ನಲ್ಲಿನ ಸಂಘರ್ಷವನ್ನು ನಾವು ನೋಡಿದ್ದೇವೆ. ಯುದ್ಧವು ನಮ್ಮ ಪೀಳಿಗೆಯ ವಿಶಿಷ್ಟ ಲಕ್ಷಣವಾಗಲು ನಾವು ಅನುಮತಿಸಬಾರದು ಮತ್ತು ಅನುಮತಿಸಬಾರದು, ಆದರೆ ಇದಕ್ಕೆ ವಿರುದ್ಧವಾಗಿ, ಶಾಂತಿ ನಮ್ಮ ಪರಂಪರೆಯಾಗಿರಬೇಕು.

ಇಂದಿನ ಕಾರ್ಯಕ್ರಮಕ್ಕೆ ನಮ್ಮನ್ನು ಆಹ್ವಾನಿಸಿದ್ದಕ್ಕಾಗಿ ಮತ್ತು ಮಾನವೀಯತೆಗೆ ಸೇವೆ ಸಲ್ಲಿಸಲು ಮತ್ತು ಶಾಶ್ವತ ಶಾಂತಿಯನ್ನು ಸ್ಥಾಪಿಸಲು ನಿಮ್ಮ ಎಲ್ಲಾ ಪ್ರಯತ್ನಗಳಿಗೆ ಮತ್ತೊಮ್ಮೆ ಧನ್ಯವಾದಗಳು. ಇಂದು ಈ ವಿಚಾರ ಸಂಕಿರಣದಲ್ಲಿ ನಿಮ್ಮೊಂದಿಗೆ ಸೇರಲು ನನಗೆ ಗೌರವವಾಗಿದೆ. ಧನ್ಯವಾದಗಳು.

**ಶಾಂತಿ ವಿಚಾರ ಸಂಕಿರಣ ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ಭಾಷಣದ ಬಗ್ಗೆ ಕೆಲವು ಅತಿಥಿಗಳ ಅನಿಸಿಕೆಗಳು**

ಶಾಂತಿ ವಿಚಾರ ಸಂಕಿರಣದ ಬಗ್ಗೆ ಆಡಳಿತ ಮಂಡಳಿ ಮತ್ತು ಕೆಲವು ಅತಿಥಿಗಳ ಅನಿಸಿಕೆಗಳು ಕೆಳಗೆ ಕಂಡಂತಿವೆ:

* .....ಅಹ್ಮದಿಯಾ ಜಮಾಅತ್ ಯುಕೆಯ ಅಮೀರ್: ರಫೀಕ್ ಅಹ್ಮದ್ ಹಯಾತ್ ಸಾಹಿಬ್: ಸಮಾರಂಭದ ನಂತರ ಅಲ್-ಫಜ್ಲ್ ಇಂಟರ್ನ್ಯಾಷನಲ್ ಪ್ರತಿನಿಧಿಗೆ ಸಂದರ್ಶನ ನೀಡುತ್ತಾ ಹೇಳಿದರು: ಪ್ರಸ್ತುತ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ಯುದ್ಧಗಳು ಮತ್ತು ಹತ್ಯೆಗಳು ನಡೆಯುತ್ತಿವೆ, ಇದರಿಂದಾಗಿ ಜನರು ಬಹಳವಾಗಿ ಬಳಲುತ್ತಿದ್ದಾರೆ, ವಿಶೇಷವಾಗಿ ಗಾಜಾ, ಲೆಬನಾನ್, ಸುಡಾನ್ ಮತ್ತು ಅಫ್ಘಾನಿಸ್ತಾನದಂತಹ ಪ್ರದೇಶಗಳಲ್ಲಿ, ಪರಿಸ್ಥಿತಿ ತುಂಬಾ ಕೆಟ್ಟದಾಗಿದೆ. ಕಳೆದ ಹಲವು ವರ್ಷಗಳ ಪ್ರಯತ್ನಗಳ ಹೊರತಾಗಿಯೂ, ಯುದ್ಧಗಳು ಯಾವುದೇ ನಿಜವಾದ ಪ್ರಯೋಜನವನ್ನು ತಂದಿಲ್ಲ, ಆದರೆ ನಷ್ಟ ಮತ್ತು ವಿನಾಶವನ್ನು ಮಾತ್ರ ಉಂಟುಮಾಡಿವೆ.

ಅಮೀರ್ ಸಾಹಿಬ್ ಹೇಳಿದರು: ನಾಯಕರು ತಮ್ಮ ಅಹಂಕಾರವನ್ನು ತೊರೆದು ಹಝ್ರತ್ ಖಲೀಫತುಲ್ ಮಸೀಹ್(ಅತಬಿಅ) ಅವರ ಶಾಂತಿ ಮತ್ತು ಮಾನವೀಯತೆಯ ಸೂಚನೆಗಳು ಮತ್ತು ಸಂದೇಶವನ್ನು ಪರಿಗಣಿಸಿದರೆ, ಆಗ ಜಗತ್ತಿನಲ್ಲಿ ಉತ್ತಮ ಶಾಂತಿಯನ್ನು ಸ್ಥಾಪಿಸಬಹುದು. ಕೆಲವು ವಿಶ್ವ ನಾಯಕರು ಯುದ್ಧಗಳಿಗೆ ಆರ್ಥಿಕ ಅಥವಾ ರಾಜಕೀಯ ಬೆಂಬಲದ ಬಗ್ಗೆ ಮಾತ್ರ ಮಾತನಾಡುತ್ತಾರೆ, ಆದರೆ ನಿಜವಾದ ಅಗತ್ಯವೆಂದರೆ ಯುದ್ಧಗಳನ್ನು ಕೊನೆಗೊಳಿಸಿ ಶಾಶ್ವತ ಶಾಂತಿಯತ್ತ ಪ್ರಾಯೋಗಿಕ ಕ್ರಮಗಳನ್ನು ತೆಗೆದುಕೊಳ್ಳುವುದು ಎಂದು ಅವರು ಹೇಳಿದರು.

ಶಾಂತಿ ವಿಚಾರ ಸಂಕಿರಣದ ಪ್ರಚಾರದ ಬಗ್ಗೆ, ಅಮೀರ್ ಸಾಹಿಬ್ ಇದು ಸಾಮಾಜಿಕ ಮಾಧ್ಯಮದ ಯುಗ ಎಂದು ಹೇಳಿದರು. ಸಾಮಾಜಿಕ ಮಾಧ್ಯಮದ ಮೂಲಕ ಸಂದೇಶಗಳು ಲಕ್ಷಾಂತರ ಜನರನ್ನು ತಲುಪುತ್ತವೆ.

ಯುಕೆ ಶಾಂತಿ ವಿಚಾರ ಸಂಕಿರಣದಲ್ಲಿ ಖಿಲಾಫತ್ ಉಪಸ್ಥಿತಿಯ ವಿಶಿಷ್ಟತೆಯ ಬಗ್ಗೆ, ಅಮೀರ್ ಸಾಹಿಬ್ ಈ ಕಾರಣಕ್ಕಾಗಿ ಇದು ಬಹಳ ಮುಖ್ಯ ಎಂದು ಹೇಳಿದರು. ಅನೇಕ ದೇಶಗಳಿಂದ ಅತಿಥಿಗಳು ಆಗಮಿಸಿದ್ದಾರೆ. ಮಂತ್ರಿಗಳೂ ಇದ್ದಾರೆ. ಅವರೆಲ್ಲರೂ ಉತ್ತಮ ಸಂದೇಶದೊಂದಿಗೆ ಹಿಂತಿರುಗುತ್ತಾರೆ. ದೊಡ್ಡ ದೇಶಗಳಿಗೆ ನಮ್ಮ ಮಾದರಿಯನ್ನು ತೋರಿಸುವ ಬಗ್ಗೆ, ದೊಡ್ಡ ದೇಶಗಳು ನಾಯಕತ್ವವನ್ನು ತೋರಿಸಿ ಶಾಂತಿಯತ್ತ ಸಾಗದ ಹೊರತು, ಸಣ್ಣ ದೇಶಗಳು ಸಹ ಅವರನ್ನು ಅನುಸರಿಸುತ್ತವೆ ಎಂದು ಅವರು ಹೇಳಿದರು.

* ....ಅಹ್ಮದಿಯಾ ಜಮಾಅತ್ ಯುಕೆಯ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿ ಸನ್ಮಾನ್ಯ ಫರೀದ್ ಅಹ್ಮದ್ ಸಾಹಿಬ್: ಕಳೆದ 20 ವರ್ಷಗಳಲ್ಲಿ ರಾಷ್ಟ್ರೀಯ ಶಾಂತಿ ವಿಚಾರ ಸಂಕಿರಣದ ಬೆಳವಣಿಗೆ ಮತ್ತು ಪ್ರಭಾವದ ಬಗ್ಗೆ ಸನ್ಮಾನ್ಯ ಫರೀದ್ ಅಹ್ಮದ್ ಸಾಹಿಬ್ ಮಾತನಾಡಿ, ಈ ಕಾರ್ಯಕ್ರಮವು ಸಂಖ್ಯೆಯಲ್ಲಿ ಮಾತ್ರವಲ್ಲದೆ ಅದರ ಸಂದೇಶ ಮತ್ತು ಪ್ರಭಾವದಲ್ಲಿಯೂ ಬೆಳೆದಿದೆ, ಅಲ್ಲಿ ವಿವಿಧ ದೇಶಗಳ ಜನರು ಭಾಗವಹಿಸುತ್ತಾರೆ ಮತ್ತು ಹಝ್ರತ್ ಖಲೀಫತುಲ್ ಮಸೀಹ್(ಅತಬಿಅ) ಅವರ ಶಾಂತಿ, ಮಾನವೀಯತೆ ಮತ್ತು ಸಹಾನುಭೂತಿಯ ಸಂದೇಶದಿಂದ ಮಾರ್ಗದರ್ಶನ ಪಡೆಯುತ್ತಾರೆ. ಎಂಟಿಎ ಮೂಲಕ, ಈ ಸಂದೇಶವು ಇಡೀ ಜಗತ್ತನ್ನು ತಲುಪುತ್ತಿದೆ ಮತ್ತು ಈ ಕಾರ್ಯಕ್ರಮವು ಜಾಗತಿಕ ಮಟ್ಟದಲ್ಲಿ ಶಾಂತಿಯನ್ನು ಉತ್ತೇಜಿಸಲು ಬಲವಾದ ಸಾಧನವಾಗುತ್ತಿದೆ ಎಂದು ಅವರು ಹೇಳಿದರು. ಇಂದಿನ ಯುಗದಲ್ಲಿ, ಸಂಘರ್ಷಗಳು ಹೆಚ್ಚು ಬಹಿರಂಗವಾಗಿ ಹೊರಬರುತ್ತಿವೆ, ಆದ್ದರಿಂದ ಹಝ್ರತ್ ಖಲೀಫತುಲ್ ಮಸೀಹ್ ಈಗ ಶಾಂತಿ ಮತ್ತು ಮಾನವೀಯತೆಗಾಗಿ ಸ್ಪಷ್ಟ ಮತ್ತು ಹೆಚ್ಚು ನೇರ ರೀತಿಯಲ್ಲಿ ಮಾತನಾಡುತ್ತಿದ್ದಾರೆ ಎಂದು ಅವರು ಹೇಳಿದರು.

* ....ಕ್ಲೇರ್ ಡೆಸ್ಮಂಡ್, ಕ್ರಿಶ್ಚಿಯನ್ ಸಾಲಿಡಾರಿಟಿ ವರ್ಲ್ಡ್‌ವೈಡ್: ಈ ಕಾರ್ಯಕ್ರಮವು ವಿಭಿನ್ನ ಹಿನ್ನೆಲೆಗಳ ಜನರನ್ನು ಸಾಮಾನ್ಯ ಕಾರಣಕ್ಕಾಗಿ ಒಟ್ಟುಗೂಡಿಸಲು ಉತ್ತಮ ಅವಕಾಶವಾಗಿದೆ, ಅಲ್ಲಿ ವಿಭಿನ್ನ ದೃಷ್ಟಿಕೋನಗಳನ್ನು ಕೇಳಲು ಮತ್ತು ವಿಶೇಷವಾಗಿ ಹುಝೂರ್ ಅನ್ವರ್ ಅವರ ಭಾಷಣಗಳಿಂದ ಮಾರ್ಗದರ್ಶನ ಪಡೆಯಲು ಅವಕಾಶವಿತ್ತು.

ಪ್ರಮುಖ ಪಾತವೆಂದರೆ ಶಾಂತಿಯನ್ನು ಸಾಧಿಸುವುದು ವಿಶ್ವ ನಾಯಕರ ಮೇಲೆ ಮಾತ್ರ ಅವಲಂಬಿತರಾಗುವುದರಿಂದ ಸಾಧ್ಯವಿಲ್ಲ, ಬದಲಾಗಿ ಪ್ರತಿಯೊಬ್ಬ ವ್ಯಕ್ತಿಯು ತಮ್ಮದೇ ಆದ ಸಮಾಜ ಮತ್ತು ಪ್ರಭಾವದ ಕ್ಷೇತ್ರದಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುವ ಮೂಲಕ. ಇಂದಿನ ಸವಾಲಿನ ಕಾಲದಲ್ಲಿ, ಇಂತಹ ಘಟನೆಗಳು ಭರವಸೆ, ಧೈರ್ಯ ಮತ್ತು ಒಗ್ಗಟ್ಟನ್ನು ಸೃಷ್ಟಿಸುತ್ತವೆ ಮತ್ತು ಜನರನ್ನು ಭೇಟಿಯಾಗುವುದು ಮತ್ತು ಮಾತನಾಡುವುದು ಬಹಳ ಸ್ಫೂರ್ತಿದಾಯಕ ಮತ್ತು ಪ್ರೋತ್ಸಾಹದಾಯಕವಾಗಿದೆ. ಪ್ರಯತ್ನಿಸುತ್ತಲೇ ಇರಿ, ಅದುವೇ ಶಾಂತಿಯನ್ನು ತರುತ್ತದೆ.

* **"Womens mellbeing"** ಎಂಬ ಸಂಘಟನೆಯನ್ನು ನಡೆಸುತ್ತಿರುವ ಮತ್ತು ನಿರ್ದಿಷ್ಟವಾಗಿ ಮಹಿಳೆಯರ ಆರೋಗ್ಯ, ಋತುಬಂಧದ ಮೊದಲು ಮತ್ತು ನಂತರ, ಮತ್ತು ಪ್ರಸವಪೂರ್ವ ಮತ್ತು ಪ್ರಸವಪೂರ್ವ ಆರೈಕೆಯ ಬಗ್ಗೆ ಕೆಲಸ ಮಾಡುವ ಲಿಂಡಾ ಸ್ಟೀಫನ್ಸ್, ವಾಘನ್ ಜೇಮ್ಸ್ ಫಾರ್ಮಸಿಯ ಸಹವರ್ತಿ ಬುಶ್ರಾ ಅವರು ತಮ್ಮನ್ನು ಇಲ್ಲಿಗೆ ಕರೆತಂದಿದ್ದಾರೆ ಮತ್ತು ಅವರು ಈ ಕಾರ್ಯಕ್ರಮಕ್ಕೆ ಮೊದಲು ಬಂದಿದ್ದಾರೆ ಎಂದು ಹೇಳಿದರು. ಅವರ ಪ್ರಕಾರ, ಈ ಬಾರಿಯ ಅನುಭವವು ಬಹಳ ವಿಶೇಷವಾಗಿತ್ತು ಏಕೆಂದರೆ ಅವರು ಹಝ್ರತ್ ಖಲೀಫತುಲ್ ಮಸೀಹ್ ಅವರ ಭಾಷಣ ಮತ್ತು ವಾತಾವರಣದ ಶಾಂತಿ, ಪ್ರೀತಿ ಮತ್ತು ಪರಸ್ಪರ ಸಂಬಂಧವನ್ನು ಆಳವಾಗಿ ಅನುಭವಿಸಿದರು. ಪ್ರಸ್ತುತ ಜಗತ್ತು ಸಂಭವನೀಯ ವಿಶ್ವ ಯುದ್ಧದ ಬೆದರಿಕೆಯನ್ನು ಎದುರಿಸುತ್ತಿದೆ, ಆದ್ದರಿಂದ ಮಾನವೀಯತೆ, ಏಕತೆ ಮತ್ತು ಶಾಂತಿಯ ಸಂದೇಶವು ಬಹಳ ಮುಖ್ಯವಾಗಿದೆ ಎಂದು ಅವರು ಹೇಳಿದರು. ಅವರು ಅಹ್ಮದೀಯ ಸಮುದಾಯವನ್ನು ಶ್ಲಾಘಿಸಿದರು, ಇಲ್ಲಿರುವ ಪ್ರತಿಯೊಬ್ಬರೂ ಪ್ರೀತಿ, ಕುಟುಂಬ ಮೌಲ್ಯಗಳು, ವಿವಿಧ ಧರ್ಮಗಳ ಗೌರವ ಮತ್ತು ಜಾಗತಿಕ ಸಹೋದರತ್ವದ ಜೀವಂತ ಉದಾಹರಣೆಯಾಗಿದ್ದಾರೆ ಮತ್ತು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿರುವುದು ಅದೃಷ್ಟ ಮತ್ತು ಆಶೀರ್ವಾದ ಎಂದು ಅವರು ಭಾವಿಸಿದರು.

* ವೈಟ್‌ಹಿಲ್ ಮತ್ತು ಬೋರ್ಡೆನ್‌ನ ಕೌನ್ಸಿಲರ್ ಕ್ಯಾಥರೀನ್ ಕ್ಲಾರ್ಕ್ ಮತ್ತು ಸಾಮಾಜಿಕ ಮತ್ತು ಸಾರ್ವಜನಿಕ ಪ್ರಚಾರಕ ಅಲೆಕ್ಸ್ ಪೇಜ್ ಅವರು ಕಾರ್ಯಕ್ರಮದ ಮಹತ್ವವನ್ನು ಚರ್ಚಿಸುತ್ತಾ, ಇಸ್ಲಾಮಾಬಾದ್‌ನಲ್ಲಿ ನಡೆಯುವ ಇಂತಹ ಕಾರ್ಯಕ್ರಮಗಳು ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಸಮುದಾಯಗಳನ್ನು ಹತ್ತಿರ ತರುವಲ್ಲಿ, ಪ್ರೀತಿ ಮತ್ತು ಪರಸ್ಪರ ಗೌರವವನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು. ವಿಭಿನ್ನ ಹಿನ್ನೆಲೆಯ ಜನರು ಒಟ್ಟಿಗೆ ಕುಳಿತು ಒಂದೇ ಸ್ಥಳದಲ್ಲಿ ಸಂವಹನ ನಡೆಸುವುದರಿಂದ ತಪ್ಪು ತಿಳುವಳಿಕೆಗಳು ದೂರವಾಗುತ್ತವೆ ಮತ್ತು ಪರಸ್ಪರರ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಅರ್ಥಮಾಡಿಕೊಳ್ಳಲು ಅವಕಾಶ ಸಿಗುತ್ತದೆ. ಜಾಗತಿಕ ಮೇಲ್ಮಟ್ಟದಲ್ಲಿ ಶಾಂತಿಗಾಗಿ ಸಂಭಾಷಣೆ ಮತ್ತು ಸಂಬಂಧಗಳು ಅತ್ಯಗತ್ಯ, ಏಕೆಂದರೆ ಹೆಚ್ಚು ಜನರು ಪರಸ್ಪರ ಅರ್ಥಮಾಡಿಕೊಂಡಷ್ಟೂ ಸಂಘರ್ಷ ಕಡಿಮೆಯಾಗುತ್ತದೆ. ಇಬ್ಬರೂ ಅತಿಥಿಗಳು ಹಜರತ್ ಖಲೀಫತುಲ್ ಮಸಿಹ್ ಅವರ ಭಾಷಣವನ್ನು ಕಾರ್ಯಕ್ರಮದ ಅತ್ಯಂತ ಹೃದಯಸ್ಪರ್ಶಿ ಭಾಗವೆಂದು ಬಣ್ಣಿಸಿದರು, ಆದರೆ ಕೌನ್ಸಿಲರ್ ಕ್ಯಾಥರೀನ್ ಕ್ಲಾರ್ಕ್ ಅವರನ್ನು ಖಾಸಗಿಯಾಗಿ ಭೇಟಿಯಾಗುವ ಸೌಭಾಗ್ಯವೂ ತಮಗೆ ಸಿಕ್ಕಿದೆ ಎಂದು ಹೇಳಿದರು, ಇದನ್ನು ಅವರು ಸ್ಮರಣೀಯ ಅನುಭವ ಎಂದು ಬಣ್ಣಿಸಿದರು.

* ಜಿಲ್ ಬಾಸ್ಟೋರ್. ಚರ್ಚ್ ಆಫ್ ಜೀಸಸ್ ಕ್ರೈಸ್ಟ್ ಆಫ್ ಲೇಟರ್-ಡೇ ಸೇಂಟ್ಸ್, ಕನ್ವೀನರ್ ಇಂಟರ್‌ಫೇತ್ ಮಿಲ್ಟನ್ ಕೀನ್ಸ್: ಹುಝೂರ್ ಅನ್ವರ್ ಅವರ ಭಾಷಣವು ತುಂಬಾ ಹೃದಯಸ್ಪರ್ಶಿಯಾಗಿತ್ತು. ಪ್ರಪಂಚದ ವಿವಿಧ ಪ್ರದೇಶಗಳಲ್ಲಿನ ಪರಿಸ್ಥಿತಿಗಳ ಬಗ್ಗೆ ನಿಮಗೆ ಆಳವಾದ ತಿಳುವಳಿಕೆ ಇದೆ ಮತ್ತು ನಿಮ್ಮ ದೃಷ್ಟಿಕೋನವು ತುಂಬಾ ವಿಶಾಲವಾಗಿದೆ ಎಂಬುದು ಸ್ಪಷ್ಟವಾಗಿತ್ತು. ಯುದ್ಧಗಳು, ಸಂಘರ್ಷಗಳು ಮತ್ತು ಶಾಂತಿಯ ಮಹತ್ವದ ಬಗ್ಗೆ ಧಾರ್ಮಿಕ ಮುಖಂಡರು ಅಂತಹ ಧೈರ್ಯ ಮತ್ತು ಸಹಾನುಭೂತಿಯಿಂದ ಮಾತನಾಡುವುದನ್ನು ಕೇಳಲು ತುಂಬಾ ಸಂತೋಷವಾಯಿತು. ಇದು ನಿಜವಾಗಿಯೂ ಆಧ್ಯಾತ್ಮಿಕ ಘಟನೆಯಾಗಿತ್ತು.

* ಸಾರಾ ಡೇ. ನ್ಯೂಪೋರ್ಟ್ ಪ್ಯಾಗ್ನೆಲ್ ಮೇಯರ್: ಭಾಷಣದ ಸಮಯದಲ್ಲಿ ನಾನು ನಿರಂತರವಾಗಿ ತಲೆಯಾಡಿಸುತ್ತಿದ್ದೆ ಏಕೆಂದರೆ ನಾನು ಎಲ್ಲವನ್ನೂ ಒಪ್ಪುತ್ತೇನೆ. ಕೆಲವು ವರ್ಷಗಳ ಹಿಂದೆ ಹುಝೂರ್ ಅನ್ವರ್ ಅವರ ಭಾಷಣವನ್ನು ಸಹ ನಾನು ನೆನಪಿಸಿಕೊಂಡೆ. ನೀವು ಈ ವಿಷಯಗಳನ್ನು ಬಹಳ ಸಮಯದಿಂದ ಹೇಳುತ್ತಿದ್ದೀರಿ. ಹುಝೂರ್ ಅನ್ವರ್ ಅವರ ಮಹಿಮೆ ಏನೆಂದರೆ, ನಾನು ನಿಮಗೆ ಮೊದಲು ಎಚ್ಚರಿಕೆ ನೀಡಿದ್ದೇನೆ ಎಂದು ನೀವು ಹೇಳುವುದಿಲ್ಲ, ಆದರೆ ಸತ್ಯವೆಂದರೆ ನೀವು ಎಚ್ಚರಿಸಿದ್ದೀರಿ ಮತ್ತು ಇಂದು ಮತ್ತೆ ಎಚ್ಚರಿಸಿದ್ದೀರಿ. ನೀವು ಹೇಳಿದ್ದೆಲ್ಲವೂ ನಮ್ಮ ಕಣ್ಣಮುಂದೆ ನಡೆಯುತ್ತಿದೆ ಅಥವಾ ಸಂಭವಿಸಲಿದೆ. ಅದರ ಬಗ್ಗೆ ಯೋಚಿಸಲು ಭಯಾನಕವಾಗಿದೆ, ಆದರೆ ಭಾಷಣವು ತುಂಬಾ ಪರಿಣಾಮಕಾರಿ ಮತ್ತು ಪ್ರಭಾವಶಾಲಿಯಾಗಿತ್ತು.

ಬದರ್ ಪತ್ರಿಕಾಂಗವು ಅಮೀರುಲ್ ಮುಮಿನೀನ್ ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್(ಅತಬಿಅ) ಮತ್ತು ಬ್ರಿಟನ್‌ನಲ್ಲಿರುವ ಅಹ್ಮದಿಯಾ ಮುಸ್ಲಿಂ ಜಮಾಅತ್ತನ್ನು ಯಶಸ್ವಿಯಾದ ವಿಚಾರ ಸಂಕಿರಣಕ್ಕೆ ಅಭಿನಂದಿಸುತ್ತದೆ ಮತ್ತು ಸರ್ವಶಕ್ತನಾದ ಅಲ್ಲಾಹನು ಇಡೀ ಜಗತ್ತನ್ನು ಹುಝೂರ್ ಅನ್ವರ್(ಅತಬಿಅ) ಅವರ ಅನುಗ್ರಹದಾಯಕ ಹಾಗೂ ಶಾಂತಿಯುತ ಧ್ವನಿಯನ್ನು ಕೇಳುವ ಸಾಮರ್ಥ್ಯವನ್ನು ನೀಡಲಿ ಮತ್ತು ಜಗತ್ತು ಶಾಂತಿ ಮತ್ತು ಭದ್ರತೆಯ ತೊಟ್ಟಿಲಾಗಲಿ ಎಂದು ಪ್ರಾರ್ಥಿಸುತ್ತದೆ. ಅಲ್ಲಾಹುಮ್ಮ ಆಮೀನ್.

**(ಅಲ್-ಫಝ್ಲ್ ಇಂಟರ್‌ನ್ಯಾಷನಲ್, 23 ಮೇ 2026)**

------------*****------------

## ಬದರ್ ಪತ್ರಿಕೆಯನ್ನು ನೀವೂ ಓದಿರಿ ಮತ್ತು ನಿಮ್ಮ ಸ್ನೇಹಿತರನ್ನೂ ಓದಲು ಪ್ರೋತ್ಸಾಹಿಸಿ.

ಡಿಸೆಂಬರ್ 2014 ರ ಬದರ್ ಪತ್ರಿಕೆಯ ವಿಶೇಷ ಸಂಚಿಕೆಗಾಗಿ ತಮ್ಮ ಸಂದೇಶವನ್ನು ಕಳುಹಿಸುತ್ತಾ ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಹೀಗೆ ಹೇಳಿದರು:

"ಬದರ್ ವಾರಪತ್ರಿಕೆಯ ಸಂಸ್ಥೆ ಮತ್ತು ಓದುಗರು ಈ ಪತ್ರಿಕೆಯನ್ನು ಜಮಾಅತ್‌ನ ಸದಸ್ಯರ ಆಧ್ಯಾತ್ಮಿಕ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಪ್ರಕಟಿಸಲಾಗಿದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು ಮತ್ತು ನಮ್ಮ ಹಿರಿಯರು ಪ್ರತಿಕೂಲ ಪರಿಸ್ಥಿತಿಗಳ ಹೊರತಾಗಿಯೂ ಅದನ್ನು ತಮ್ಮ ಎಲ್ಲಾ ಶಕ್ತಿಯಿಂದ ಮುಂದುವರಿಸಲು ಪ್ರಯತ್ನಿಸಿದರು ಮತ್ತು ಅವರ ಪ್ರಾರ್ಥನೆ ಮತ್ತು ಶುದ್ಧ ಪ್ರಯತ್ನಗಳ ಅನುಗ್ರಹಗಳಿಂದ ಮಾತ್ರ ಇದು ಇಂದಿಗೂ ಮುಂದುವರೆದಿದೆ ಮತ್ತು ಇದು ಸಾಧ್ಯವಾದಷ್ಟು ಅಹ್ಮದೀಯರು ಇದನ್ನು ಓದಬೇಕು ಮತ್ತು ಅದರಿಂದ ಪ್ರಯೋಜನ ಪಡೆಯಬೇಕು. ಸರ್ವಶಕ್ತನಾದ ಅಲ್ಲಾಹನು ತನ್ನ ಕೃಪೆಯಿಂದ, ವಿಶೇಷವಾಗಿ ಭಾರತದ ಅಹ್ಮದೀಯರಿಗೆ ಮತ್ತು ಸಾಮಾನ್ಯವಾಗಿ ಪ್ರಪಂಚದ ಉಳಿದ ಭಾಗಗಳಲ್ಲಿ ವಾಸಿಸುವ ಅಹ್ಮದೀಯರಿಗೆ ಇದನ್ನು ಅಧ್ಯಯನ ಮಾಡುವ ಮತ್ತು ಅದಕ್ಕೆ ಸಂಬಂಧಿಸಿದ ಅನುಗ್ರಹಗಳನ್ನು ಪಡೆಯುವ ಸಾಮರ್ಥ್ಯವನ್ನು ನೀಡಲಿ. ಆಮೀನ್."

ಸಯ್ಯಿದುನಾ ಹಝ್ರತ್ ಅಖ್ದಸ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಪ್ರತಿ ಮನೆಯೂ ಬದರ್ ವಾರಪತ್ರಿಕೆಯನ್ನು ಓದುವುದನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ ಎಂದು ಅಹ್ಮದಿಯಾ ಜಮಾಅತ್ತಿಗೆ ಇಲ್ಲಿ ತಿಳಿಸಲಾಗಿದೆ. ಬದರ್ ಪತ್ರಿಕೆಯಲ್ಲಿ, ಪವಿತ್ರ ಖುರ್‌ಆನ್, ಹದೀಸ್ ಶರೀಫ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು, ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ಖುತ್‌ಬ ಜುಮುಅಗಳು, ಭಾಷಣಗಳು ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ವಿವಿಧ ದೇಶಗಳಿಗೆ ಮಾಡಿದ ಅನುಗ್ರಹದಾಯಕ ಭೇಟಿಗಳ ಕುತೂಹಲಕಾರಿ ಮತ್ತು ವಿಶ್ವಾಸವರ್ಧಕ ವರದಿಗಳನ್ನು ಬದರ್ ಪತ್ರಿಕೆಯಲ್ಲಿ ನಿಯಮಿತವಾಗಿ ಪ್ರಕಟಿಸಲಾಗುತ್ತದೆ, ಇದು ಪ್ರತಿಯೊಬ್ಬ ಅಹ್ಮದಿಯೂ ಓದಲೇಬೇಕಾದ ವಿಷಯವಾಗಿದೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹ ಮತ್ತು ಸಯ್ಯಿದುನಾ ಹುಝೂರ್ ಅನ್ವರ್(ಅತಬಿಅ) ಅವರ ಕರುಣೆಯಿಂದ, ಈ ಪತ್ರಿಕೆಯು ಈಗ ಉರ್ದು ಬಾಷೆಯ ಜೊತೆಗೆ ಹಿಂದಿ, ಬಂಗಾಳಿ, ತಮಿಳು, ತೆಲುಗು, ಮಲಯಾಳಂ, ಒರಿಯಾ ಮತ್ತು ಕನ್ನಡ ಭಾಷೆಗಳಲ್ಲಿಯೂ ಪ್ರಕಟವಾಗುತ್ತಿದೆ. ಬದರ್ ಪತ್ರಿಕೆಗೆ ಇನ್ನೂ ಚಂದಾದಾರರಾಗದ ಅಹ್ಮದಿ ಸ್ನೇಹಿತರು ಇದಕ್ಕೆ ಚಂದಾದಾರರಾಗಲು ಮತ್ತು ಅದನ್ನು ಸ್ವತಃ ಓದಲು ಮತ್ತು ಅವರ ಮಕ್ಕಳು ಮತ್ತು ಇತರ ಕುಟುಂಬ ಸದಸ್ಯರಿಗೆ ಅದನ್ನು ಓದಲು ಅವಕಾಶವನ್ನು ಒದಗಿಸುವಂತೆ ವಿನಂತಿಸಲಾಗಿದೆ. ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್(ಅತಬಿಅ) ಅವರ ಸೂಚನೆಗಳ ಮೇರೆಗೆ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಅಲ್ಲಾಹನು ನಮಗೆ ನೀಡಲಿ. ಆಮೀನ್. ಬದರ್ ಪತ್ರಿಕೆ ಸಮಯಕ್ಕೆ ಸರಿಯಾಗಿ ಬರದಿದ್ದರೆ, ಅಥವಾ ದೇಣಿಗೆ ನೀಡಲು ಅಥವಾ ಯಾವುದೇ ರೀತಿಯ ಮಾಹಿತಿಗಾಗಿ, ದಯವಿಟ್ಟು ಬದರ್ ವಾರಪತ್ರಿಕೆಯ ಕಚೇರಿ ವ್ಯವಸ್ಥಾಪಕರಿಗೆ ಸಂಪರ್ಕಿಸಿ. ಜಝಾಕುಮುಲ್ಲಾಹ್. **(ಪತ್ರಿಕಾಂಗ)**

**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:**
**https://akhbarbadr.in/Kannada/#gsc.tab=0**

## ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ[ರ]

### ಹಝ್ರತ್ ಅಬೂಬಕರ್[ರ] ಶಿಷ್ಯರಾದುದು

ಹಝ್ರತ್ ಅಬೂಬಕರ್[ರ] ಹಝ್ರತ್ ಪೈಗಂಬರರ[ಸ] ಬಾಲ್ಯಕಾಲದಿಂದಲೇ ಸ್ನೇಹಿತರಾಗಿದ್ದರು. ಮೇಲೆ ವಿವರಿಸಿದ ಸಂಭವದ ಕಾಲದಲ್ಲಿ ಅವರು ನಗರದಿಂದ ಹೊರಗೆ ಹೋಗಿದ್ದರು. ಅವರು ನಗರವನ್ನು ಪ್ರವೇಶಿಸಿದ ಕೂಡಲೆ ಅವರಿಗೆ, “ನಿನ್ನ ಸ್ನೇಹಿತನು ಹುಚ್ಚನಾಗಿರುವನು. ಆಕಾಶದಿಂದ ದೇವದೂತರು ಇಳಿದು ಬಂದು ತನ್ನೊಂದಿಗೆ ಮಾತನಾಡುತ್ತಿರುವರು ಎಂದು ಅವನು ಹೇಳುತ್ತಾನೆ” ಎಂದು ಹೇಳುವ ಜನರ ಮಾತುಗಳು ಕೇಳಿಸಿದುವು. ಹಝ್ರತ್ ಅಬೂಬಕರ್[ರ] ನೇರವಾಗಿ ಹಝ್ರತ್ ಪೈಗಂಬರರ[ಸ] ಮನೆಗೆ ಹೋಗಿ ಬಾಗಿಲು ತಟ್ಟಿದಾಗ ಹಝ್ರತ್ ಪೈಗಂಬರ್[ಸ] ಬಾಗಿಲು ತೆರೆದಾಗ ಹಝ್ರತ್ ಅಬೂಬಕರ್[ರ] ವಾಸ್ತವಿಕ ಸಂಗತಿ ಏನೆಂದು ಕೇಳಿದರು. ಹಝ್ರತ್ ಪೈಗಂಬರ್[ಸ] ತನ್ನ ಸ್ನೇಹಿತ ತಪ್ಪುದಾರಿ ಸ್ವೀಕರಿಸದಿರಲಿಯೆಂದು ಸ್ವಲ್ಪ ಹೆಚ್ಚಿಗೆ ವಿವರಣೆ ನೀಡಬಯಸಿದ್ದರು. ಆಗ ಹಝ್ರತ್ ಅಬೂಬಕರ್[ರ] ಅವರನ್ನು ತಡೆದು ಹೇಳಿದರು: “ನನಗೆ ಕೇವಲ ಇಷ್ಟು ಮಾತ್ರ ಉತ್ತರ ನೀಡಿರಿ. ನಿಮ್ಮ ಸಮೀಪಕ್ಕೆ ಅಲ್ಲಾಹನ ದೂತರು ಬಂದು ನಿಮ್ಮೊಂದಿಗೆ ಮಾತನಾಡಿರುವರೆಂದು ನೀವು ಘೋಷಿಸಿರುವಿರೋ?” ಆಗ ಪುನಃ ಹಝ್ರತ್ ಪೈಗಂಬರ್[ಸ] ಸವಿಸ್ತಾರವಾಗಿ ಎಲ್ಲವನ್ನೂ ವಿವರಿಸಲು ಉದ್ದೇಶಿಸಿದಾಗ, ಹಝ್ರತ್ ಅಬೂಬಕರ್[ರ] ಅಲ್ಲಾಹನ ಪ್ರಮಾಣ ಮಾಡಿ ಹೇಳಿದರು: “ಕೇವಲ ನನ್ನ ಪ್ರಶ್ನೆಗೆ ಮಾತ್ರ ಉತ್ತರ ನೀಡಿರಿ, ಬೇರೆ ಏನನ್ನೂ ಹೇಳಬೇಡಿರಿ.” ಆಗ ಹಝ್ರತ್ ಪೈಗಂಬರ್[ಸ] ತಾನು ಹಾಗೆ ಹೇಳಿದುದಾಗಿ ಒಪ್ಪಿಕೊಂಡರು. ಆಗ ಹಝ್ರತ್ ಅಬೂಬಕರ್[ರ] ಹೇಳಿದರು: “ನೀವು ಸಾಕ್ಷಿಯಾಗಿರಿ. ನಾನು ನಿಮ್ಮನ್ನು ನಂಬಿರುವೆನು.” ಅನಂತರ ಹಝ್ರತ್ ಅಬೂಬಕರ್[ರ] ಹೀಗೆಂದರು: “ನೀವು ಸಾಕ್ಷ್ಯಾಧಾರಗಳನ್ನು ನೀಡಿ ನನ್ನ ವಿಶ್ವಾಸವನ್ನು ಬಲಹೀನಪಡಿಸಲು ತೊಡಗಿದಿರಿ. ಆದರೆ ಯಾರು ನಿಮ್ಮ ಜೀವಿತವನ್ನು ನೋಡಿರುವನೋ ಅವನಿಗೆ ನಿಮ್ಮ ಸತ್ಯಸಂಧತೆಯ ಬಗ್ಗೆ ಬೇರೆ ಯಾವುದಾದರೂ ಸಾಕ್ಷ್ಯಾಧಾರದ ಅವಶ್ಯಕತೆ ಇದೆಯೇ?”

### ಸತ್ಯವಿಶ್ವಾಸಿಗಳ ಕಿರುಸಂಘ

ಸತ್ಯವಿಶ್ವಾಸಿಗಳ ಒಂದು ಕಿರು ಸಂಘದ ಮೂಲಕ ಇಸ್ಲಾಮ್ ಧರ್ಮದ ಅಸ್ತಿಭಾರವನ್ನು ಹಾಕಲಾಯಿತು. ವೃದ್ಧಾಪ್ಯವನ್ನು ತಲುಪಲಿದ್ದ ಒಬ್ಬ ಮಹಿಳೆ, ಹನ್ನೊಂದು ವರ್ಷ ಪ್ರಾಯದ ಒಬ್ಬ ಬಾಲಕ, ಗುಲಾಮಗಿರಿಯಿಂದ ವಿಮೋಚಿಸಲಾದ, ಆದರೆ ರಕ್ತ ಸಂಬಂಧಿಗಳಾಗಲೀ ಬೆಂಬಲಿಗರಾಗಲೀ ಇಲ್ಲದೆ ಅನ್ಯರೊಂದಿಗೆ ಜೀವಿಸುತ್ತಿದ್ದ ಒಬ್ಬ ಯುವಕ, ಸ್ನೇಹಿತನಾದ ಇನ್ನೊಬ್ಬ ತರುಣ ಮತ್ತು ದೇವಸಂದೇಶ ಪಡೆದಿರುವುದಾಗಿ ವಾದಿಸುವ ಒಬ್ಬ ಪೈಗಂಬರ್ (ಪ್ರವಾದಿ) ಈ ಸಂಘದ ಸದಸ್ಯರಾಗಿದ್ದರು. ಈ ಚಿಕ್ಕ ಸಂಘ ಪ್ರಪಂಚದಲ್ಲಿ ಸತ್ಯದ ಪ್ರಕಾಶವನ್ನು ಹಬ್ಬಿಸಲಿಕ್ಕಾಗಿ ಅವಿಶ್ವಾಸ ಮತ್ತು ಅಧರ್ಮದ ವಿರುದ್ಧದ ಹೋರಾಟದ ಮೈದಾನದ ಕಡೆಗೆ ಪಯಣ ಹೊರಟಿತು. ಜನರು ಇವರ ಬಗ್ಗೆ ತಿಳಿದಾಗ ನಕ್ಕು ಪರಿಹಾಸ ಮಾಡಿದರು. ಪರಸ್ಪರ ಕಣ್ಣಿನ ಮೂಲಕ ಸಂಜ್ಞೆಗಳನ್ನು ಮಾಡಿದರು. ಪರಸ್ಪರ ನೋಟಗಳ ಮೂಲಕ, “ಈ ಜನರು ಹುಚ್ಚರಾಗಿರುವರು. ಅವರ ಮಾತುಗಳಿಂದ ಆಶ್ಚರ್ಯಚಕಿತರಾಗಬೇಡಿರಿ, ಅವರ ಮಾತುಗಳನ್ನು ಆಲಿಸಿ ಅವುಗಳಿಂದ ರಸಾಸ್ವಾದನೆ ಮಾಡಿರಿ” ಎಂದು ಸೂಚಿಸಿದರು.

ಆದರೆ ಸತ್ಯವು ತನ್ನ ಪೂರ್ಣ ಮಹತ್ವದೊಂದಿಗೆ ಪ್ರತ್ಯಕ್ಷವಾಗಲು ತೊಡಗಿತು. ಯೆಶಾಯ ಪ್ರವಾದಿಯ ಭವಿಷ್ಯವಾಣಿಗಳ ಪ್ರಕಾರ “ಆಜ್ಞೆಯ ಮೇಲೆ ಆಜ್ಞೆ; ಆಜ್ಞೆಯ ಮೇಲೆ ಆಜ್ಞೆ; ಸೂತ್ರದ ಮೇಲೆ ಸೂತ್ರ; ಸೂತ್ರದ ಮೇಲೆಸೂತ್ರ;”[9] ಪ್ರಕಟವಾಗುತ್ತಾ ಹೋಯಿತು. “ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ” ಮತ್ತು ಅರಬ್ ದೇಶವಾಸಿಗಳು ಅದಕ್ಕಿಂತ ಮೊದಲು ತಿಳಿದಿರದ “ಅಪರಿಚಿತ ಭಾಷೆಯಲ್ಲಿ” ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮೂಲಕ ಅರಬ್ ಜನತೆಯೊಂದಿಗೆ ಮಾತನಾಡಲು ತೊಡಗಿದನು. ಯುವಕರ ಹೃದಯಗಳು ಕಂಪಿಸಲು ತೊಡಗಿದುವು. ಸತ್ಯಾನ್ವೇಷಿಗಳ ದೇಹಗಳಲ್ಲಿ ನವೋತ್ಸಾಹ ಉಂಟಾಯಿತು. ಅವರ ನಗು ಮತ್ತು ಪರಿಹಾಸದ ಶಬ್ದಗಳ ಸ್ಥಾನದಲ್ಲಿ ಮೆಚ್ಚುಗೆಯ ಮತ್ತು ಪ್ರಶಂಸೆಯ ಪದಗಳು ಮೆಲ್ಲಮೆಲ್ಲನೆ ಹೆಚ್ಚಾಗಲು ತೊಡಗಿದುವು. ಗುಲಾಮರ, ತರುಣರ, ಮತ್ತು ದೌರ್ಜನ್ಯಪೀಡಿತರಾದ ಸ್ತ್ರೀಯರ ಒಂದು ಗುಂಪು ಹಝ್ರತ್ ಪೈಗಂಬರರ[ಸ] ಸುತ್ತುಮುತ್ತು ಜಮಾಯಿಸಲು ತೊಡಗಿತು.

ಹಝ್ರತ್ ಪೈಗಂಬರರ[ಸ] ಧ್ವನಿಯಲ್ಲಿ ಸ್ತ್ರೀಯರು ತಮ್ಮ ಹಕ್ಕುಗಳ ಸಂರಕ್ಷಣೆಯನ್ನು ಕಾಣುತ್ತಿದ್ದರು. ಗುಲಾಮರು ತಮ್ಮ ಸ್ವಾತಂತ್ರ್ಯದ ಪ್ರಕಟಣೆಯನ್ನು ಆಲಿಸುತ್ತಿದ್ದರು. ತರುಣರು ದೊಡ್ಡ ದೊಡ್ಡ ಆಶೆಗಳ ಮತ್ತು ಅಭಿವೃದ್ಧಿಯ ಮಾರ್ಗಗಳು ತೆರೆಯುತ್ತಿರುವುದಾಗಿ ಮನವರಿಕೆ ಮಾಡಿಕೊಳ್ಳುತ್ತಿದ್ದರು.

### ಮಕ್ಕ ನಗರದ ಮುಂದಾಳುಗಳ ವಿರೋಧ

ನಗು ಮತ್ತು ಪರಿಹಾಸದ ಮಧ್ಯೆ ಪ್ರಶಂಸೆ ಮತ್ತು ಸ್ತುತಿಯ ಸ್ವರಗಳು ಸಹ ಮೇಲಕ್ಕೇಳಲು ಪ್ರಾರಂಭಿಸಿದಾಗ ಮಕ್ಕ ನಗರದ ಮುಂದಾಳುಗಳು ಗಾಬರಿಗೊಂಡರು. ಅಧಿಕಾರಿಗಳ ಹೃದಯದಲ್ಲಿ ಭಯವುಂಟಾಗಲು ತೊಡಗಿತು. ಅವರು ಒಟ್ಟಿಗೆ ಸೇರಿದರು, ಸಮಾಲೋಚನೆ ನಡೆಸಿದರು ಮತ್ತು ತಂತ್ರೋಪಾಯಗಳನ್ನು ಕೈಗೊಳ್ಳಲು ನಿರ್ಧರಿಸಿದರು. ಅವರು ನಗು ಮತ್ತು ಪರಿಹಾಸದ ಸ್ಥಾನದಲ್ಲಿ ದೌರ್ಜನ್ಯ, ಅನ್ಯಾಯ, ಕ್ರೂರವರ್ತನೆ ಮತ್ತು ಸಂಬಂಧ ವಿಚ್ಛೇದನೆಯ ಪರಿಹಾರೋಪಾಯಗಳನ್ನು ಕೈಗೊಳ್ಳಲು ತೀರ್ಮಾನಿಸಿದರು ಹಾಗೂ ಅವುಗಳನ್ನು ಅನುಷ್ಠಾನಕ್ಕೆ ತರಲು ಪ್ರಾರಂಭಿಸಿದರು. ಮಕ್ಕ ನಗರದ ನಿವಾಸಿಗಳು ಇಸ್ಲಾಮಿನ ವಿರುದ್ಧ ಕಾರ್ಯೋನ್ಮುಖರಾಗಲು ನಿರ್ಧರಿಸಿದರು. ಆಗ ಅವರ ದೃಷ್ಟಿಯಲ್ಲಿ “ಹುಚ್ಚು ವಾದ”ವಾಗಿದ್ದುದು ಈಗ ಒಂದು ಅಭಿವೃದ್ಧಿಶೀಲ ವಾಸ್ತವಿಕತೆಯಾಗಿ ಕಂಡು ಬಂದಿತು. ಮಕ್ಕದ ರಾಜಕೀಯ ವ್ಯವಸ್ಥೆಗೆ ಅಪಾಯ, ಮಕ್ಕದ ಧರ್ಮಕ್ಕೆ ಅಪಾಯ, ಮಕ್ಕದ ನಾಗರಿಕ ವ್ಯವಸ್ಥೆಗೆ ಅಪಾಯ ಮತ್ತು ಮಕ್ಕದ ಸಂಪ್ರದಾಯಗಳಿಗೆ ಹಾಗೂ ಕಟ್ಟುಕಟ್ಟಳೆಗಳಿಗೆ ಅಪಾಯ ಅವರಿಗೆ ಕಾಣಿಸುತ್ತಿತ್ತು. ಇಸ್ಲಾಮ್ ಒಂದು ಹೊಸ ಆಕಾಶವನ್ನು ಮತ್ತು ಹೊಸ ಭೂಮಿಯನ್ನು ಸೃಷ್ಟಿಸುತ್ತಿರುವುದಾಗಿ ಅವರಿಗೆ ಕಾಣಿಸಿತು. ಆ ಹೊಸ ಆಕಾಶ ಮತ್ತು ಹೊಸ ಭೂಮಿಯು ಅಸ್ತಿತ್ವಕ್ಕೆ ಬರುತ್ತಿರುವಾಗ ಅರಬ್ ದೇಶದ ಹಳೆಯ ಆಕಾಶ ಮತ್ತು ಹಳೆಯ ಭೂಮಿ ಬಾಕಿಯಾಗಿ ಉಳಿಯುವುದು ಸಾಧ್ಯವಿರಲಿಲ್ಲ. ಈಗ ಇಸ್ಲಾಮ್ ಮಕ್ಕ ನಗರದ ನಿವಾಸಿಗಳಿಗೆ ಕೇವಲ ಪರಿಹಾಸಯೋಗ್ಯ ಸಮಸ್ಯೆಯಾಗಿ ಉಳಿಯಲಿಲ್ಲ. ಇದು ಈಗ ಜೀವಿತ ಮತ್ತು ಮರಣದ ಸವಾಲಾಗಿ ಪರಿಣಮಿಸಿತು. ಹಿಂದಿನ ಪ್ರವಾದಿಗಳ ವಿರೋಧಿಗಳು ಆಯಾಕಾಲದ ಪ್ರವಾದಿಯ ಪಂಥಾಹ್ವಾನಗಳನ್ನು ಎದುರಿಸುತ್ತಾ ಇದ್ದ ಹಾಗೆ ಅವರು ಇಸ್ಲಾಮಿನ ಪಂಥಾಹ್ವಾನವನ್ನೂ ಎದುರಿಸಿದರು. ಅವರು ಸಾಕ್ಷ್ಯಾಧಾರಕ್ಕೆ ಉತ್ತರವಾಗಿ ಸಾಕ್ಷ್ಯಾಧಾರಗಳನ್ನು ನೀಡುವುದಕ್ಕೆ ಪ್ರತಿಯಾಗಿ ಖಡ್ಗ ಮತ್ತು ಬಾಣಗಳ ಮೂಲಕ ಉತ್ತರ ನೀಡಲು ಸನ್ನದ್ಧರಾದರು. ಇಸ್ಲಾಮ್‌ಧರ್ಮದ ಶುಭಾಶಯಗಳಿಗೆ ಉತ್ತರವಾಗಿ, ಅಂತಹದೇ ಉನ್ನತ ಸ್ವಭಾವಗುಣಗಳ ಮೂಲಕವಲ್ಲ, ಬದಲಾಗಿ ಬೈಗಳು ಮತ್ತು ಕಠೋರವಾಕ್ಯಗಳಿಂದ ಉತ್ತರ ನೀಡಲು ತೀರ್ಮಾನಿಸಿದರು. ಹಿಂದಿನ ಕಾಲದ ಹಾಗೆ ಇನ್ನೊಮ್ಮೆ ವಿಶ್ವಾಸ ಮತ್ತು ಅವಿಶ್ವಾಸದ ನಡುವೆ ಯುದ್ಧ ಪ್ರಾರಂಭವಾಯಿತು. ಶೈತಾನನ ಸೇನಾಬಲದವರು ಇನ್ನೊಂದು ಸಾರಿ ದೇವದೂತರನ್ನು ಆಕ್ರಮಿಸಲು ತೊಡಗಿದರು. ಅಲ್ಪಸಂಖ್ಯಾತರಾದ ಸತ್ಯವಿಶ್ವಾಸಿಗಳು ಮಕ್ಕದ ನಿವಾಸಿಗಳ ಅಕ್ರಮ ವರ್ತನೆಗಳನ್ನು ತಡೆಯಲು ಅಸಮರ್ಥರಾದರು. ಸ್ತ್ರೀಯರು ಬಹಳ ಅಪಮಾನಕರವಾಗಿ ವಿವಿಧ ರೀತಿಗಳಲ್ಲಿ ಕೊಲ್ಲಲ್ಪಟ್ಟರು. ಪುರುಷರ ಕಾಲುಗಳನ್ನು ಕಡಿದು ಹಾಕಿ ಕೊಂದರು. ಗುಲಾಮರನ್ನು ಬಿಸಿಲಿನಲ್ಲಿ ಬೆಂದ ಮರಳಿನಲ್ಲಿ ಮತ್ತು ಒರಟಾದ ಕಲ್ಲುಗಳ ಮೇಲೆ ಎಳೆಯಲಾಯಿತು. ಅಂತಹ ಜನರ ಚರ್ಮಗಳು ಮಾನವರ ಚರ್ಮದ ರೂಪವನ್ನು ಕಳೆದುಕೊಂಡು ಮೃಗಗಳ ಚರ್ಮದಂತೆ ಆದುವು. ಒಂದು ಕಾಲಾವಧಿಯ ನಂತರ ಇಸ್ಲಾಮಿನ ವಿಜಯದ ಕಾಲದಲ್ಲಿ ಇಸ್ಲಾಮಿನ ಪತಾಕೆ ಪೂರ್ವದಲ್ಲಿಯೂ ಪಶ್ಚಿಮದಲ್ಲಿಯೂ ಹಾರಾಡುತ್ತಿದ್ದಾಗ, ಆದ್ಯಕಾಲದಲ್ಲಿಯೇ ಇಸ್ಲಾಮಿಗೆ ಸೇರಿದ ನವಮುಸ್ಲಿಮ್ ಗುಲಾಮರಾಗಿದ್ದ ಹಝ್ರತ್ ಖಬ್ಬಾಬ್[ರ] ಎಂಬವರ ಬೆನ್ನು ಒಮ್ಮೆ ನಗ್ನವಾದಾಗ ಅವರ ಸಂಗಡಿಗರು ಅವರ ಬೆನ್ನನ್ನು ನೋಡಿದಾಗ ಅವರ ಬೆನ್ನಿನ ಚರ್ಮ ಮನುಷ್ಯರ ಚರ್ಮದಂತಿರದೆ ಮೃಗಗಳ ಚರ್ಮದ ಹಾಗೆ ಇರುವುದನ್ನು ಕಂಡು ಗಾಬರಿಗೊಂಡು, “ನಿಮಗೆ ಯಾವ ರೋಗ ತಗಲಿದೆ?’ ಎಂದು ಪ್ರಶ್ನಿಸಿದಾಗ ಅವರು ನಕ್ಕು ಹೇಳಿದರು: “ನನಗೆ ಯಾವುದೇ ರೋಗವಿಲ್ಲ, ಇದೊಂದು ಸ್ಮಾರಕವಾಗಿದೆ. ನವಮುಸ್ಲಿಮರಾದ ಗುಲಾಮರನ್ನು ಮಕ್ಕದ ಜನರು ನಗರದ ಮಾರ್ಗಗಳಲ್ಲಿ ಕಠಿಣ ಮತ್ತು ಒರಟು ಕಲ್ಲುಗಳ ಮೇಲೆ ಎಳೆದುಕೊಂಡು ಹೋಗುತ್ತಿದ್ದರು. ಅವರು ದೌರ್ಜನ್ಯವನ್ನು ಪುನರಾವರ್ತಿಸುತ್ತಿದ್ದರು. ಇದರ ಫಲಸ್ವರೂಪವಾಗಿ ನನ್ನ ಬೆನ್ನಿನ ಚರ್ಮ ಈ ರೂಪವನ್ನು ಹೊಂದಿದೆ.”

### ಸತ್ಯವಿಶ್ವಾಸಿಗಳಾದ ಗುಲಾಮರ ಮೇಲೆ ಮಕ್ಕ ನಗರದ ಅವಿಶ್ವಾಸಿಗಳ ದೌರ್ಜನ್ಯಗಳ ಪರಂಪರೆ

ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮೇಲೆ ವಿಶ್ವಾಸ ಹೊಂದಿದ ಗುಲಾಮರು ವಿವಿಧ ಜನಾಂಗಗಳಿಗೆ ಸೇರಿದವರಾಗಿದ್ದರು. ಅವರಲ್ಲಿ ಹಝ್ರತ್ ಬಿಲಾಲ್[ರ] ರಂತಹ ಇತಿಯೋಪ್ಯದವರೂ ಇದ್ದರು; ಹಝ್ರತ್ ಸಹೀಬ್[ರ]ರಂತಹ ಪೌರ್ವಾತ್ಯ ರೋಮನ್ ಸಾಮ್ರಾಜ್ಯದ (Eastern Roman Empire) ನಿವಾಸಿಗಳೂ ಇದ್ದರು. ಅವರಲ್ಲಿ ಕೆಲವರು ಹಝ್ರತ್ ಜಬೀರ್ ಮತ್ತು ಹಝ್ರತ್ ಸಹೀಬ್‌ರಂತಹವರು ಹಿಂದೆ ಕ್ರೈಸ್ತರಾಗಿದ್ದರು. ಹಝ್ರತ್ ಬಿಲಾಲ್[ರ] ಮತ್ತು ಹಝ್ರತ್ ಅಮ್ಮಾರ್[ರ] ಹಾಗಿರುವವರು ಹಿಂದೆ ಬಹುದೈವ ವಿಶ್ವಾಸಿಗಳಾಗಿದ್ದರು.

ಹಝ್ರತ್ ಬಿಲಾಲ್‌ರನ್ನು ಅವರ ಮಾಲಿಕನು ಕಠಿಣ ಬಿಸಿಲಿನಲ್ಲಿ ಬೆಚ್ಚಗಾದ ಮರಳಿನಲ್ಲಿ ಮಲಗಿಸಿ ಅವರ ಮೇಲೆ ಕಲ್ಲುಗಳನ್ನು ಇಡುತ್ತಿದ್ದನು ಅಥವಾ ಅವರ ಎದೆಯ ಮೇಲೆ ಹಾರಲು ಯುವಕರನ್ನು ಏರ್ಪಡಿಸುತ್ತಿದ್ದನು.

(ಮುಂದುವರಿಯುವುದು)

## ಹಝ್ರತ್ ಮಸೀಹ್ ಮೌಊದರ(ಅಲೈಹಿಸ್ಸಲಾಮ್) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

(8) **ಬಿಸ್ಮಿಲ್ಲಾಹಿರ್ರಹ್ಮಮಾನ್ ನಿರ್ರಹೀಮ್:** ನನ್ನ ತಾಯಿಯವರು ನನ್ನೊಡನೆ ಹೇಳಿದರು, ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಒಮ್ಮೆ ನಾನು ಒಂದು ಮುಖದ್ದಮೆಗಾಗಿ ಡಾಲ್ಹೌಸಿ ಪರ್ವತಕ್ಕೆ ಹೋಗುತ್ತಿದ್ದಾಗ, ದಾರಿಯಲ್ಲಿ ಮಳೆ ಬರಲು ಪ್ರಾರಂಭಿಸಿತು. ನಾನು ಮತ್ತು ನನ್ನ ಸಹಚರ ವಾಹನದಿಂದ ಇಳಿದು ರಸ್ತೆಯ ಬಳಿ ಇದ್ದ ಒಬ್ಬ ಪರ್ವತ ಮನುಷ್ಯನ ಮನೆಯ ಕಡೆಗೆ ಹೋದೆವು. ನನ್ನ ಸಹಚರ ಮುಂದೆ ಹೋಗಿ ಮನೆ ಮಾಲೀಕರನ್ನು ಒಳಗೆ ಬರಲು ಅನುಮತಿ ಕೇಳಿದನು ಆದರೆ ಅವನು ನಮ್ಮನ್ನು ತಡೆದನು. ಇದರ ಮೇಲೆ ಅವರು ಜಗಳವಾಡಿದರು ಮತ್ತು ಮನೆ ಮಾಲೀಕನು ಕೋಪಗೊಂಡು ನಮ್ಮನ್ನು ನಿಂದಿಸಲು ಪ್ರಾರಂಭಿಸಿದನು. ಈ ವಾದವನ್ನು ಕೇಳಿದ ನಂತರ ನಾನು ಮುಂದೆ ಹೋದೆ. ನನ್ನ ಕಣ್ಣುಗಳು ಮತ್ತು ಮನೆ ಮಾಲೀಕನ ಕಣ್ಣುಗಳು ಭೇಟಿಯಾದ ತಕ್ಷಣ, ನಾನು ಏನನ್ನೂ ಹೇಳುವ ಮೊದಲು, ಅವನು ತಲೆ ತಗ್ಗಿಸಿ ಹೇಳಿದನು, “ವಾಸ್ತವವೇನೆಂದರೆ, ನನಗೆ ಚಿಕ್ಕ ಮಗಳಿದ್ದಾಳೆ, ಆದ್ದರಿಂದ ನಾನು ಅಪರಿಚಿತರನ್ನು ನನ್ನ ಮನೆಗೆ ಪ್ರವೇಶಿಸಲು ಬಿಡುವುದಿಲ್ಲ, ಆದರೆ ನೀವು ಖಂಡಿತವಾಗಿಯೂ ಒಳಗೆ ಬರಬೇಕು.” ಹಝ್ರತ್ ಸಾಹಿಬ್ ಹೇಳುತ್ತಿದ್ದರು: ನಾವು ಅಪರಿಚಿತರು, ನಾನು ಅವನನ್ನು ತಿಳಿದಿರಲಿಲ್ಲ ಅಥವಾ ಅವನು ನನ್ನನ್ನು ತಿಳಿದಿರಲಿಲ್ಲ.

(9) **ಬಿಸ್ಮಿಲ್ಲಾಹಿರ್ರಹ್ಮಮಾನ್ ನಿರ್ರಹೀಮ್:** ನನ್ನ ತಾಯಿಯವರು ನನ್ನೊಡನೆ ಹೇಳಿದರು, ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಒಮ್ಮೆ ನಾನು ಪ್ರಯಾಣದಲ್ಲಿದ್ದಾಗ, ರಾತ್ರಿ ನಾವು ಒಂದು ಮನೆಯ ಎರಡನೇ ಮಹಡಿಯಲ್ಲಿರುವ ಕೋಣೆಯಲ್ಲಿ ತಂಗಿದ್ದೆವು. ಅದೇ ಕೋಣೆಯಲ್ಲಿ ಇತರ ಏಳೆಂಟು ಜನರು ಇದ್ದರು. ಎಲ್ಲರೂ ನಿದ್ರಿಸಿದಾಗ, ರಾತ್ರಿಯ ಒಂದು ಭಾಗ ಕಳೆದಾಗ, ನಾನು ಒಂದು ಟಿಕ್ ಟಿಕ್ ಶಬ್ದವನ್ನು ಕೇಳಿದೆ ಮತ್ತು ಈ ಕೋಣೆಯ ಛಾವಣಿ ಕುಸಿಯುವ ಹಂತದಲ್ಲಿದೆ ಎಂದು ನನ್ನ ಹೃದಯದಲ್ಲಿ ಭಯವಾಯಿತು. ಆದ್ದರಿಂದ ನಾನು ನನ್ನ ಒಡನಾಡಿ ಮಸಿತಾ ಬೇಗ್ ಅವರನ್ನು ಕರೆದು ಛಾವಣಿ ಕುಸಿಯುವ ಹಂತದಲ್ಲಿದೆ ಎಂದು ನನಗೆ ಭಾಸವಾಗುತ್ತಿದೆ ಎಂದು ಹೇಳಿದೆ. ಅವರು ಹೇಳಿದರು, “ಮಿಯಾಂ, ಇದು ನಿಮ್ಮ ಭ್ರಮೆ. ಹೊಸ ಮನೆ ನಿರ್ಮಿಸಲಾಗಿದೆ ಮತ್ತು ಸಂಪೂರ್ಣವಾಗಿ ಹೊಸ ಛಾವಣಿ ಇದೆ. ಶಾಂತಿಯುತವಾಗಿ ನಿದ್ರಿಸಿ.” ಹಝ್ರತ್ ಸಾಹಿಬ್ ಹೇಳುತ್ತಿದ್ದರು, ನಾನು ಅದನ್ನು ಕೇಳಿ ಮತ್ತೆ ಮಲಗುತ್ತೇನೆ. ಆದರೆ ಸ್ವಲ್ಪ ಸಮಯದ ನಂತರ ಅದೇ ಭಯ ಮತ್ತೆ ನನ್ನ ಹೃದಯವನ್ನು ಆವರಿಸಿತು. ನಾನು ನನ್ನ ಒಡನಾಡಿಯನ್ನು ಮತ್ತೆ ಎಬ್ಬಿಸಿದೆ, ಆದರೆ ಅವರು ಮತ್ತೆ ಅದೇ ಉತ್ತರವನ್ನು ನೀಡಿದರು. ನಾನು ಮತ್ತೆ ಮಲಗಿದೆ, ಆದರೆ ನಂತರ ಈ ಆಲೋಚನೆ ನನ್ನ ಹೃದಯವನ್ನು ತೀವ್ರತೆಯಿಂದ ಆವರಿಸಿತು ಮತ್ತು ಮೇಲ್ಛಾವಣಿಯ ಕಂಬವು ಮುರಿಯುವ ಹಂತದಲ್ಲಿದೆ ಎಂದು ತೋರುತ್ತಿತ್ತು. ನಾನು ಮತ್ತೆ ಗಾಬರಿಯಿಂದ ಎದ್ದೆ ಮತ್ತು ಈ ಬಾರಿ ನನ್ನ ಜೊತೆಗಾರನಿಗೆ ಕಟ್ಟುನಿಟ್ಟಾಗಿ ಹೇಳಿದೆ, “ಛಾವಣಿ ಕುಸಿಯಲಿದೆ ಎಂದು ನಾನು ನಿಮಗೆ ಹೇಳುತ್ತಿದ್ದೇನೆ, ಎದ್ದೇಳಿ. ಹಾಗಾದರೆ ನೀವು ಏಕೆ ಎದ್ದೇಳಬಾರದು?” ಎಂದು. ಅವನನ್ನು ಬಲವಂತವಾಗಿ ಎದ್ದೇಳಲು ಒತ್ತಾಯಿಸಲಾಯಿತು ಮತ್ತು ನಾವು ಉಳಿದ ಜನರನ್ನು ಸಹ ಎಬ್ಬಿಸಿದೆವು. ನಂತರ ನಾನು ಎಲ್ಲರಿಗೂ ಬೇಗನೆ ಹೊರಗೆ ಹೋಗಿ ಕೆಳಗೆ ಹೋಗಲು ಹೇಳಿದೆ. ಬಾಗಿಲಿನ ಪಕ್ಕದಲ್ಲಿ ಒಂದು ಮೆಟ್ಟಿಲು ಇತ್ತು. ನಾನು ಬಾಗಿಲಲ್ಲಿ ನಿಂತಿದ್ದೆ ಮತ್ತು ಅವರೆಲ್ಲರೂ ಒಬ್ಬೊಬ್ಬರಾಗಿ ಹೊರಬಂದು ಕೆಳಗೆ ಹೋದರು. ಎಲ್ಲರೂ ಹೊರಟುಹೋದಾಗ, ಹಝ್ರತ್ ಸಾಹಿಬ್ ಹೇಳುತ್ತಿದ್ದರು, ಆಗ ನಾನು ಒಂದು ಹೆಜ್ಜೆ ಇಟ್ಟೆ. ನನ್ನ ಹೆಜ್ಜೆ ಬಹುಶಃ ಅರ್ಧ ಹೊರಗೆ ಮತ್ತು ಅರ್ಧ ಹೊಸ್ತಿಲಿನ ಮೇಲೆ ಇದ್ದಾಗ ಇದ್ದಕ್ಕಿದ್ದಂತೆ ಛಾವಣಿ ಕುಸಿದು ಬಿದ್ದಿತು ಮತ್ತು ಅದು ಎಷ್ಟು ಬಲದಿಂದ ಬಿದ್ದಿತ್ತೆಂದರೆ ಕೆಳಗಿನ ಛಾವಣಿಯೂ ಸಹ ಕುಸಿದು ಬಿತ್ತು. ನಾವು ಮಲಗಿದ್ದ ಹಾಸಿಗೆಗಳು ಛಿದ್ರಗೊಂಡಿರುವುದನ್ನು ನಾವು ನೋಡಿದ್ದೇವೆ ಎಂದು ಹಝ್ರತ್ ಸಾಹಿಬ್ ಹೇಳುತ್ತಿದ್ದರು. ನಾನು ನನ್ನ ತಾಯಿಯವರನ್ನು ಮಸಿತಾ ಬೇಗ್ ಯಾರು ಎಂದು ಕೇಳಿದೆ. ಅದಕ್ಕೆ ನನ್ನ ತಾಯಿ ಹೇಳಿದರು: ಅವರು ನಿಮ್ಮ ಅಜ್ಜನ ದೂರದ ಸಂಬಂಧಿ ಮತ್ತು ಸೇವಕ. ಹಝ್ರತ್ ಖಲೀಫತುಲ್ ಮಸಿಹ್ ಸಾನಿ(ರ) ಒಮ್ಮೆ ಈ ವರದಿಯನ್ನು ಹೇಗೆ ವಿವರಿಸಿದ್ದರೆಂದರೆ, ಈ ಘಟನೆ ಹಝ್ರತ್ ಮಸೀಹ್ ಮೌಊದ್(ಅ)ರು ಕೆಲಸ ಮಾಡುತ್ತಿದ್ದ ಸಿಯಾಲ್‌ಕೋಟ್‌ನಲ್ಲಿ ನಡೆಯಿತು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಿದ್ದರು: ಆ ಸಮಯದಲ್ಲಿ ನಾನು ಹೊರಬರಲು ಈ ಛಾವಣಿ ಕಾಯುತ್ತಿದೆ ಎಂದು ನಾನು ಭಾವಿಸಿದೆ. ಅಲ್ಲದೆ, ಆ ಸಮಯದಲ್ಲಿ ಈ ಕೋಣೆಯಲ್ಲಿ ಕೆಲವು ಹಿಂದೂಗಳಿದ್ದರು ಮತ್ತು ಈ ಘಟನೆಯ ನಂತರ ಅವರು ಹಝ್ರತ್ ಸಾಹಿಬ್‌ರ ತುಂಬಾ ನಂಬಿಕೆಯುಳ್ಳವರಾದರು ಎಂದು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳಿದ್ದಾರೆ.

(10) **ಬಿಸ್ಮಿಲ್ಲಾಹಿರ್ರಹ್ಮಮಾನ್ ನಿರ್ರಹೀಮ್:** ನನ್ನ ತಾಯಿಯವರು ನನ್ನೊಡನೆ ಹೇಳಿದರು, ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಹಿರಿಯ ಮಿರ್ಝಾ ಸಾಹಿಬ್ (ಅಂದರೆ ಹಝ್ರತ್ ಮಸೀಹ್ ಮೌಊದ್ ಅವರ ತಂದೆ) ಕಾಶ್ಮೀರದಲ್ಲಿ ಕೆಲಸ ಮಾಡುತ್ತಿದ್ದಾಗ, ನಮ್ಮ ತಾಯಿ ಇಂದು ನನ್ನ ಮನಸ್ಸು ಕಾಶ್ಮೀರದಿಂದ ಏನಾದರೂ ಬರುತ್ತದೆ ಎಂದು ಹೇಳುತ್ತದೆ ಎಂದು ಅನೇಕ ಬಾರಿ ಹೇಳಿದ್ದರು, ಮತ್ತು ಅದೇ ದಿನ ಒಬ್ಬ ವ್ಯಕ್ತಿ ಕಾಶ್ಮೀರದಿಂದ ಬಂದನು ಮತ್ತು ಕೆಲವೊಮ್ಮೆ ಇಲ್ಲಿ ತಾಯಿಯು ಹೀಗೆ ಹೇಲಿದಾಗಲೇ ಅಷ್ಟರಲ್ಲಿ ಅಲ್ಲಿ ಯಾರೋ ಬಾಗಿಲು ತಟ್ಟಿದರು. ನಾವು ವಿಚಾರಿಸಿದಾಗ, ಒಬ್ಬ ವ್ಯಕ್ತಿ ಕಾಶ್ಮೀರದಿಂದ ಬಂದಿದ್ದಾನೆಂದು ನಮಗೆ ತಿಳಿದುಬಂದಿತು. ನಮ್ಮ ತಾಯಿ ಹೇಳುತ್ತಿದ್ದರು: ನಿಮ್ಮ ಅಜ್ಜ ಕೆಲವು ತಿಂಗಳುಗಳ ನಂತರ ಕಾಶ್ಮೀರದಿಂದ ತನ್ನ ವ್ಯಕ್ತಿಯನ್ನು ಪತ್ರ ಮತ್ತು ಹಣದೊಂದಿಗೆ ಕಳುಹಿಸುತ್ತಿದ್ದರು. ಆ ವ್ಯಕ್ತಿ ದಾರಿಯಲ್ಲಿ ಧರಿಸುತ್ತಿದ್ದ ಚೀಲದ ಕೆಳಭಾಗದಲ್ಲಿ ಬೆಳ್ಳಿ ಮತ್ತು ಚಿನ್ನದ ರೂಪದಲ್ಲಿ ನಗದು ಇತ್ಯಾದಿಗಳನ್ನು ಹೊಲಿಯಲಾಗುತ್ತಿತ್ತು ಮತ್ತು ಅವರು ಖಾದಿಯಾನ್‌ಗೆ ತಲುಪಿದಾಗ ಅದನ್ನು ತೆಗೆದು ಮನೆಯೊಳಗೆ ಕಳುಹಿಸುತ್ತಿದ್ದರು. ಮನೆಯವರು ಅದನ್ನು ತೆರೆದು ಹಣವನ್ನು ಹೊರತೆಗೆದು ನಂತರ ಚೀಲವನ್ನು ಹಿಂತಿರುಗಿಸುತ್ತಿದ್ದರು. ಅಲ್ಲದೆ, ನಮ್ಮ ತಾಯಿ ನಿಮ್ಮ ಅಜ್ಜ ಕಾಶ್ಮೀರದಲ್ಲಿ ಒಂದು ಪ್ರಾಂತ್ಯ ಎಂದು ಹೇಳಿದರು. ಆ ಸಮಯದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಕೂಡ ಮೇಲಿನಿಂದ ಬಂದರು. ಅವರು ಬಂದು ಬ್ರಿಟಿಷರು ಉಪ ಆಯುಕ್ತರು ಮತ್ತು ಆಯುಕ್ತರು ಇತ್ಯಾದಿಗಳನ್ನು ಹೊಂದಿರುವಂತೆ, ಕಾಶ್ಮೀರದಲ್ಲಿ ಪ್ರಾಂತ್ಯಗಳಲ್ಲಿ ಗವರ್ನರ್‌ಗಳು ಮತ್ತು ಪ್ರದೇಶಗಳಿವೆ ಎಂದು ಹೇಳಿದರು. ನಾನು ಹೇಳುವುದೇನೆಂದರೆ: ನಮ್ಮ ಅಜ್ಜಿ, ಹಝ್ರತ್ ಮಸೀಹ್ ಮೌಊದ್(ಅ) ಅವರ ತಾಯಿ ಚಿರಾಗ್ ಬೀಬಿ ಎಂದಾಗಿತ್ತು. ಅವರು ಅಜ್ಜ ಅವರ ಜೀವಿತಾವಧಿಯಲ್ಲಿ ನಿಧನರಾದರು. ಅವರು ಹಝ್ರತ್ ಸಾಹಿಬ್ ಅವರನ್ನು ತುಂಬಾ ಪ್ರೀತಿಸುತ್ತಿದ್ದರು ಮತ್ತು ಅವರು ಕೂಡ ಅವರನ್ನು ತುಂಬಾ ಪ್ರೀತಿಸುತ್ತಿದ್ದರು. ಎಂದಾದರು ಅವರು ಅವರನ್ನು (ತಾಯಿಯನ್ನು) ಉಲ್ಲೇಖಿಸಿದಾಗ ಅವರ ಕಣ್ಣುಗಳು ನೀರು ಬರುವುದನ್ನು ನಾನು ಹಲವು ಬಾರಿ ನೋಡಿದ್ದೇನೆ.

(11) **ಬಿಸ್ಮಿಲ್ಲಾಹಿರ್ರಹ್ಮಮಾನ್ ನಿರ್ರಹೀಮ್:** ನನ್ನ ತಾಯಿಯವರು ನನ್ನೊಡನೆ ಹೇಳಿದರು, ಹಝ್ರತ್ ಮಸೀಹ್ ಮೌಊದ್(ಅ)ರು ಮಂಗಳವಾರವನ್ನು ಒಳ್ಳೆಯ ದಿನವೆಂದು ಪರಿಗಣಿಸಲಿಲ್ಲ ಎಂದು ನನಗೆ ಹೇಳಿದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಅವರು ಮುಬಾರಕ ಬೇಗಂ (ನಮ್ಮ ಸಹೋದರಿ) ಜನಿಸಿದಾಗ ಅದು ಮಂಗಳವಾರವಾಗಿತ್ತು, ಆದ್ದರಿಂದ ಹಝ್ರತ್ ಸಾಹಿಬ್ ದೇವರು ಅವಳನ್ನು ಮಂಗಳವಾರದ ಹಾನಿಕಾರಕ ಪರಿಣಾಮಗಳಿಂದ ರಕ್ಷಿಸಲಿ ಎಂದು ಪ್ರಾರ್ಥಿಸಿದರು ಎಂದು ಹೇಳಿದರು. ನಾನು ಹೇಳುವುದೇನೆಂದರೆ: ಹಝ್ರತ್ ಮಸೀಹ್ ಮೌಊದ್(ಅ)ರು ಶುಕ್ರವಾರ ಜನಿಸಿದರು ಮತ್ತು ಮಂಗಳವಾರ ನಿಧನರಾದರು. ಮತ್ತು ಕಾಲದ ಎಣಿಕೆಯು ಈ ಜಗತ್ತಿನ ಜನರಿಗೆ ಮಾತ್ರ ಮತ್ತು ಜಗತ್ತಿಗೆ ಅವರ ಮರಣದ ದಿನವು ನಿಜವಾಗಿಯೂ ವಿಪತ್ತಿನ ದಿನವಾಗಿತ್ತು ಎಂದು ತಿಳಿದಿರಬೇಕು.

(ಈ ವರದಿಯಿಂದ ಮಂಗಳವಾರವು ದುರದೃಷ್ಟಕರ ದಿನ ಎಂದು ಅರ್ಥವಲ್ಲ, ಬದಲಿಗೆ, ಭಾಗ-2ರ ವರದಿ ಸಂಖ್ಯೆ 311, 322 ಮತ್ತು 360 ರಲ್ಲಿ ವಿವರಿಸಿದಂತೆ. ಇದರರ್ಥ ಮಂಗಳವಾರ ಕೆಲವು ಆಕಾಶಕಾಯಗಳ ಗುಪ್ತ ಪರಿಣಾಮಗಳ ಅಡಿಯಲ್ಲಿ ಕಷ್ಟ ಮತ್ತು ಸಂಕಟದ ಅಂಶವನ್ನು ಹೊಂದಿದೆ. ಆದ್ದರಿಂದ, ಮಂಗಳವಾರದ ಕುರಿತಾದ ಹದೀಸ್‌ನಲ್ಲಿ, ಹಝ್ರತ್ ಪೈಗಂಬರ್(ಸ) ಅವರು ಮಂಗಳವಾರವನ್ನು ಸರ್ವಶಕ್ತನಾದ ಅಲ್ಲಾಹನು ಬಂಡೆಗಳ ಪರ್ವತಗಳು ಮತ್ತು ಹಾನಿಕಾರಕ ವಸ್ತುಗಳನ್ನು ಸೃಷ್ಟಿಸಿದ ದಿನ ಎಂದು ಹೇಳುತ್ತಾರೆ. **ಖಲಖಲ್ ಅರ್ಝ ಫೀ ಯೌಮೈನ್**..... ವಚನದ ಕುರಿತು ಇಬ್ನ್ ಕಸೀರ್ ಅವರ ವ್ಯಾಖ್ಯಾನವನ್ನು ನೋಡಿ.)

**(ಮುಂದುವರಿಯುವುದು)**

**"ಕಪಟ ವಿಶ್ವಾಸಿಗೆ ಮೂರು ಲಕ್ಷಣಗಳಿವೆ: 1. ಸುಳ್ಳು ಹೇಳುವುದು, 2. ವಾಗ್ದಾನ ಲಂಘನೆ, 3. ವಿಶ್ವಾಸ ಘಾತ"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed Saheb & Family, Bengaluru, Karnataka**

**"ರೇಶ್ಮೆ ಮತ್ತು ಬಂಗಾರ ಧರಿಸುವುದು ನನ್ನ ಸಮುದಾಯದ ಪುರುಷರಿಗೆ ನಿಷಿದ್ಧ ಮತ್ತು ಸ್ತ್ರೀಯರಿಗೆ ಅನುಮತನೀಯ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Late S.R Abdur Rauf Saheb & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2026-28 Vol No.07, Thursday, 18 June 2026, Issue No. 25

Act. MANAGER
ATHAR AHMAD SHAMIM.
Mobile : +91 99156 39670
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

ಇಸ್ಲಾಮಿನ ಇತಿಹಾಸದಲ್ಲಿ ಸಾಮಾನ್ಯ ಜನರ ಹಕ್ಕುಗಳನ್ನು ಪೂರೈಸಲು ಖಲೀಫರು ಯಾವ ಪ್ರಯತ್ನಗಳನ್ನು ಮಾಡಿದರು? ಹಝ್ರತ್ ಉಮರ್(ರ.ಅ) ರವರ ಕಾಲದಲ್ಲಿ ಮಾಡಿದ ಪ್ರಯತ್ನಗಳ ಸಂಕ್ಷಿಪ್ತ ಉಲ್ಲೇಖ ಹೀಗಿದೆ.

ಹಝ್ರತ್ ಉಮರ್(ರ.ಅ) ಸಾಮಾನ್ಯ ಜನರ ಕಲ್ಯಾಣ ಮತ್ತು ಸುಧಾರಣೆಗಾಗಿ ಅನೇಕ ಕೆಲಸಗಳನ್ನು ಮಾಡಿದರು. ಕೃಷಿಯನ್ನು ಸುಧಾರಿಸಲು ಮತ್ತು ಜನರಿಗೆ ನೀರು ಒದಗಿಸಲು ಅವರು ಕಾಲುವೆಗಳನ್ನು ತೋಡಿದರು. ಅಬು ಮೂಸಾ ಕಾಲುವೆ: ಟೈಗ್ರಿಸ್ ನದಿಯಿಂದ ಒಂಬತ್ತು ಮೈಲಿ ಉದ್ದದ ಕಾಲುವೆಯನ್ನು ನಿರ್ಮಿಸಿ ಬಸ್ರಾಕ್ಕೆ ತರಲಾಯಿತು. ಮ'ಕಲ್ ಕಾಲುವೆ: ಈ ಕಾಲುವೆಯನ್ನು ಟೈಗ್ರಿಸ್ ನದಿಯಿಂದಲೂ ತೆಗೆದುಕೊಳ್ಳಲಾಗಿದೆ. ಅಮೀರ್ ಅಲ್-ಮು'ಮಿನಿನ್ ಕಾಲುವೆ: ಹಝ್ರತ್ ಉಮರ್(ರ) ರ ಆದೇಶದ ಮೇರೆಗೆ, ನೈಲ್ ನದಿಯನ್ನು ಕೆಂಪು ಸಮುದ್ರಕ್ಕೆ ಸಂಪರ್ಕಿಸಲಾಯಿತು. 18 ನೇ ಹಿಜ್ರಿಯಲ್ಲಿ ಅರೇಬಿಯಾದಲ್ಲಿ ಕ್ಷಾಮ ಉಂಟಾದಾಗ, ಹಝ್ರತ್ ಉಮರ್(ರ) ಅವರು ಹಝ್ರತ್ ಅಮ್ರ್ ಬಿನ್ ಅಲ್-ಆಸ್(ರ) ಅವರಿಗೆ ಸಹಾಯಕ್ಕಾಗಿ ಪತ್ರ ಬರೆದರು. ದೂರವು ಹೆಚ್ಚಾಗಿದ್ದರಿಂದ, ಸಹಾಯ ವಿಳಂಬವಾಯಿತು. ಹಝ್ರತ್ ಉಮರ್(ರ) ಅವರು ಅಮ್ರ್ ಅವರನ್ನು ಕರೆದು ನೈಲ್ ನದಿಯನ್ನು ಸಮುದ್ರಕ್ಕೆ ಸಂಪರ್ಕಿಸಿದರೆ, ಅರೇಬಿಯಾದಲ್ಲಿ ಎಂದಿಗೂ ಕ್ಷಾಮ ಉಂಟಾಗುವುದಿಲ್ಲ ಎಂದು ಹೇಳಿದರು. ಅಮ್ರ್ ಹಿಂತಿರುಗಿ ಫುಸ್ತಾತ್‌ನಿಂದ ಕೆಂಪು ಸಮುದ್ರಕ್ಕೆ ಕಾಲುವೆಯನ್ನು ನಿರ್ಮಿಸಿದರು, ಅದರ ಮೂಲಕ ಹಡಗುಗಳು ಮದೀನಾ, ಜೆದ್ದಾ ಬಂದರನ್ನು ತಲುಪಬಹುದು. ಈ ಕಾಲುವೆ ಇಪ್ಪತ್ತೊಂಬತ್ತು ಮೈಲು ಉದ್ದವಿತ್ತು ಮತ್ತು ಆರು ತಿಂಗಳಲ್ಲಿ ನಿರ್ಮಿಸಲಾಯಿತು. ಹಝ್ರತ್ ಅಮ್ರ್ ಬಿನ್ ಅಲ್-ಆಸ್(ರ.ಅ) ಮೆಡಿಟರೇನಿಯನ್ ಸಮುದ್ರ ಮತ್ತು ಕೆಂಪು ಸಮುದ್ರವನ್ನು ಸಂಪರ್ಕಿಸಲು ಉದ್ದೇಶಿಸಿದ್ದರು ಮತ್ತು ಕೆಂಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರದ ನಡುವೆ ಎಪ್ಪತ್ತು ಮೈಲಿ ದೂರವಿದ್ದ "ಫರ್ಮಾ"ದಿಂದ ಕಾಲುವೆಯನ್ನು ಅಗೆಯುವ ಮೂಲಕ ಅವುಗಳನ್ನು ಸಂಪರ್ಕಿಸಲು ಬಯಸಿದ್ದರು, ಆದರೆ ಗ್ರೀಕರು ಯಾತ್ರಿಕರನ್ನು ದೋಚುವ ಭಯದಿಂದ ಹಝ್ರತ್ ಉಮರ್(ರ) ಇದಕ್ಕೆ ಒಪ್ಪಲಿಲ್ಲ. ಅಮ್ರ್ ಬಿನ್ ಅಲ್-ಆಸ್ ಅವರಿಗೆ ಅನುಮತಿ ನೀಡಿದ್ದರೆ, ಸೂಯೆಜ್ ಕಾಲುವೆಯ ಆವಿಷ್ಕಾರವನ್ನು ಅರಬ್ಬರು ಹಂಚಿಕೊಳ್ಳುತ್ತಿದ್ದರು.

ಹಝ್ರತ್ ಉಮರ್ (ರ.ಅ) ಸಾಮಾನ್ಯ ಜನರ ಅನುಕೂಲಕ್ಕಾಗಿ ವಿವಿಧ ಕಟ್ಟಡಗಳನ್ನು ನಿರ್ಮಿಸಿದ್ದರು. ಇಂದು, ಯುರೋಪ್ ಸಾಮಾನ್ಯ ಜನರಿಗೆ ಈ ಸೌಲಭ್ಯಗಳನ್ನು ಒದಗಿಸುತ್ತದೆ ಎಂದು ಹೇಳಲಾಗುತ್ತದೆ. ಈ ಸೌಲಭ್ಯಗಳನ್ನು ಮೊದಲು ಇಸ್ಲಾಂನಲ್ಲಿ ಒದಗಿಸಲಾಗಿದೆ. ಅವರ ಹಕ್ಕುಗಳನ್ನು ಸ್ಥಾಪಿಸಲಾಯಿತು. ಇಂದಿನ ಮುಸ್ಲಿಂ ಸರ್ಕಾರಗಳು ಇದನ್ನು ನೋಡಿ ಅದನ್ನು ಕಾರ್ಯಗತಗೊಳಿಸಲು ಪ್ರಾರಂಭಿಸಿದರೆ, ಅವರೊಳಗಿನ ಆಂತರಿಕ ಸಂಘರ್ಷಗಳು ಕೊನೆಗೊಳ್ಳುತ್ತವೆ. ಅವುಗಳಲ್ಲಿ ಹಝ್ರತ್ ಉಮರ್(ರ.ಅ) ನಿರ್ಮಿಸಿದ ಮಸೀದಿಗಳು, ನ್ಯಾಯಾಲಯಗಳು, ಮಿಲಿಟರಿ ಶಿಬಿರಗಳು, ಬ್ಯಾರಕ್‌ಗಳು, ನಾಗರಿಕ ನಿರ್ಮಾಣ ಕಾರ್ಯಕ್ಕಾಗಿ ವಿವಿಧ ಕಚೇರಿಗಳು, ರಸ್ತೆಗಳು, ಸೇತುವೆಗಳು, ಅತಿಥಿ ಗೃಹಗಳು, ಚೆಕ್‌ಪೋಸ್ಟ್‌ಗಳು, ಇತ್ಯಾದಿಗಳು ಇದ್ದವು. ಮದೀನಾದಿಂದ ಮೆಕ್ಕಾವರೆಗೆ, ಪ್ರತಿ ಹಂತದಲ್ಲೂ ಕಾರಂಜಿಗಳನ್ನು ನಿರ್ಮಿಸಲಾಯಿತು ಮತ್ತು ಚೆಕ್‌ಪೋಸ್ಟ್‌ಗಳನ್ನು ಸಹ ನಿರ್ಮಿಸಲಾಯಿತು. ಮಾರುಕಟ್ಟೆಯಲ್ಲಿ ಸಾಮಾನ್ಯ ಜನರ ಹಕ್ಕುಗಳಲ್ಲಿ, ಮಾರುಕಟ್ಟೆ ಬೆಲೆಗಳಲ್ಲಿ ಹಸ್ತಕ್ಷೇಪವನ್ನು ಒಂದು ನಿರ್ದಿಷ್ಟ ಮಟ್ಟಿಗೆ ಅನುಮತಿಸಲಾಗಿದೆ, ಕೆಲವೊಮ್ಮೆ ಸರ್ಕಾರವೂ ಸಹ. ಸರಕುಗಳ ಬೆಲೆಯನ್ನು ಕಡಿಮೆ ಮಾಡುವುದನ್ನು ಇಸ್ಲಾಂ ನಿಷೇಧಿಸುತ್ತದೆ ಏಕೆಂದರೆ ಅದು ಜನರಿಗೆ ಹಾನಿ ಮಾಡುತ್ತದೆ, ಇತರ ವ್ಯಾಪಾರಿಗಳಿಗೆ ಹಾನಿ ಮಾಡುತ್ತದೆ ಮತ್ತು ಇದು ಅಶಾಂತಿಯನ್ನು ಉಂಟುಮಾಡುತ್ತದೆ. ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಇದನ್ನು ಒಂದು ಸ್ಥಳದಲ್ಲಿ ವಿವರವಾಗಿ ವಿವರಿಸಿದ್ದಾರೆ:

ಇಸ್ಲಾಂ ಸಹ ಬೆಲೆಯನ್ನು ಅನ್ಯಾಯದ ಮಟ್ಟಿಗೆ ಕಡಿಮೆ ಮಾಡುವುದನ್ನು ನಿಷೇಧಿಸಿದೆ. ಬೆಲೆಯನ್ನು ಕಡಿಮೆ ಮಾಡುವುದು ಅಕ್ರಮ ಸಂಪತ್ತನ್ನು ಗಳಿಸುವ ಒಂದು ಮಾರ್ಗವಾಗಿದೆ ಏಕೆಂದರೆ ಇದರ ಮೂಲಕ, ಪ್ರಬಲ ವ್ಯಾಪಾರಿಗಳು ದುರ್ಬಲ ವ್ಯಾಪಾರಿಗಳನ್ನು ತಮ್ಮ ಸರಕುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲು ಒತ್ತಾಯಿಸುತ್ತಾರೆ ಮತ್ತು ಅವರನ್ನು ದಿವಾಳಿ ಮಾಡುವಲ್ಲಿ ಯಶಸ್ವಿಯಾಗುತ್ತಾರೆ. ಹಝ್ರತ್ ಉಮರ್(ರ.ಅ) ರವರ ಕಾಲದ ಒಂದು ಘಟನೆಯೆಂದರೆ, ಅವರು ಮಾರುಕಟ್ಟೆಗೆ ಭೇಟಿ ನೀಡುತ್ತಿದ್ದಾಗ, ಮದೀನಾದ ವ್ಯಾಪಾರಿಗಳು ಮಾರಾಟ ಮಾಡಲು ಸಾಧ್ಯವಾಗದ ಅತ್ಯಂತ ಅಗ್ಗದ ಬೆಲೆಗೆ ಒಣಗಿದ ದ್ರಾಕ್ಷಿಯನ್ನು ಮಾರಾಟ ಮಾಡುತ್ತಿದ್ದ ಹೊರಗಿನ ವ್ಯಕ್ತಿಯನ್ನು ಅವರು ನೋಡಿದರು. ಅವರು ತಮ್ಮ ಸರಕುಗಳನ್ನು ಮಾರುಕಟ್ಟೆಯಿಂದ ತೆಗೆದುಕೊಂಡು ಹೋಗುವಂತೆ ಅಥವಾ ಮದೀನಾದ ವ್ಯಾಪಾರಿಗಳು ಮಾರಾಟ ಮಾಡುತ್ತಿದ್ದ ಅದೇ ಬೆಲೆಗೆ ಮಾರಾಟ ಮಾಡುವಂತೆ ಆದೇಶಿಸಿದರು. ಈ ಆದೇಶಕ್ಕೆ ಕಾರಣವೇನೆಂದು ಕೇಳಿದಾಗ, ಅವರು ಈ ರೀತಿ ಅವುಗಳನ್ನು ಮಾರಾಟ ಮಾಡಲು ಅನುಮತಿಸಿದರೆ, ಸರಿಯಾದ ಬೆಲೆಗೆ ತಮ್ಮ ಸರಕುಗಳನ್ನು ಮಾರಾಟ ಮಾಡುತ್ತಿದ್ದ ಮದೀನಾದ ವ್ಯಾಪಾರಿಗಳು ತೊಂದರೆ ಅನುಭವಿಸುತ್ತಾರೆ ಎಂದು ಉತ್ತರಿಸಿದರು. ಹಝ್ರತ್ ಪೈಗಂಬರ್(ಸ) ರವರ ಕೆಲವು ಸಹಾಬಗಳು ಮಾರುಕಟ್ಟೆ ಬೆಲೆಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎಂಬ ಹಝ್ರತ್ ಪೈಗಂಬರ್(ಸ) ಅವರ ಮಾತನ್ನು ಉಲ್ಲೇಖಿಸುವ ಮೂಲಕ ಹಝ್ರತ್ ಉಮರ್(ರ.ಅ) ರವರ ಈ ಕ್ರಮವನ್ನು ವಿರೋಧಿಸಿದರು ಎಂಬುದರಲ್ಲಿ ಸಂದೇಹವಿಲ್ಲ, ಆದರೆ ಅವರ ಆಕ್ಷೇಪಣೆ ಸರಿಯಾಗಿಲ್ಲ ಏಕೆಂದರೆ ಮಾರುಕಟ್ಟೆ ಬೆಲೆಗಳಲ್ಲಿ ಹಸ್ತಕ್ಷೇಪ ಮಾಡುವುದು ಎಂದರೆ ಪೂರೈಕೆ ಮತ್ತು ಬೇಡಿಕೆಯ ತತ್ವದಲ್ಲಿ ಹಸ್ತಕ್ಷೇಪ ಮಾಡುವುದು, ಮತ್ತು ಹಾಗೆ ಮಾಡುವುದು ಖಂಡಿತವಾಗಿಯೂ ಹಾನಿಕಾರಕ ಮತ್ತು ಸರ್ಕಾರವು ಅದನ್ನು ತಪ್ಪಿಸಬೇಕು. ಇಲ್ಲದಿದ್ದರೆ, ಜನರಿಗೆ ಪ್ರಯೋಜನವಾಗುವುದಿಲ್ಲ ಮತ್ತು ವ್ಯಾಪಾರಿಗಳು ಹಾಳಾಗುತ್ತಾರೆ. ಆದರೆ ಬೆಲೆಗಳು ಹೇಗಿವೆಯೋ ಅದರಲ್ಲಿ ಯಾವುದೇ ಹಸ್ತಕ್ಷೇಪವಿಲ್ಲ. ಆದ್ದರಿಂದ ಈ ಮಟ್ಟಿಗೆ, ಇಸ್ಲಾಂ ಸಮಾಜದ ಹಕ್ಕುಗಳನ್ನು ಸ್ಥಾಪಿಸಲು ಕಲಿಸುತ್ತದೆ.

ಹಝ್ರತ್ ಉಮರ್(ರ) ಆಡಳಿತಗಾರ ಮತ್ತು ಅವನ ಪ್ರಜೆಗಳ ಕರ್ತವ್ಯಗಳನ್ನು ಒಂದೇ ಸ್ಥಳದಲ್ಲಿ ವಿವರಿಸಿದ್ದಾರೆ: ಹಝ್ರತ್ ಸಲ್ಮಿ ಬಿನ್ ಶಿಹಾಬ್ ಅಬ್ದಿ ಹೇಳುತ್ತಾರೆ, ಹಝ್ರತ್ ಉಮರ್ ಬಿನ್ ಅಲ್-ಖತ್ತಾಬ್(ರ) ಹೇಳಿದರು: ಓ ಪ್ರಜೆಗಳೇ! ನಿಮ್ಮ ಮೇಲೆ ನಮಗೆ ಕೆಲವು ಹಕ್ಕುಗಳಿವೆ, ಆದ್ದರಿಂದ ನಾವು ಇಲ್ಲದಿರುವಾಗಲೂ ನೀವು ನಮ್ಮನ್ನು ಚೆನ್ನಾಗಿ ನಡೆಸಿಕೊಳ್ಳಬೇಕು. ಇದು ನಮ್ಮ ಹಕ್ಕು, ಸರ್ಕಾರದ ಹಕ್ಕು, ಪ್ರಜೆಗಳು ಸರ್ಕಾರವನ್ನು ಚೆನ್ನಾಗಿ ನಡೆಸಿಕೊಳ್ಳಬೇಕು ಮತ್ತು ಒಳ್ಳೆಯ ಕಾರ್ಯಗಳಲ್ಲಿ ನಮಗೆ ಸಹಾಯ ಮಾಡಬೇಕು ಮತ್ತು ಅಲ್ಲಾಹನ ದೃಷ್ಟಿಯಲ್ಲಿ, ಇಮಾಮ್‌ನ ತಾಳ್ಮೆ ಮತ್ತು ಸೌಮ್ಯತೆಯು ಪ್ರಯೋಜನದ ವಿಷಯದಲ್ಲಿ ಹೆಚ್ಚು ಪ್ರಿಯ ಮತ್ತು ಮುಖ್ಯವಾಗಿದೆ. ಮತ್ತು ಇಮಾಮ್‌ನ ಅಜ್ಞಾನ ಮತ್ತು ಕಠೋರತೆಯನ್ನು ಅಲ್ಲಾಹನು ಹೆಚ್ಚು ಇಷ್ಟಪಡುವುದಿಲ್ಲ, ಮತ್ತು ಇಮಾಮ್ ಅಥವಾ ಅಮೀರ್‌ನ ಕರ್ತವ್ಯವೆಂದರೆ ಅವನು ತಾಳ್ಮೆ ಮತ್ತು ಸೌಮ್ಯನಾಗಿರಬೇಕು ಮತ್ತು ಕಠಿಣವಾಗಿರಬಾರದು, ಏಕೆಂದರೆ ಅದು ಅಜ್ಞಾನ. **(ಮುಂದುವರಿಯುವುದು)**

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

**MUSLIM TELEVISION AHMADIYYA INTERNATIONAL**
**www.mta.tv**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.